ಕಾರ್ಖಾನೆಯ ಸರ್ವತೋಮುಖ ಅಭಿವೃದ್ಧಿಯ ದೃಷ್ಟಿಯಿಂದ ಕಬ್ಬು ಬೆಳೆಗಾರರಿಗೆ ಕೊಡಬೇಕಾದ ಹಣವನ್ನು ತಕ್ಷಣ ಪಾವತಿ ಮಾಡಿ ರೈತರ ಶೋಷಣೆ ನಿವಾರಿಸುವುದರೊಂದಿಗೆ, ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆಯ ಮೇಲಿರುವ ಜನರ ವಿಶ್ವಾಸ ನಂಬಿಕೆ ಕಳೆದುಕೊಳ್ಳದಂತೆ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

ಶ್ರೀ ಆರ್. ಬಿ. ಪೋತದಾರ್.—ಮಾನ್ಯ ಅಧ್ಯಕ್ಷರೇ, ಈ ಸಕ್ಕರೆ ಕಾರ್ಖಾನೆಯ ಕ್ರಷಿಂಗ್ ಕಡಿಮೆ ಆಗಿದೆ. ರಿಕವರಿ ೮.೨ ರಷ್ಟು ಇದೆ. ಮೊನ್ನೆ ಅಲ್ಲಿಗೆ ಸ್ಪೆಷಲ್ ಡಿ. ಸಿ. ಗ್ರೇಡ್‌ನ ಅಧಿಕಾರಿ ಒಬ್ಬರನ್ನು ಎಂ. ಡಿ. ಆಗಿ ನೇಮಕ ಮಾಡಿದ್ದೇವೆ. ಇದರ ಜೊತೆಗೆ ಡೈರೆಕ್ಟರ್ ಆಫ್ ಷುಗರ್ ಅವರಿಗೆ ಸಹ ಪೇಮೆಂಟ್ ಮಾಡುವುದಕ್ಕೆ ಹಿಂಟ್ ಕೊಟ್ಟಿದ್ದೇವೆ. ಹಿಂದಿನ ವಾರ ಸಹ ಅಲ್ಲಿನ ಸ್ಥಾನಿಕ ಎಂ. ಎಲ್. ಎ. ಅವರು ಇದೇ ಪ್ರಶ್ನೆ ಕೇಳಿದ್ದರು. ಆದ್ದರಿಂದ ಬೇಗನೆ ಪೇಮೆಂಟ್ ಮಾಡುವುದಕ್ಕೆ ಹೇಳುತ್ತೇವೆ.

ವಿತ್ತೀಯ ಕಾರ್ಯಕಲಾಪಗಳು

೧೯೮೮-೮೯ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ

(ಬೇಡಿಕೆಗಳ ಕ್ರ. ಸಂ. ೩೫, ೩೬, ೪೪, ೫೦, ೫೧, ೫೨ ಮತ್ತು ೫೩)

(ಕಂದಾಯ ಯೋಜನೆ ಮತ್ತು ನೀರಾವರಿ ಇಲಾಖೆಗಳು)

ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ)— ಸನ್ಮಾನ್ಯ ಅಧ್ಯಕ್ಷರೇ ಈ ಸದನದಲ್ಲಿ ನೀರಾವರಿ ಮತ್ತು ರೆವಿನ್ಯೂ ಇಲಾಖೆಯ ಮೇಲೆ ಸಂಬಂಧಪಟ್ಟ ಮಂತ್ರಿಗಳು ಮಂಡಿಸಿರತಕ್ಕಂಥ ಬೇಡಿಕೆಯನ್ನು ನಾನು ಅನೇಕ ಲೋಪದೋಷದಿಂದಾಗಿ ವಿರೋಧಿಸಿ ನಾಲ್ಕು ಮಾತುಗಳನ್ನು ಆಡುವುದಕ್ಕೆ ಇಚ್ಛೆ ಪಡುತ್ತೇನೆ. ಅಧ್ಯಕ್ಷರೇ ಸರ್ಕಾರದ ಆಡಳಿತ ವ್ಯವಸ್ಥೆ ರೆವಿನ್ಯೂ ಇಲಾಖೆ ಏನಿದೆ ಇದು ಮುಖ್ಯವಾದಂಥ ಒಂದು ಇಲಾಖೆ. ಇದರ ಪ್ರಾಮುಖ್ಯತೆ ಬಹಳವಾಗಿದೆ. ಏಕೆಂದರೆ, ಈ ಪ್ರಾಮುಖ್ಯವಾದಂಥ ಇಲಾಖೆ ಸಮರ್ಪಕವಾಗಿ ಕೆಲಸವನ್ನು ನಿರ್ವಹಿಸದೇ ಹೋದರೆ ಬಹುಶಃ ತಮ್ಮ ಆಡಳಿತದಲ್ಲಿ ಹೆಚ್ಚಿನ ಲೋಪದೋಷ ಇದೆ ಎಂದು ಭಾವನೆ ಮಾಡಬೇಕಾಗುತ್ತದೆ. ಅದರ ಪರಿಣಾಮ ಜನರು ತುಂಬ ತೊಂದರೆಯನ್ನು ಅನುಭವಿಸಬೇಕಾಗುತ್ತದೆ. ಮೊದಲನೆಯದಾಗಿ, ಕಂದಾಯ ಇಲಾಖೆಯಲ್ಲಿ ಈ ಖಾತೆಗಳನ್ನು ಮಾಡತಕ್ಕಂಥ ಕಾರ್ಯಕ್ರಮ ಇದೆ. ಖಾತೆಗಳು ಅಂದರೆ ಜಮೀನುದಾರರು, ವ್ಯವಸಾಯಗಾರರೂ ನಮ್ಮ ರೈತರು ಅವರು ಹೊಂದಿರತಕ್ಕಂಥ ಭೂಮಿಯನ್ನು ಅವರ ಹೆಸರಿಗೆ ಖಾತೆ ಮಾಡತಕ್ಕಂಥ ಕಾರ್ಯಕ್ರಮ. ಇದು ಅನೇಕ ಸಂದರ್ಭಗಳಲ್ಲಿ ಉದ್ಭವವಾಗುತ್ತದೆ. ಒಬ್ಬರ ಆಸ್ತಿಯನ್ನು ಮತ್ತೊಬ್ಬರು ಕೊಂಡಾಗ ಇಲ್ಲದೇ ಹೋದರೆ ಸರ್ಕಾರಿ ಭೂಮಿಯನ್ನು ದರಖಾಸ್ತು ಮೂಲಕ ಪಡೆದಂಥ ಸಂದರ್ಭದಲ್ಲಿ ಇಲ್ಲವೇ ಅಣ್ಣ ತಮ್ಮಂದಿರು ವಿಭಾಗವಾಗತಕ್ಕಂಥ ಸಂದರ್ಭದಲ್ಲಿ ಆ ಭೂಮಿಯ ಒಡೆತನ ಯಾರದು ಎಂದು ನಿರ್ಧಾರ ಮಾಡತಕ್ಕಂಥ ಪ್ರಮುಖವಾದಂಥ ದಾಖಲೆ ಅದು. ಆ ದಾಖಲೆ ಸರಿಯಿಲ್ಲದೇ ಹೋದರೆ ಭೂಮಿ ಯಾರ ಸುಪರ್ದಿನಲ್ಲಿದೆ ಎನ್ನುವಂಥ ದೊಡ್ಡ ವಿವಾದಕ್ಕೆ ಒಳಗಾಗಿ ಹೊಡೆದಾಟ, ಕೊಲೆ, ಸುಲಿಗೆ, ವ್ಯಾಜ್ಯಗಳಿಗೆ ಕಾರಣವಾಗತಕ್ಕಂಥ ಪರಿಸ್ಥಿತಿ ಇದೆ. ಆದುದರಿಂದ ಇಂತಹ ಪ್ರಾಮುಖ್ಯವಾದಂಥ ಖಾತೆ ದಾಖಲೆಯನ್ನು ಸರಿಯಾದ ರೀತಿಯಲ್ಲಿ ಇಡತಕ್ಕಂಥಾದ್ದು ರೆವಿನ್ಯೂ ಇಲಾಖೆಯ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಕರ್ತವ್ಯವಾಗಿದೆ. ಮಾನ್ಯ ಅಧ್ಯಕ್ಷರೆ, ಆಸ್ತಿ ಒಬ್ಬರಿಂದ ಮತ್ತೊಬ್ಬರಿಗೆ ಕ್ರಯದ ಮೂಲಕ ಪರಬಾರೆ ಆದಾಗ ಹತ್ತಾರು ವರ್ಷಗಳಾದರೂ ಸಹ ಅದು ಯಾರ ಸುಪರ್ದಿನಲ್ಲಿದೆ. ಯಾರಿಗೆ ವರ್ಗಾವಣೆಯಾಗಿದೆ ಎಂದು ಖಾತೆಯನ್ನು ಸರಿಯಾಗಿ ಮಾಡತಕ್ಕಂಥ ಕೆಲಸ ಇಷ್ಟಾದರೂ ಆಗಲಿಲ್ಲ. ಜನಸಂಪರ್ಕ ಸಭೆಗಳನ್ನು ಕರೆದು, ಹಳ್ಳಿಗಳಿಗೆ ಹೋಗಿ ಖಾತೆಯಾಗದೇ ಇರತಕ್ಕಂಥಾದ್ದನ್ನು ಪಡೆದು ಆದಷ್ಟು ಬೇಗ ಮಾಡಬೇಕು ಎಂದು ಕ್ರಮ ತೆಗೆದುಕೊಂಡರೂ ಸಹ ಅನೇಕ ಸಂದರ್ಭಗಳಲ್ಲಿ ಖಾತೆಗಳಲ್ಲಿ ಅವರ ಹೆಸರು ಇಲ್ಲದೆ ಅನೇಕ ವ್ಯಾಜ್ಯಗಳಿಗೆ ಕಾರಣವಾಗಿರತಕ್ಕಂಥ ಸನ್ನಿವೇಶವಿದೆ. ಆದುದರಿಂದ ಆಸ್ತಿ ಒಬ್ಬರಿಂದ ಮತ್ತೊಬ್ಬರಿಗೆ ಪರಭಾರೆಯಾದಾಗ, ರಿಜಿಸ್ಟರ್ ಆದಾಗ, ಜಮೀನನ್ನು

ತೆಗೆದುಕೊಂಡಾಗ ಮಂಜೂರು ಚೀಟಿ ಪಡೆದ ಮೇಲೆ ಮ್ಯುಟೇಷನ್ ಸ್ಲಿಪ್ ಸಂಬಂಧಪಟ್ಟ ಅಧಿಕಾರಿಗಳಿಗೆ ಹೋಗುತ್ತದೆ, ಆ ರೀತಿ ಹೋದಂಥ ಸಂದರ್ಭದಲ್ಲಿ ಅವರು ಮ್ಯುಟೇಷನ್ ಅಕ್ಸೆಪ್ಟ್ ಮಾಡಿಕಳಿಸಿದರೆ ಖಾತೆ ಸುಲಭವಾಗಿ ಆಗುತ್ತದೆ. ಒಂದು ಡಾಕ್ಯುಮೆಂಟ್ ರಿಜಿಸ್ಟರ್ ಆಗಬೇಕಾದರೆ ರಿಜಿಸ್ಟರ್ ಆಗತಕ್ಕಂಥ ಕಾಲದಲ್ಲಿ ಆಸ್ತಿ ಯಾವ ರೀತಿ ಬಂತು ಎಂದು ನೋಡತಕ್ಕಂಥ ದಾಖಲೆಯನ್ನು ಕೊಡಬೇಕಾಗುತ್ತದೆ, ಪಹಣಿಯನ್ನು ಕೊಡಬೇಕಾಗುತ್ತದೆ. ಇಷ್ಟೆಲ್ಲಾ ಟೈಟಲ್‌ಡೀಡ್, ಪಹಣಿ ಕೊಟ್ಟು ರಿಜಿಸ್ಟರ್ ಆದ ಮೇಲೆ ಮ್ಯುಟೇಷನ್ ಸ್ಲಿಪ್ ಹೋದಾಗ ವರ್ಷಾನುಗಟ್ಟಲೆ ವಿಳಂಬವಾಗುವುದಕ್ಕೆ ಕಾರಣವಾದರೂ ಏನು? ಆದುದರಿಂದ ಇನ್ನು ಮುಂದಾದರೂ ಖಾತೆಯನ್ನು ಮಾಡುವುದರಲ್ಲಿ ವಿಳಂಬವಾಗುವುದು ಏನಿದೆ ಇದನ್ನು ಆದಷ್ಟು ಬೇಗ ಸರ್ಕಾರ ಪರಿಹರಿಸಬೇಕು. ವಿಳಂಬವಾಗಲು ಕಾರಣವಾಗಿರತಕ್ಕಂಥ ಸಂದರ್ಭವನ್ನು ಹೋಗಲಾಡಿಸಿ ಆದಷ್ಟು ಬೇಗ ಖಾತೆಯಾಗುವಂತೆ ಮಾಡಬೇಕು. ಭೂಮಿಯನ್ನು ಕೊಂಡಂಥ ಸಂದರ್ಭದಲ್ಲಿ ಮತ್ತೆ ದರಖಾಸ್ತು ಮೂಲಕ ಬಂದಿರತಕ್ಕಂಥ ಸಂದರ್ಭದಲ್ಲಿ ಮ್ಯುಟೇಷನ್‌ನ್ನು ಬೇಗ ಅಕ್ಸೆಪ್ಟ್ ಮಾಡಿ ಖಾತೆಯನ್ನು ಮಾಡತಕ್ಕಂಥ ಕೆಲಸವನ್ನು ಸರ್ಕಾರ ಚುರುಕುಗೊಳಿಸಬೇಕು, ಈ ಬಗ್ಗೆ ಸಂಬಂಧಪಟ್ಟ ಇಲಾಖೆಗೆ ತಿಳಿಸಬೇಕು ಎಂದು ಕೇಳಿಕೊಳ್ಳುತ್ತೇನೆ. ಎರಡನೆಯದಾಗಿ ಪಹಣಿ ಬಹಳ ಮುಖ್ಯವಾದಂಥ ದಾಖಲೆ. ಪಹಣಿ ದಾಖಲೆ ಅಂದರೆ ಯಾರ ಭೂಮಿಯಲ್ಲಿ ರೈತ ಏನೇನು ಬೆಳೆ ಇಟ್ಟಿದ್ದಾನೆ ಎನ್ನುವುದನ್ನು ನಿರ್ಧಾರ ಮಾಡತಕ್ಕಂಥ ದಾಖಲೆ ರಾಜ್ಯದಲ್ಲಿ ಎಷ್ಟು ಭೂಪ್ರದೇಶದಲ್ಲಿ ರೈತರು ಯಾವ ಯಾವ ಬೆಳೆಯನ್ನು ಇಟ್ಟಿದ್ದಾರೆ, ಎಷ್ಟು ಉತ್ಪಾದನೆ ಬಂತು ಎಂದು ನಿರ್ಧಾರ ಮಾಡತಕ್ಕಂಥ ಪ್ರಾಮುಖ್ಯವಾದಂಥ ದಾಖಲೆ. ಮೊದಲು ಹಳ್ಳಿಗಳಲ್ಲಿ ಶ್ಯಾನುಭೋಗರು ಇರುತ್ತಿದ್ದರು. ೨-೩ ಹಳ್ಳಿಗಳಿಗೆ ಶ್ಯಾನುಭೋಗರು ಇರುತ್ತಿದ್ದರು. ಅವರು ಹಿಂಗಾರು-ಮುಂಗಾರು ಬೆಳೆ ಬಂದಾಗ ಹೋಗುತ್ತಿದ್ದರು. ಅವರು ಇರತಕ್ಕಂಥ ದಾಖಲೆಗಳನ್ನು ತೆಗೆದುಕೊಂಡು ನೇರವಾಗಿ ಖುದ್ದಾಗಿ ಹೋಗಿ ಖುಷ್ಕಿ ಭೂಮಿಯಲ್ಲಿ, ತರಿ ಭೂಮಿಯಲ್ಲಿ ಯಾವ ಯಾವ ರೈತ, ಯಾವ ಬೆಳೆಯನ್ನು ಇಟ್ಟಿದ್ದಾನೆ ಎಂದು ಪರಿಶೀಲನೆ ಮಾಡಿ ಪಹಣಿ ದಾಖಲೆ ಮಾಡುತ್ತಾ ಇದ್ದರು. ಇವತ್ತಿನ ದಿವಸ ರೆವಿನ್ಯೂ ಸೆಕ್ರೆಟರಿಗಳ ಕಾಲ ಬಂದ ಮೇಲೆ, ಯಾರ್‍ಯಾರ ಜಮೀನು ಎಲ್ಲೆಲ್ಲಿದೆ ಎನ್ನುವ ದಾಖಲೆ ಅವರ ಹತ್ತಿರ ಸರಿಯಾಗಿ ಇಲ್ಲ. ಮತ್ತೆ ರೈತರು ಏನು ಬೆಳೆ ಇಟ್ಟಿದ್ದಾರೆ ಅದನ್ನು ಹೋಗಿ ನೋಡಿ ಬರೆಯುವಂಥ ವ್ಯವಧಾನ ಇವರಿಗೆ ಇಲ್ಲ ರೂಮಿನಲ್ಲಿ, ಮನೆಯಲ್ಲಿ ಹೋಟೆಲಿನಲ್ಲಿ ಅಥವಾ ಅಶ್ವತ್ಥ ಕಟ್ಟೆಯಲ್ಲಿ ಕೂತುಕೊಂಡು ತಮ್ಮ ಮನಸ್ಸಿಗೆ ಬಂದಾಗೆ ಪಹಣಿಗಳನ್ನು ಬರೆಯುತ್ತಾರೆ. ಖುಷ್ಕಿ ಭೂಮಿಯಲ್ಲಿ ಉರುಳಿ, ಜೋಳ. ತರೀ ಭೂಮಿಯಲ್ಲಿ ಭತ್ತ, ಕಬ್ಬು, ಗಿಡಗಳನ್ನು ಕೂಡ ತೆಗೆಯದೇ ಇರತಕ್ಕ ಭೂಮಿಯಲ್ಲಿ ತೊಗರಿ, ಉರುಳಿ ಜೋಳ ಇದೆ ಎಂದು ಬರೆಯುತ್ತಾರೆ. ಪಹಣಿ ಆಧಾರದ ಮೇಲೆ, ಯಾವ ಯಾವ ಜಮೀನಿನಲ್ಲಿ ಯಾವ ಯಾವ ಬೆಳೆ ಇದೆ, ಎಷ್ಟು ಪ್ರಮಾಣದಲ್ಲಿ ಬೆಳೆ ಬಂದಿದೆ ಎಂಬುದು ಗೊತ್ತಾಗುತ್ತದೆ. ಆದರೆ, ಇವತ್ತಿನ ಪರಿಸ್ಥಿತಿಯಲ್ಲಿ ನಿಜವಾದ ದಾಖಲೆ ಸಿಗುವುದು ಕಷ್ಟವಾಗಿದೆ. ಭೂ ಸುಧಾರಣ ಕಾನೂನು ಬಂದ ಮೇಲಂತೂ ಇದರಿಂದ ಬಹಳ ಅನ್ಯಾಯ ಗೇಣಿದಾರರಿಗೆ ಅನ್ಯಾಯವಾಗಿದೆ ಸುಳ್ಳು ಪಹಣಿಗಳನ್ನು ಸೃಷ್ಟಿ ಮಾಡತಕ್ಕ ಬ್ರಹ್ಮರು ರೆವಿನ್ಯೂ ಕಾರ್ಯದರ್ಶಿಗಳಾಗಿದ್ದಾರೆ. ಸರ್ಕಾರದವರು ಸಂಬಂಧಪಟ್ಟ ಕಾರ್ಯದರ್ಶಿಗಳು ಫೀಲ್ಡಿಗೆ ಹೋಗಿ ರೈತರು ಏನು ಬೆಳೆ ಇಟ್ಟಿದ್ದಾರೆಂಬುದನ್ನು ಖುದ್ದು ನೋಡಿ ಬರೆಯುವಂಥ ವ್ಯವಸ್ಥೆ ಮಾಡಬೇಕು, ಇದರಲ್ಲಿ ಆಗತಕ್ಕ ಲೋಪದೋಷಗಳನ್ನು ಹೋಗಲಾಡಿಸುವ ಬಗ್ಗೆ ಸರ್ಕಾರದವರು ಗಮನಹರಿಸಬೇಕೆಂದು ಹೇಳುತ್ತೇನೆ.

ಸರ್ಕಾರದವರು ಅನೇಕ ಕಾರ್ಯಗಳಿಗಾಗಿ ವ್ಯವಸಾಯದ ಭೂಮಿಯನ್ನು ಸ್ವಾಧೀನ ಮಾಡಿಕೊಳ್ಳುತ್ತಾರೆ. ನಿವೇಶನಗಳಿಗಾಗಿ, ಆಸ್ಪತ್ರೆಗಳಿಗಾಗಿ ಶಾಲಾ ಕಟ್ಟಡಗಳಿಗಾಗಿ ರಸ್ತೆಗಳಿಗಾಗಿ ರೈತರ ಬೆಲೆ ಬಾಳತಕ್ಕ ಭೂಮಿಯನ್ನು ಅಕ್ವೈರ್ ಮಾಡಿಕೊಳ್ಳುತ್ತಾರೆ. ಈ ರೀತಿ ಅಕ್ವೈರ್ ಮಾಡುವಂಥ ವಿಧಾನ ಮತ್ತು ನಿಯಮಾವಳಿಗಳು ಏನಿದೆ ಇದರಿಂದ ಅಕ್ವಿಜಿಷನ್ ಪ್ರೊಸೀಡಿಂಗ್ಸ್ ನಿಧಾನವಾಗುತ್ತಿದೆ. ನನ್ನ ತಾಲ್ಲೂಕಿನಲ್ಲಿ ಬೈರಸಂದ್ರ ವಿಲೇಜ್‌ಗೆ ಸಂಬಂಧಪಟ್ಟಂತೆ ೪೦ ವರ್ಷಗಳ ಹಿಂದೆ ಅಕ್ವಿಜಿಷನ್ ಪ್ರಾರಂಭವಾಗಿದ್ದು, ಇನ್ನು ಮುಗಿದಿಲ್ಲ, ಅಕ್ವಿಜಿಷನ್ ಮಾಡಿದಮೇಲೆ ಅದರ ಉಪಯೋಗ ಸಾರ್ವಜನಿಕರಿಗೆ ಅನುಕೂಲವಾಗಬೇಕು. ಅಕ್ವಿಜಿಷನ್ ಪ್ರೊಸೀಡಿಂಗ್ಸ್ ಡಿಲೇ ಆಗುವುದನ್ನು ತಪ್ಪಿಸಿ ಬೇಗ ಆಗುವಂತೆ ಮಾಡಬೇಕೆಂದು ಹೇಳುತ್ತೇನೆ. ಅಕ್ವಿಜಿಷನ್ ಮಾಡುವ ಮೊದಲು ಬೆಲೆ

ನಿಗದಿ ಮಾಡುವಾಗ ಸರಿಯಾದ ಬೆಲೆಯನ್ನು ನಿಗದಿ ಮಾಡುವುದಿಲ್ಲ, ಅಲ್ಲದೆ ನಿಗದಿ ಮಾಡಿದಂಥ ಬೆಲೆಯನ್ನು ಸಕಾಲದಲ್ಲಿ ಕೂಡ ಪಾವತಿ ಮಾಡುತ್ತಿಲ್ಲ. ಎಷ್ಟೋ ಸಂದರ್ಭಗಳಲ್ಲಿ ಬೆಲೆ ಬಾಳತಕ್ಕ ಭೂಮಿಯನ್ನು ಕಡಿಮೆ ಬೆಲೆಗೆ ಗೊತ್ತು ಮಾಡುವಂಥ ಸಂದರ್ಭಗಳು ಉಂಟು. ಸ್ಥಳೀಯವಾಗಿ ೧೦,೦೦೦ ಬೆಲೆ ಇದ್ದರೆ, ಬರೀ ಎರಡು ಸಾವಿರ ಬೆಲೆಗೆ ತೆಗೆದುಕೊಳ್ಳುವುದರಿಂದ. ರೈತರು ಕೋರ್ಟುಗಳಿಗೆ ಹೋಗಿ, ಇದರಿಂದ ವಿಳಂಬವಾಗುತ್ತದೆ. ಮಾರುಕಟ್ಟೆಯಲ್ಲಿ ಇರತಕ್ಕ ಬೆಲೆಗೆ ಭೂಮಿಯನ್ನು ಕೊಳ್ಳುವಂಥ ವ್ಯವಸ್ಥೆ ಮಾಡಬೇಕು.

ಇನ್ನು ಶಾಲಾ ಮಕ್ಕಳಿಗೆ ಸರ್ಟಿಫಿಕೇಟ್‌ಗಳನ್ನು ಇಷ್ಯೂ ಮಾಡತಕ್ಕ ಒಂದು ಕೆಲಸ ರೆವಿನ್ಯೂ ಸೆಕ್ರೆಟರಿಗಳಿಗೆ, ಇನ್ಸ್‌ಪೆಕ್ಟರುಗಳಿಗೆ ಸೇರಿದೆ. ಸ್ಕಾಲರ್‌ಷಿಪ್ ಪಡೆಯಬೇಕಾದರೆ. ಸ್ಟೈಟ್ ಪಡೆಯ ಬೇಕಾದರೆ, ಮನೆ ಪಡೆಯಬೇಕಾದರೆ, ಸರ್ಟಿಫಿಕೇಟ್ ದಾಖಲೆ ಬಹಳ ಮುಖ್ಯವಾದುದು. ಅದನ್ನು ಪಡೆಯಬೇಕಾದರೆ, ಅನೇಕ ತೊಡಕುಗಳು ಇದ್ದು. ಇದರಿಂದ ಅನೇಕ ರೀತಿಯ ತೊಂದರೆಗಳು ಆಗಿವೆ. ಶಾಲೆಗೆ ಸೇರುವಾಗ, ಉದ್ಯೋಗಕ್ಕೆ ಅರ್ಜಿ ಹಾಕುವಾಗ ಸಕಾಲದಲ್ಲಿ ಸರ್ಟಿಫಿಕೇಟುಗಳು ದೊರೆಯದೆ ಬಹಳ ಜನ ತೊಂದರೆಗೆ ಗುರಿಯಾಗಿದ್ದಾರೆ.

ಕೇವಲ ೨ ನಿಮಿಷದಲ್ಲಿ ಕೊಡತಕ್ಕ ಒಂದು ಸರ್ಟಿಫಿಕೇಟ್‌ಗೆ ೨-೩ ದಿವಸ ಅಥವಾ ಕೆಲವು ಸಂದರ್ಭ ಗಳಲ್ಲಿ ವಾರಗಟ್ಟಲೆ ರೈತರು ತಮ್ಮ ಕೆಲಸಕಾರ್ಯಗಳನ್ನು ಬಿಟ್ಟು ತಾಲೂಕು ಆಫೀಸುಗಳಿಗೆ ತಿರುಗತಕ್ಕ ವ್ಯವಸ್ಥೆಯನ್ನು ತಪ್ಪಿಸಬೇಕೆಂದು ನಾನು ಸರ್ಕಾರದವರಲ್ಲಿ ಪ್ರಾರ್ಥಿಸುತ್ತೇನೆ.

ಇನ್ನು ಹಂಗಾಮಿಯಾಗಿ ಅಕ್ವೈರ್ ಮಾಡಿದಂಥ ಜಮೀನನ್ನು ವಾಪಸು ಕೊಡುವುದಕ್ಕೆ ಸರ್ಕಾರ ಒಪ್ಪಿಕೊಳ್ಳಬೇಕಾಗುತ್ತದೆ. ಏಕೆಂದರೆ ಇದಕ್ಕೆ ಕಾರಣಗಳು ಅನೇಕವಿವೆ.

ಮಾನ್ಯ ಅಧ್ಯಕ್ಷರೆ, ಇನ್ನು ಶ್ಯಾನುಭೋಗರು, ಪಟೇಲರು, ತೋಟಿ ತಳವಾರರಿಗೆ ಭತ್ಯೆಯನ್ನು ಕೊಡತಕ್ಕ ಕಾನೂನು ಇದೆ. ಹಿಂದೆ ಇದ್ದಂಥ ಶ್ಯಾನುಭೋಗರು. ಪಟೇಲರು ಇವತ್ತು ಬಹಳ ಕಷ್ಟ ಪರಿಸ್ಥಿತಿಯಲ್ಲಿದ್ದಾರೆ. ಪಟೇಲರಿಗೆ ೧೦೦ ರೂಪಾಯಿ, ತೋಟಿ ತಳವಾರರಿಗೆ ೬೦ ರೂಪಾಯಿ ಅನುಕಂಪ ಧನವನ್ನು ತಾವು ಕೊಡುತ್ತಿದ್ದೀರಿ, ಮತ್ತು ಇತ್ತೀಚೆಗೆ ನೇಮಕ ಮಾಡಿಕೊಂಡಿರತಕ್ಕ ಗ್ರಾಮಸಹಾಯಕರಿಗೆ ೩೦೦ ರೂಪಾಯಿಗಳನ್ನು ಕೊಡತಕ್ಕ ವ್ಯವಸ್ಥೆ ಇದೆ. ಆದರೆ ಕಳೆದ ಸುಮಾರು ೧೨ ತಿಂಗಳಿಂದ ಈ ಪಟೇಲರು. ಶ್ಯಾನುಭೋಗರು ಮತ್ತು ತೋಟಿ ತಳವಾರರಿಗೆ ಕೊಡಬೇಕಾದ ಹಣ ವನ್ನು ಇನ್ನೂ ಸಂದಾಯ ಮಾಡಿಲ್ಲ. ತಾವು ಅನುಕಂಪದ ಮೇಲೆ ಕೊಡತಕ್ಕ ಹಣದ ವ್ಯವಸ್ಥೆ ಈ ರೀತಿ ಇದೆ. ಹೀಗಾದರೆ ನೀವು ಅವರ ಮೇಲೆ ಯಾವರೀತಿಯ ಅನುಕಂಪವನ್ನು ತೋರಿಸಿದಂತಾಗುತ್ತ ದೆಂಬುದನ್ನು ತಾವೇ ಯೋಚನೆ ಮಾಡಬೇಕು. ಇದು ಹೇಗಾಗಿದೆ ಎಂದರೆ ಬಹಳ ಅಕ್ಕರೆ ಜಾಸ್ತಿ ಯಾಗಿದೆ. ಬಹಳ ಅಕ್ಕರೆಯುಳ್ಳ ತಾಯಿಗೆ ಮೊಲೆಯಲ್ಲಿ ಹಾಲು ಇಲ್ಲದಿದ್ದರೆ ಏನೂ ಪ್ರಯೋಜನ ವಾಗುವುದಿಲ್ಲ...

ಶ್ರೀ ಎಸ್. ಆರ್. ಬೊಮ್ಮಾಯಿ.—ಅವರಿಗೆ ೬೦ ರೂಪಾಯಿ ಅಲ್ಲ. ತಿಂಗಳಿಗೆ ೩೦೦ ರೂಪಾಯಿಗೆ ಏರಿಸಿದ್ದೇವೆ. ನಿಮ್ಮ ತಾಲ್ಲೂಕಿನಲ್ಲಿ ಎಲ್ಲಾದರೂ ಯಾರಿಗಾದರೂ ಸಂಬಳವನ್ನು ಕೊಟ್ಟಿಲ್ಲ ದಿದ್ದರೆ ಹೇಳಿ, ಅದನ್ನು ಕೊಡಿಸೋಣ.

ಶ್ರೀ ಬಿ. ಲಕ್ಕಪ್ಪ.—ಹೆಚ್ಚಿಗೆ ಮಾಡಿದ್ದೇವೆಂದು ಹೇಳುತ್ತಿದ್ದೀರಿ, ಸಂತೋಷ. ಆದರೆ ನನ್ನ ತಾಲ್ಲೂಕಿನಲ್ಲಿ. ಅಂದರೆ ಚಿಕ್ಕನಾಯಕನ ಹಳ್ಳಿ, ತಿಪಟೂರು ಮತ್ತು ತುರುವೇಕೆರೆ ತಾಲ್ಲೂಕುಗಳಲ್ಲಿ ಇದು ನಡೆದಿದೆ. ಆದ್ದರಿಂದ ತಾವು ಇದರ ಬಗ್ಗೆ ಗಮನ ಹರಿಸಿ ಅವರಿಗೆ ಆಗಿರುವ ತೊಂದರೆಯನ್ನು ತಪ್ಪಿಸಬೇಕು ಅನುಕಂಪದ ಭತ್ಯೆಯನ್ನು ಏನು ಕೊಡುತ್ತಿದ್ದೀರಿ ಅದನ್ನು ಸಕಾಲದಲ್ಲಿ ಅವರಿಗೆ ಕೊಡತಕ್ಕ ವ್ಯವಸ್ಥೆ ಆಗಬೇಕು,

ಮಾನ್ಯ ಅಧ್ಯಕ್ಷರೆ, ಇವತ್ತು ರೈತರ ಪರಿಸ್ಥಿತಿ ಏನಾಗಿದೆ ಎನ್ನುವ ಬಗ್ಗೆ ನಾನು ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಸರ್ಕಾರದಲ್ಲಿ ಸರ್ವೆ ಇಲಾಖೆ ಎಂಬುದು ಒಂದು ಇದೆ. ಇದು ನಿಮ್ಮ ರೆವಿನ್ಯೂ ಇಲಾಖೆಯಲ್ಲಿದೆ. ಇದು ಬಹಳ ದೊಡ್ಡ ಇಲಾಖೆ. ಬಹಳ ಪ್ರಮುಖವಾದ ಇಲಾಖೆ. ರಾಜ್ಯದಲ್ಲಿರತಕ್ಕ ಜಮೀನು ಎಷ್ಟಿದೆ ಎಂಬುದನ್ನು ಅಳತೆ ಮಾಡಿ ಅದಕ್ಕೆ ನಂಬರ್‌ಗಳನ್ನು ಕೊಟ್ಟು ನಿಖರವಾಗಿ ಹೇಳತಕ್ಕ ದಾಖಲೆಗಳನ್ನು ಒದಗಿಸತಕ್ಕ ಇಲಾಖೆ, ಇದು. ಮೊದಲು ಇದ್ದಂಥ ಪಹಣಿ-

ಕಲ್ಲು, ಉದಿ, ಬಾಂದು ಇವುಗಳು ಇವತ್ತು ಎಷ್ಟೋ ರೈತರ ಹೊಲಗಳಲ್ಲಿ ಇಲ್ಲ. ಇದು ಏಕೆ ಹೀಗಾಯಿತು ಎಂದರೆ ಹಿಂದೆ ಭೂಮಿ ಹೆಚ್ಚಿಗೆ ಇತ್ತು, ಜನಸಂಖ್ಯೆ ಕಡಿಮೆ ಇತ್ತು. ಆಗ ರೈತರು ತಮ್ಮ ತಮ್ಮ ಹೊಲಗಳಿಗೆ ಪಹಣಿ ಕಲ್ಲು, ಬಾಂದುಗಳನ್ನು ಹೊಂದಿದ್ದರು. ಅವುಗಳನ್ನು ಯಾರೂ ಕೂಡ ಕಿತ್ತು ಹಾಕುವಂತಿರಲಿಲ್ಲ. ಒಂದು ವೇಳೆ ಯಾರಾದರೂ ಇವುಗಳನ್ನು ಕಿತ್ತು ಹಾಕಿದರೆ ಅಂಥ ವರಿಗೆ ಶಿಕ್ಷೆಯಾಗುತ್ತಿತ್ತು. ಆದರೆ ಈಗ ಎಲ್ಲೂ ಕೂಡ ಈ ಪಹಣಿ ಕಲ್ಲುಗಳಿಲ್ಲ. ಇವತ್ತು ರೈತರು ತಮ್ಮ ತಮ್ಮ ಜಮೀನುಗಳ ಗುರ್ತಿಗೋಸ್ಕರ ಬದುಗಳನ್ನು ಹಾಕಿಕೊಂಡಿರುವುದನ್ನು ನಾವು ನೋಡ ಬಹುದಷ್ಟೆ. ಅದೂ ಇಲ್ಲದಿದ್ದರೆ ಪಕ್ಕದ ಜಮೀನಿನವನು ಜೋರಾಗಿದ್ದರೆ ಎನ್‌ಕ್ರೋಚ್‌ಮೆಂಟ್ ಮಾಡಿಕೊಳ್ಳುತ್ತಾನೆ. ನಂತರ ಒಬ್ಬರಿಗೊಬ್ಬರಿಗೆ ಹೊಡೆದಾಟ ಬಡಿದಾಟಗಳಾಗಿ ಕೊಲೆಗಳು ಆಗು ತ್ತವೆ. ಇದರಿಂದಾಗಿ ಇವತ್ತು ಸಾಮಾನ್ಯವಾಗಿ ಪ್ರತಿಯೊಂದು ಹಳ್ಳಿಗಳಲ್ಲೂ ಪಾರ್ಟಿ-ಪಂಗಡಗಳಾಗು ತ್ತಿವೆ, ತನ್ನ ಜಮೀನನ್ನು, ತನ್ನ ಪಕ್ಕದ ಜಮೀನಿನವನು ಒತ್ತುವರಿ ಮಾಡಿದ್ದಾನೆ, ನನಗೆ ಅನ್ಯಾಯವಾಗಿದೆಯೆಂದು ಒಬ್ಬ ವ್ಯಕ್ತಿ ಒಂದು ಅರ್ಜಿಯನ್ನು ಕೊಟ್ಟರೆ ಅದನ್ನು ನಿಮ್ಮ ಸರ್ವೆ ಇಲಾಖೆ ಯವರು ಹೋಗಿ ಅಳತೆ ಮಾಡಿ ಹದ್ದುಬಸ್ತನ್ನು ತೋರಿಸಿಕೊಟ್ಟು ಬರಬೇಕು. ಸರ್ವೆ ಇಲಾಖೆ ಯವರು ಈ ಕೆಲಸವನ್ನು ಸಕಾಲದಲ್ಲಿ ಮಾಡದಿದ್ದರೆ ಅಲ್ಲಿ ಮಳೆ ಬಂದಿರುತ್ತದೆ, ನಿಧಾನ ಮಾಡಿದರೆ ಭೂಮಿ ಒಣಗಿಹೋಗುತ್ತದೆ, ಮತ್ತೆ ಉಳುಮೆ ಮಾಡುವುದಕ್ಕಾಗದೆ ಆ ರೈತ ಹಾಳಾಗಿ ಹೋಗುತ್ತಾನೆ. ಇದು ಆಗಬಾರದು. ಸ್ವಾಮಿ, ಕೇವಲ ಒಂದು ದೋಣಿಗೆರೆ ಜಮೀನಿಗೋಸ್ಕರ ರೈತರು ಒಬ್ಬರಿಗೊಬ್ಬರು ಹೊಡೆದಾಡಿ ಕೊಲೆಯಾಗಿರತಕ್ಕದ್ದನ್ನು ನಾನು ನೋಡಿದ್ದೇನೆ. ಆದ್ದರಿಂದ ನಿಷ್ಪಕ್ಷಪಾತವಾಗಿ ಆದಷ್ಟು ಜಾಗ್ರತೆಯಾಗಿ ಅಳತೆ ಮಾಡಿಸಿ ಪಹಣಿ ಕಲ್ಲನ್ನು ಅವರ ಹದ್ದುಬಸ್ತಿಗೆ ಎಲ್ಲಿಗೆ ಬರುತ್ತದೆಂಬುದನ್ನು ನಿರ್ಣಯ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ಇಲ್ಲವಾದರೆ ಏನಾಗುತ್ತದೆಂದರೆ ಬಹುಶಃ ನಮ್ಮ ದೇಶದಲ್ಲಿ ಲಂಚವನ್ನು ತೆಗೆದುಕೊಳ್ಳತಕ್ಕಂಥದ್ದು ೧೦೦ಕ್ಕೆ ೧೦೦ ರಷ್ಟು ಇದೆ ಎನ್ನುವುದನ್ನು ನಾವು ಎಲ್ಲಾ ಒಪ್ಪಿಕೊಳ್ಳುತ್ತೇವೆ. ಆದರೂ ಅದನ್ನು ಒಂದೇ ಇಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇದು ಕಣ್ಣಿಗೆ ಕಾಣದೆ ಇರತಕ್ಕಂಥದ್ದು. ಹೇಗೆ ದೇವರನ್ನು ಕಣ್ಣಿಗೆ ಕಾಣುವುದಕ್ಕೆ ಸಾಧ್ಯವಿಲ್ಲವೋ ಅದೇ ರೀತಿಯಲ್ಲಿ ಲಂಚವನ್ನ ತಕ್ಕಂಥದ್ದು ಕೈಗೆ ಸಿಕ್ಕದಿರುವ ವಸ್ತುವಾಗಿದೆ. ಕಣ್ಣಿಗೆ ಕಂಡರೂ ಸಹ ಏನೂ ಮಾಡಲು ಸಾಧ್ಯವಾಗದೇ ಮೂಕರಾಗಿರತಕ್ಕಂಥ ಪರಿಸ್ಥಿತಿಯಲ್ಲಿ ನಾವು ಇದ್ದೇವೆ. ಪ್ರಜಾ ಪ್ರಭುತ್ವ ರಾಷ್ಟ್ರದಲ್ಲಿ ಏನು ಮಾಡಲಿಕ್ಕೂ ಆಗುವುದಿಲ್ಲ. ಒಬ್ಬ ಅಧಿಕಾರಿ ಲಂಚವನ್ನು ಕೇಳಿದರೆ, ಅವನು ಕೇಳುತ್ತಿದ್ದಾನೆಂದು ಹೇಳುವುದಕ್ಕೆ ಆಗುವುದಿಲ್ಲ. ಇದರಿಂದ ಕಾನೂನಿನ ದುರ್ಲಾಭವನ್ನು ಪಡೆಯುವುದಕ್ಕೋಸ್ಕರ ಜನ ಲಂಚವನ್ನು ಕೊಟ್ಟು ಕೆಲಸ ಆಗುವಂತೆ ಮಾಡಿ ಕೊಳ್ಳುತ್ತಾರೆ. ಕಾನೂನಿನ ಹಿನ್ನೆಲೆಯಲ್ಲಿ ಇವತ್ತು ಅಂಥವರಿಗೆ ಲಾಭವಾಗುತ್ತಿದೆ. ಇಂಥ ಸಂದರ್ಭದಲ್ಲಿ ಯಾರು ಹಣ ವನ್ನು ಕೊಟ್ಟು ಸರ್ವೆ ಅಧಿಕಾರಿಯನ್ನು ಇಟ್ಟುಕೊಳ್ಳುತ್ತಾರೋ ಅವರಿಗೆ ಲಾಭವಾಗುತ್ತದೆ. ಈರೀತಿ ಯಲ್ಲಿ ಒಂದು ಅಳತೆ ಮಾಡಿದಾಗ ಕೊನೆಗೆ ನಮ್ಮ ತಂದೆ ಕಾಲದ ಪಹಣಿ ಕಲ್ಲು ಇಲ್ಲೇ ಇತ್ತು ಎಂದು ಹೇಳುವುದು, ಸರ್ವೆ ಅಧಿಕಾರಿ ಅದನ್ನು ಇಲ್ಲಿಗೆ ಕೊಡಬೇಕೆಂದು ಹೇಳುವುದು, ಇಬ್ಬರು ಹಠಮಾಡಿ ಹೊಡೆದಾಟ ಬಡಿದಾಟಕ್ಕೆ ಕಾರಣವಾಗುವ ಸಂದರ್ಭಗಳು ವಿಶೇಷವಾಗಿರುತ್ತವೆ. ಆದ್ದರಿಂದ ಯಾವನೇ ರೈತ ಅರ್ಜಿಯನ್ನು ಕೊಟ್ಟರೆ ತಕ್ಷಣ ಸರ್ವೆ ಮಾಡಿ ಹದ್ದುಬಸ್ತಿಗೆ ತರತಕ್ಕಂಥದ್ದು ಮತ್ತು ಅಳತೆಯಲ್ಲಿ ಅನ್ಯಾಯವಾಗಿದೆ ಎಂದು ಹೇಳಿ ಮೇಲ್ ಮನವಿ ಬಂದಲ್ಲಿ, ಸರ್ಕಾರದವರು ಕಟ್ಟುನಿಟ್ಟಾಗಿ ಮೇಲ್ ಅಧಿಕಾರಿಗಳನ್ನು ಕಳುಹಿಸಿ ಕೆಳ ಅಧಿಕಾರಿ ಸರ್ವೆ ಮಾಡಿರುವುದರಲ್ಲಿ ಅನ್ಯಾಯ ಆಗಿದ್ದರೆ ಅವರ ಮೇಲೆ ಕಟ್ಟುನಿಟ್ಟಾದ ಕ್ರಮವನ್ನು ತೆಗೆದುಕೊಳ್ಳತಕ್ಕಂಥ ಮನಸ್ಸನ್ನು ತಾವು ಮಾಡಬೇಕು. ಇಲ್ಲದಿದ್ದರೆ ಕಾಯಿದೆ ಒಂದು ಕಡೆ ಆದರೆ ದಿನನಿತ್ಯ ವ್ಯವಹಾರ ಮತ್ತೊಂದು ಕಡೆ ಆದರೆ ಯಾವುದೇ ಕೆಲಸ ವ್ಯವಸ್ಥಿತವಾಗಿ ಆಗುವುದಿಲ್ಲ. ಮನುಷ್ಯ ಸದಾ ತನ್ನ ಜೀವನದಲ್ಲಿ ಕಾನೂನಿನ ಚೌಕಟ್ಟಿನಲ್ಲಿ ಬೈಂಡ್ ಆದಮೇಲೆ ಅದನ್ನು ಅನುಸರಿಸಬೇಕೆಂದು ನಾವು ಹೇಳಬೇಕಾಗುತ್ತದೆ. ಈ ದೃಷ್ಟಿಯಿಂದ ಅತಿ ಮುಖ್ಯ ವಾಗಿ ಇರತಕ್ಕಂಥದ್ದು ಒಂದು ವೇಳೆ ವ್ಯಾಜ್ಯ ವ್ಯವಹಾರ ಶುರುವಾಗುತ್ತದೆ. ಉದಾಹರಣೆಗೆ ಯಾವುದೋ ಒಂದು ಸರ್ವೆ ನಂಬರ್‌ನಲ್ಲಿ ದಾರಿ ವ್ಯಾಜ್ಯ ಬಂದಿತು, ಅಕ್ಕಪಕ್ಕದ ಜಮೀನುದಾರರಿಗೆ. ಒಂದು ಸರ್ವೆ ನಂಬರಿಗೆ ಒಂದುಕಡೆ ದಾರಿ ಕೊಟ್ಟುಬಿಟ್ಟಿರುತ್ತಾರೆ. ಈಗ ಇರತಕ್ಕಂಥ ೧೦-೨೦ ಅಥವಾ ೧೦೦-೨೦೦ ಎಕರೆ ದೊಡ್ಡ ದೊಡ್ಡ ಸರ್ವೆ ನಂಬರ್‌ಗಳಲ್ಲಿ ಅಣ್ಣತಮ್ಮಂದಿರಿಗೆ ಭಾಗವಾಗಿ ಮಾರಾಟ ವಾಗಿ ಅದರಲ್ಲಿ ಸಬ್‌ಡಿವಿಜನ್‌ಗಳಾಗಿ, ತುಂಡುಗಳಾಗಿ ಮುಂಭಾಗದಲ್ಲಿರುವ ಜಮೀನುಗಳಿಗೆ ದಾರಿ

ಇರುತ್ತದೆ. ಉಳಿದ ಭಾಗಗಳಿಗೆ ದಾರಿ ಇರುವುದಿಲ್ಲ. ದಾರಿ ಇಲ್ಲದಾಗ ಹಿಂದಿನ ಜಮೀನಿಗೆ ಹೋಗ ಬೇಕೆಂದರೆ ಮುಂದೆ ಇರುವವರು ದಾರಿ ಬಿಡುವುದಿಲ್ಲವೆಂದು ಹೇಳುತ್ತಾರೆ. ಆದ್ದರಿಂದ ಒಂದು ನಕಾಶೆ ಬೇಕಾಗುತ್ತದೆ. ನಕಾಶೆಯಿಂದ ದಾರಿ ಎಲ್ಲದೆ ಎಂದು ರೈತ ಕಾಣಬೇಕಾಗುತ್ತದೆ. ಇವತ್ತು ನಕಾಶೆ ಬೇಕೆಂದು ರೈತ ಅರ್ಜಿಯನ್ನು ಹಾಕಿದರೆ ನಕಾಶೆ ಹುಡುಕುವುದೇ ಕಷ್ಟವಾಗಿದೆ. ಅಕಸ್ಮಾತ್ ಪ್ರಿಂಟ್ ಆಗಿರುವಂಥ ಕೆಲವು ನಕಾಶೆಗಳು ಸಿಕ್ಕಿದರೂ ಒಳ್ಳೆಯ ಪೇಪರ್‌ನಿಂದ ತಯಾರಾಗಿರುವುದು ಇರುವುದಿಲ್ಲ. ಒಂದು ನಕಾಶೆ ಮಾಡಿದ ಮೇಲೆ ಅದು ನೂರಾರು ವರ್ಷಗಳು ಇರುವಂತಾದ್ದು. ಅದು ಬದಲಾವಣೆ ಯಾಗುವಂಥದ್ದಲ್ಲ ಆದ್ದರಿಂದ ಒಳ್ಳೆಯ ಪೇಪರ್‌ನಲ್ಲಿ ತಯಾರು ಮಾಡಬೇಕು. ರಾಜ್ಯದಲ್ಲಿರುವ ಎಲ್ಲಾ ಸರ್ವೆ ನಂಬರುಗಳ ನಕಾಶೆಯನ್ನು ಇಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ಮತ್ತೆ ಸರ್ವೆ ಯಾಗಿ ಬಹಳ ವರ್ಷಗಳಾಗಿರುತ್ತದೆ. ಒಮ್ಮೆ ಜಮೀನು ಪುನರ್ ಸರ್ವೆ ಮಾಡಿದಾಗ ಸಣ್ಣ ಸಣ್ಣ ಹಿಡುವಳಿ ಏನು ಇದೆ ಅವು ಪ್ರತಿಯೊಂದಕ್ಕೂ ದಾರಿ ಕಡ್ಡಾಯವಾಗಿ ಬರಬೇಕು. ಮತ್ತೆ ಪಕ್ಕದ ಒಂದು ಜಮೀನಿನಲ್ಲಿ ಒಂದು ಬಾವಿ ಇದ್ದು ಅಲ್ಲಿಂದ ಮಧ್ಯೆದಲ್ಲಿ ಇನ್ನೊಬ್ಬರ ಜಮೀನು ಇದ್ದು ಅದರ ಪಕ್ಕದಲ್ಲಿ ಮೂರನೆಯವರ ಜಮೀನು ಇದ್ದಲ್ಲಿ ಪಕ್ಕದ ಜಮೀನು ಮೂಲಕ ನೀರು ಹರಿಸಿಕೊಳ್ಳುವ ಹಕ್ಕನ್ನು ಕೊಡುವ ರೀತಿಯಲ್ಲಿ ತಾವು ಒಂದು ತಿದ್ದುಪಡಿಯನ್ನು ತರುತ್ತೀರೆಂದು ತಿಳಿದುಕೊಂಡಿದ್ದೇನೆ. ಅದರ ಜೊತೆಗೆ ಒಂದು ಜಮೀನು ಹಿಂದುಗಡೆ ಇರತಕ್ಕಂಥ ಜಮೀನಿಗೆ ದಾರಿ ಇಲ್ಲದೆ ಹೋದರೆ ಕಡ್ಡಾಯವಾಗಿ ದಾರಿಯನ್ನು ಸಹ ಒದಗಿಸತಕ್ಕಂಥ ರೀತಿಯಲ್ಲಿ ಅಮೆಂಡ್‌ಮೆಂಟನ್ನು ತಾವು ತಂದರೆ ಬಹಳ ಉಪಯೋಗವಾಗುತ್ತದೆಂದು ಹೇಳುತ್ತೇನೆ. ಏತಕ್ಕೆಂದರೆ ದಾರಿ ವ್ಯಾಜ್ಯ ಸಾಮಾನ್ಯವಾಗಿ ತೆಂಗಿನ ತೋಟವಿದ್ದರೆ, ಆ ತೆಂಗಿನ ತೋಟದ ಮೇಲೆ ಗಾಡಿ ಹೋಗಲು ಸಾಧ್ಯವಾಗದಿದ್ದಲ್ಲಿ ರಸ್ತೆಯಲ್ಲಿ ಗಾಡಿಯನ್ನು ಬಿಟ್ಟು ಬಹಳ ದೂರವಿರುವ ತೆಂಗಿನತೋಟದಿಂದ ತಾನು ಬೆಳೆದಂಥ ಬೆಳೆಯನ್ನು ತೆಂಗಿನ ಕಾಯಿಯನ್ನು ತೆಗೆದುಕೊಂಡು ಬರತಕ್ಕಂಥ ಪರಿಸ್ಥಿತಿ ಇರುತ್ತದೆ. ಇಂತಹ ವ್ಯಾಜ್ಯಗಳನ್ನು ತಾವು ತೀರ್ಮಾನ ಮಾಡಬೇಕು. ಮತ್ತೆ ಕರಾಬು ದಾರಿ, ಹಳ್ಳ ಕರಾಬು ಇರುತ್ತದೆ. ಹಳ್ಳ ಕರಾಬಿನಲ್ಲಿ ರುವ ದಾರಿ ಇವತ್ತು ಯಾವುದೂ ಉಳಿದಿಲ್ಲ. ಹಳ್ಳ ಕರಾಬಿನಲ್ಲಿ ಎನ್‌ಕ್ರೋಚ್‌ಮೆಂಟ್ ಮಾಡಿಬಿಟ್ಟು ಪೂರ್ಣವಾಗಿ ಆಕ್ರಮಣ ಮಾಡಿಕೊಂಡುಬಿಟ್ಟಿದ್ದಾರೆ. ಒಂದು ವೇಳೆ ದಾರಿ ಇಲ್ಲದೆ ಹೋದರೆ ಕರಾಬು ಭೂಮಿಯಲ್ಲಿ ದನ ಜಾನುವಾರುಗಳು ಅದನ್ನು ದಾರಿ ಮಾಡಿಕೊಳ್ಳುವ ಸಾಧ್ಯತೆಯೂ ಇರುತ್ತದೆ. ಆದ್ದರಿಂದ ದಯವಿಟ್ಟು ಎಲ್ಲೆಲ್ಲಿ ಕರಾಬು ಜಮೀನು ಇರುತ್ತದೆ ಅವುಗಳನ್ನು ಗುರುತಿಸಿ ಪುನ: ರೀಸರ್ವೆ ಮಾಡುವ ಕಾಲದಲ್ಲಿ ನಕಾಶೆಗೆ ಅನುಸಾರವಾಗಿ ಗುರುತು ಮಾಡಿ ದಾರಿ ಕರಾಬುಗಳನ್ನಾಗಿ ಮಾಡಿ ಖಾಯಂ ಆಗಿ ಉಳಿಯುತಕ್ಕಂಥ ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕೆಂದು ನಾನು ಕೇಳಿಕೊಳ್ಳು ತ್ತೇನೆ.

೧–೩೦ ಪಿ.ಎಂ.

ಇನ್ನು ರಿಜಿಸ್ಟ್ರೇಷನ್‌ಗೆ ಬಂದರೆ ಫ್ರಾಗ್‌ಮೆಂಟೇಷನ್ ಆಕ್ಟ್‌ನ ಪರಿಣಾಮ ಏನಾಗುತ್ತದೆಂದು ಒಬ್ಬರು ಮಾನ್ಯ ಸದಸ್ಯರು ಮಾತನಾಡುತ್ತಾ ಹೇಳಿದರು. ಮಾನ್ಯ ಸಚಿವರು ರೈತರ ಸಮಸ್ಯೆಗಳನ್ನು ಚೆನ್ನಾಗಿ ತಿಳಿದಿರತಕ್ಕವರು. ಈ ಫ್ರಾಗ್ ಮೆಂಟೇಷನ್ ಆ್ಯಕ್ಟ್ ಏನಿದೆ ಇದನ್ನು ತೆಗೆಯದೆ ಹೋದರೆ ನಿಜವಾಗಿ ಭೂಮಿಯ ಹಕ್ಕನ್ನು ರೈತನಿಗೆ ಏನು ಕೊಟ್ಟಿದ್ದೇವೆ. ಆ ಹಕ್ಕಿಗೆ ಚ್ಯುತಿ ಬಂದಂತಾಗುತ್ತದೆಂದು ನನ್ನ ಭಾವನೆ. ಏಕೆಂದರೆ ಒಬ್ಬ ತಂದೆಗೆ ೫ ಎಕರೆ ಭೂಮಿ ಇದ್ದು ಅದನ್ನು ೩ ಮಂದಿ ಮಕ್ಕಳಿಗೆ ಹಂಚುವಾಗ ಫ್ರಾಗ್‌ಮೆಂಟೇಷನ್ ಆ್ಯಕ್ಟ್‌ನಿಂದ ತೊಂದರೆಯಾಗುತ್ತದೆ. ೨ ಜನರಿಗ ಭಾಗ ಬೇಡ ಅಂದರೆ ತಂದೆಯ ಆಸ್ತಿಯಲ್ಲಿ ಸಮಪಾಲು ಇರುವಾಗ ಅದು ಸರಿಹೋಗುವುದಿಲ್ಲ. ಒಬ್ಬನಿಗೆ ಆಸ್ತಿ ಕೊಟ್ಟು ಉಳಿದವರಿಗೆ ಹಣದ ರೂಪದಲ್ಲಿ ಪರಿಹಾರ ಕೊಡಿ ಎಂದರೆ ಹಣ ತೆಗೆದುಕೊಂಡು ಬೇರೆ ಯಾವುದೇ ವ್ಯವಹಾರ ಮಾಡುವುದಕ್ಕೆ ಶಕ್ತಿ ಇಲ್ಲದ ಅನಕ್ಷರಾಗಿರತಕ್ಕ, ದಡ್ಡರಾಗಿರತಕ್ಕ ಮಕ್ಕಳಿಗೆ ಅದು ಸಾಧ್ಯವಾಗುವುದಿಲ್ಲ. ಒಂದು ಎಕರೆ ಜಮೀನಿದ್ದರೆ ಸಾಕು ಅದೇ ನಮಗೆ ಜೀವನಾಧಾರ ಎಂದು ನಂಬಿ ಕೊಂಡಿರತಕ್ಕ ಜನರು ಇದ್ದಾರೆ. ಫ್ರಾಗ್ ಮೆಂಟೇಷನ್ ಆ್ಯಕ್ಟ್ ಪ್ರಕಾರ ರಿಜಿಸ್ಟ್ರೇಷನ್ ಆಗದೆ ಹೋದರೆ ಹಕ್ಕು ಬರುವುಲ್ಲ, ಸಾಲ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಕೊಡಗು, ಮಂಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ಭಾಗಗಳಲ್ಲಿ ಫ್ರಾಗ್‌ಮೆಂಟೇಷನ್ ಆ್ಯಕ್ಟ್‌ನಲ್ಲಿ ರಿಯಾಯಿತಿ ಕೊಟ್ಟಿದ್ದೀರಿ. ಇದು ವಿಫಲವಾದ ಕಾಯಿದೆ. ನೀವು ದೊಡ್ಡ ಉದ್ದೇಶವನ್ನಿಟ್ಟುಕೊಂಡು ದೊಡ್ಡ

ದೊಡ್ಡ ಹಿಡುವಳಿಯನ್ನು ಸೃಷ್ಟಿ ಮಾಡಬೇಕೆಂದು ಪ್ರಯತ್ನ ಮಾಡಿದ್ದೀರಿ. ಅದು ಸಾಧ್ಯವಾಗದೆ ಇರತಕ್ಕ ಕೆಲಸ. ಇದು ನಿರುದ್ಯೋಗ ಸಮಸ್ಯೆಗೆ ಕಾರಣವಾಗುತ್ತದೆ. ಒಬ್ಬ ರೈತನಿಗೆ ೫ ಎಕರೆ ಭೂಮಿ ಇದ್ದು ಒಬ್ಬನಿಗೆ ಅದನ್ನು ಕೊಟ್ಟು ಉಳಿದ ಇಬ್ಬರಿಗೆ ಇಲ್ಲವೆಂದರೆ ಅವರು ನಿರುದ್ಯೋಗಿಗಳಾಗಿ ಜೀವನ ಹಾಳಾಗತಕ್ಕ ಪರಿಸ್ಥಿತಿ ಇದೆ. ಒಂದು ವೇಳೆ ಅವರೆಲ್ಲರಿಗೂ ಹಂಚಿಕೊಟ್ಟರೆ ಆ ಭಾಗಗಳು ಖಾತೆ ಆಗುವುದಿಲ್ಲ. ಈ ಕಾರಣಕ್ಕಾಗಿ ಫ್ರಾಗ್ ಮೆಂಟೇಷನ್ ಆ್ಯಕ್ಟನ್ನು ದಯಮಾಡಿ ತೆಗೆಯಬೇಕೆಂದು ಹೇಳುತ್ತೇನೆ.

ಸಬ್ ರಿಜಿಸ್ಟ್ರಾರ್ ರಿಜಿಸ್ಟರ್ ಮಾಡತಕ್ಕ ವ್ಯವಸ್ಥೆಯ ಬಗ್ಗೆ ಹೇಳುವುದಾದರೆ, ಒಂದು ಸರ್ವೆ ನಂಬರ್‌ನಲ್ಲಿ ನೂರು ಎಕರೆ ಭೂಮಿ ಇದೆ. ಅದರಲ್ಲಿ ಒಂದು ಕಡೆ ಫಲವತ್ತಾದ ಪ್ರದೇಶ ಬರುತ್ತದೆ, ಇನ್ನೊಂದು ಕಡೆ ಫಲವತ್ತು ಇಲ್ಲದ ಭೂಮಿ ಇರುತ್ತದೆ. ಇವರು ಅದರ ಸ್ಟ್ಯಾಂಪ್ ಡ್ಯೂಟಿಯನ್ನು ನಿರ್ಧಾರ ಮಾಡಬೇಕಾದರೆ ಫಲವತ್ತಾದ ಭೂಮಿ ಒಂದು ಎಕರೆಗೆ ಹತ್ತು ಸಾವಿರ ರೂಪಾಯಿಗೆ ಖರೀದಿ ಆಗಿದ್ದರೆ ಫಲವತ್ತಿಲ್ಲದ ಮತ್ತೊಂದು ಭಾಗದಲ್ಲಿ ೫೦೦ ರೂಪಾಯಿಗೆ ಖರೀದಿ ಆಗಿರುತ್ತದೆ, ಆಗ ಅವೆರಡರ ಸರಾಸರಿಯನ್ನು ತೆಗೆದುಕೊಂಡು ೫ ಸಾವಿರ ರೂಪಾಯಿಗೆ ಪತ್ರ ತೆಗೆದುಕೊಳ್ಳಬೇಕೆಂದು ಹೇಳುತ್ತಾರೆ. ಕೊಂಡದ್ದು ೫೦೦ ರೂಪಾಯಿಗೆ ಆದರೆ ೫ ಸಾವಿರ ರೂಪಾಯಿಗೆ ಸ್ಟ್ಯಾಂಪ್ ಡ್ಯೂಟಿ ಕೊಡಬೇಕೆಂದರೆ ಕಷ್ಟವಾಗುತ್ತದೆ. ನಾವು ಇಷ್ಟಕ್ಕೆ ಕೊಂಡಿರುವುದು ಎಂದು ಎಷ್ಟು ಹೇಳಿದರೂ ಸಾಧ್ಯವಾಗುವುದಿಲ್ಲ. ಇಷ್ಟು ಸ್ಟ್ಯಾಂಪ್ ಡ್ಯೂಟಿ ಕೊಟ್ಟರೆ ಮಾತ್ರ ರಿಜಿಸ್ಟರ್ ಮಾಡುತ್ತೇವೆ, ಇಲ್ಲದಿದ್ದರೆ ಇಲ್ಲವೆಂದು ಹೇಳುತ್ತಾರೆ. ಇದು ಲಂಚಕ್ಕೆ ಕಾರಣವಾಗುತ್ತದೆ. ಆದ್ದರಿಂದ ಕೊಳ್ಳುವವರು ಮತ್ತು ಮಾರಾಟ ಮಾಡುವವರು ಎಷ್ಟಕ್ಕೆ ಬೆಲೆ ನಿರ್ಧಾರ ಮಾಡಿಕೊಂಡು ಬಂದಿರುತ್ತಾರೆ ಆ ಬೆಲೆಗೆ ಸ್ಟ್ಯಾಂಪ್ ಡ್ಯೂಟಿ ತೆಗೆದುಕೊಳ್ಳತಕ್ಕದ್ದು ಸೂಕ್ತ. ಈ ತೊಂದರೆಯನ್ನು ನಿವಾರಿಸಿಕೊಡಬೇಕೆಂದು ರೈತರ ಪರವಾಗಿ ಮತ್ತೊಮ್ಮೆ ಮಾನ್ಯ ಕಂದಾಯ ಮಂತ್ರಿಗಳಲ್ಲಿ ಪ್ರಾರ್ಥಿಸುತ್ತೇನೆ. ಇಷ್ಟನ್ನು ಕಂದಾಯ ಇಲಾಖೆಯ ಬಗ್ಗೆ ಹೇಳುತ್ತಾ ಕಾಲಾವಕಾಶ ಕಡಿಮೆ ಇರುವುದರಿಂದ ನೀರಾವರಿಗೆ ಬರುತ್ತೇನೆ.

ರೈತನ ಜೀವನ ಸುಗಮವಾಗಬೇಕಾದರೆ ನೀರಾವರಿ ಏನಿದೆ ಇದು ಬಹಳ ಮುಖ್ಯ. ಏಕೆಂದರೆ ವರ್ಷಕ್ಕೆ ೧೨ ಇಂಚಿನಿಂದ ಹಿಡಿದು ೯೦೦ ಇಂಚಿನವರೆಗೆ ಮಳೆ ಬೀಳುವ ಪ್ರದೇಶ ಈ ರಾಷ್ಟ್ರದಲ್ಲಿದೆ. ಅಗಾಧವಾಗಿ ಬರತಕ್ಕ ಮಳೆಯ ನೀರನ್ನು ಉಪಯೋಗಿಸಿಕೊಂಡು ವ್ಯವಸಾಯ ಮಾಡತಕ್ಕ ವ್ಯವಸ್ಥೆ ಏನಿದೆ ಅದಕ್ಕೆ ನೀರಾವರಿ ಎಂದು ಹೇಳುತ್ತೇವೆ. ಇದು ಸಾಮಾನ್ಯವಾಗಿ ಮಳೆಗಾಲದಲ್ಲಿ ಆಗತಕ್ಕದ್ದು. ಮಳೆಗಾಲದಲ್ಲಿ ಬಂದು ಓಡುವ ನೀರು (ಹರಿಯುವ ನೀರು) ಮತ್ತು ಭೂಗರ್ಭದಲ್ಲಿ ಸೇರಿಹೋಗತಕ್ಕ ಅಂತರ್ಜಲ ಏನಿದೆ ಈ ಎರಡು ನೀರನ್ನು ಉಪಯೋಗಿಸಿಕೊಂಡು ವ್ಯವಸಾಯ ಮಾಡಬೇಕಾಗುತ್ತದೆ. ಎರಡು ತರಹದ ನೀರನ್ನು ಅಂದರೆ ಹಳ್ಳಕೊಳ್ಳಗಳಲ್ಲಿ ಹರಿಯತಕ್ಕ ನೀರು ಮತ್ತು ಭೂಮಿಯಲ್ಲಿ ಇಂಗಿ ಅಂತರ್ಜಲವಾಗಿ ಶೇಖರಣೆಯಾಗಿರತಕ್ಕ ನೀರನ್ನು ಸರಿಯಾಗಿ ಉಪಯೋಗಿಸಿಕೊಳ್ಳತಕ್ಕದ್ದು ಅವಶ್ಯಕ.

ಆ ದೃಷ್ಟಿಯಲ್ಲಿ ನೋಡಿದರೆ ಕರ್ನಾಟಕ ರಾಜ್ಯ ಈ ನೀರನ್ನು ಉಪಯೋಗಿಸಿಕೊಳ್ಳುವುದರಲ್ಲಿ ಪೂರ್ಣವಾಗಿ ವಿಫಲವಾಗಿದೆ. ನಮ್ಮ ಪ್ರಯತ್ನ ಸುಮಾರು ೪೦ ವರ್ಷಗಳಿಂದ ಏನು ನಡೆದಿದೆ ಇದು ಸಮರ್ಪಕವಾಗಿ ಆಗಿಲ್ಲ. ಆದ್ದರಿಂದ ಈ ರಾಜ್ಯದಲ್ಲಿ ರೈತನಿಗೆ ಅನ್ಯಾಯವಾಗಿದೆ. ನೀರಾವರಿ ಅಭಿವೃದ್ಧಿ ಕುಂಠಿತವಾಗಿದೆ. ಇದಕ್ಕಾಗಿ ಹೆಚ್ಚಿನ ಹಣವನ್ನು ಸರ್ಕಾರ ಕೊಡಬೇಕಾಗುತ್ತದೆ. ಯಾವುದೇ ಯೋಜನೆ ನಿಂತರೂ ಚಿಂತೆಯಿಲ್ಲ, ಟಾರ್ ರೋಡ್ ಇಲ್ಲದಿದ್ದರೂ ಚಿಂತೆಯಿಲ್ಲ, ಅಧಿಕಾರಿಗಳಿಗೆ ಭವ್ಯ ಬಂಗಲೆಗಳನ್ನು ನಿರ್ಮಾಣ ಮಾಡತಕ್ಕದ್ದು ನಿಂತರೂ ಚಿಂತೆಯಿಲ್ಲ, ಅತಿಮುಖ್ಯವಾಗಿ ಹೆಚ್ಚು ಹಣವನ್ನು ನೀರಾವರಿಗೆ ಉಪಯೋಗಿಸಿದರೆ ಶೇಕಡ ೭೦ ರಷ್ಟಿರುವ ರೈತರಿಗೆ ಸಹಾಯ ಮಾಡಿದಂತಾಗುತ್ತದೆ. ಆದ್ದರಿಂದ ನೀರಾವರಿಗೆ ಹೆಚ್ಚು ಆದ್ಯತೆ ಕೊಡಬೇಕಾಗುತ್ತದೆ. ಅಣೆಕಟ್ಟುಗಳನ್ನು ತೆಗೆದುಕೊಂಡರೆ ಅಪ್ಪರ್‌ಕೃಷ್ಣ, ಹೇಮಾವತಿ, ಕಾವೇರಿ ಮತ್ತು ಕೃಷ್ಣ ಬೇಸಿನ್‌ನಲ್ಲಿರತಕ್ಕ ನೀರಾವರಿ ಅಣೆಕಟ್ಟುಗಳೇ ನಿವೆ ಅವುಗಳನ್ನು ಸರಿಯಾದ ರೀತಿಯಲ್ಲಿ ಮುಕ್ತಾಯ ಮಾಡುವುದಕ್ಕೆ ಇನ್ನೂ ಸಾಧ್ಯ ಆಗಿಲ್ಲ. ಈ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ನದಿಗಳಿಗೆ ಅಣೆಕಟ್ಟುಗಳನ್ನು ಕಟ್ಟತಕ್ಕದ್ದು ಮತ್ತು ಸಣ್ಣ ಸಣ್ಣ ಹಳ್ಳಗಳಲ್ಲಿ ಕೆರೆಗಳನ್ನು ಕಟ್ಟತಕ್ಕದ್ದು ಮುಖ್ಯ. ಕೆರೆಗಳನ್ನು ಕಟ್ಟತಕ್ಕ

ವಿಚಾರದಲ್ಲಿ ೧೯೮೫ನೇ ಇಸವಿಯಿಂದ ಈ ಸರ್ಕಾರಕ್ಕೆ ಯಾವುದೇ ಆಸಕ್ತಿ ಇಲ್ಲ ಎಂದು ನಾನಾದರೂ ಭಾವನೆ ಮಾಡಿದ್ದೇನೆ. ಏಕೆಂದರೆ ನನ್ನ ಕ್ಷೇತ್ರದಲ್ಲಿ ನಾಲ್ಕು ಕೆರೆಗಳನ್ನು ೧೯೮೫–೮೬ರ ಬಜೆಟ್ಟನಲ್ಲಿ ಮಾನ್ಯ ದೇವೇಗೌಡರು ಇನ್‌ಕ್ಲೂಡ್ ಮಾಡಿದ್ದರು. ಆದರೆ ಇದುವರೆಗೂ ಅದಕ್ಕೆ ಸಂಬಂಧಪಟ್ಟ ಕೆಲಸ ಆಗಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಪ್ಲಾನ್ ಮತ್ತು ಎಸ್ಟಿಮೇಟ್ ಮಾಡಿ ಸರ್ಕಾರಕ್ಕೆ ಕಳುಹಿಸಿಲ್ಲ. ೧೦ ಲಕ್ಷ ೫ ಲಕ್ಷ ರೂಪಾಯಿಗಳಲ್ಲಿ ಆಗತಕ್ಕ ಸಣ್ಣ ಕೆರೆಗಳ ಅಂದಾಜು ತಯಾರು ಮಾಡು ವುದಕ್ಕೆ ಮೂರು ವರ್ಷ ಆದರೂ ಅಧಿಕಾರಿಗಳಿಗೆ ಆಗಿಲ್ಲ ಮತ್ತು ಹಣ ಒದಗಿಸುವುದಕ್ಕೆ ಸರ್ಕಾರಕ್ಕೂ ಶಕ್ತಿ ಇಲ್ಲ ಎಂದರೆ ಎಷ್ಟರ ಮಟ್ಟಿಗೆ ನೀರಾವರಿಯನ್ನು ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯ ಎಂದು ಯೋಚನೆ ಮಾಡಬೇಕಾಗಿದೆ.

(ಉಪಾಧ್ಯಕ್ಷರು ಗಂಟೆ ಬಾರಿಸಿದರು).

ಒಂದು ಹೇಳಲೇಬೇಕಾಗಿದೆ. ಇನ್ನು ಐದು ನಿಮಿಷ ಟೈಮ್ ಬೇಕು.

ಉಪಾಧ್ಯಕ್ಷರು.—ಮುಗಿಸಿ. ಜನ ಜಾಸ್ತಿ ಇದ್ದಾರೆ.

ಶ್ರೀ ಬಿ. ಲಕ್ಕಪ್ಪ.—ಅಪ್ಪರ್‌ಭದ್ರ ಅಣೆಕಟ್ಟು ಇದೆ. ಈಗ ಭದ್ರ ನದಿಯಲ್ಲಿ ೯೬ ಟಿ.ಎಂ.ಸಿ. ನೀರಿದೆ. ಅದರಲ್ಲಿ ನಮಗೆ ೬೧.೭೦ ಟಿ.ಎಂ.ಸಿ. ನೀರು ಕೃಷ್ಣ ಬೇಸಿನ್ ಅವಾರ್ಡ್ ಪ್ರಕಾರ ನಮಗೆ ಲಭ್ಯ ಇದೆ. ಈ ನೀರನ್ನು ನಾವು ಉಪಯೋಗಿಸಿಕೊಳ್ಳಬೇಕಾಗಿದೆ. ತುಂಗಾ ನದಿಯಲ್ಲಿ ೨೦೪ ಟಿ.ಎಂ.ಸಿ. ನೀರಿದೆ. ಕೃಷ್ಣ ಅವಾರ್ಡ್ ಪ್ರಕಾರ ೧೧.೫೦ ಟಿ.ಎಂ.ಸಿ. ನೀರು ನಮಗೆ ಸಿಗುತ್ತದೆ. ಈ ಎರಡನ್ನೂ ಉಪಯೋಗಿಸಿದ ನಂತರ ೧೫ ವರ್ಷಗಳ ನಂತರ ಎರಡೂ ನದಿಗಳಿಂದ ಲಭ್ಯವಾಗತಕ್ಕ ನೀರಿನಲ್ಲಿ ೮ ಟಿ.ಎಂ.ಸಿ. ನೀರನ್ನು ಪ್ರತಿ ನದಿಯಿಂದ ಉಪಯೋಗಿಸಿಕೊಳ್ಳಬಹುದು. ಇದರಿಂದ ೧೬ ಟಿ.ಎಂ.ಸಿ. ನೀರು ಬರುತ್ತದೆ. ೮೯.೨೦ ಟಿ.ಎಂ ಸಿ., ಅಂದರೆ ಹತ್ತಿರ ಹತ್ತಿರ ೯೦ ಟಿ.ಎಂ.ಸಿ. ನೀರು ಅಪ್ಪರ್ ಭದ್ರಾವಲ್ಲಿ ಲಭ್ಯವಾಗುತ್ತದೆ. ಇದನ್ನು ಪೂರ್ಣವಾಗಿ ಬಳಕೆ ಮಾಡಿಕೊಂಡು ಅಣೆಕಟ್ಟು ಕಟ್ಟಿ ಉಪಯೋಗಿಸಿಕೊಂಡರೆ ೧೩ ಲಕ್ಷ ಎಕರೆಗೆ ಈ ರಾಜ್ಯದಲ್ಲಿ ನೀರಾವರಿ ಸೌಲಭ್ಯ ಕೊಟ್ಟಹಾಗಾಗುತ್ತದೆ. ಇಂಥ ಅಣೆಕಟ್ಟು ನಿರ್ಮಿಸುವುದಕ್ಕೆ ಎಸ್ಟಿಮೇಟ್ ಆಗಿಲ್ಲ. ದೇವೇಗೌಡರು ಎಸ್ಟಿಮೇಟ್ ತಯಾರು ಮಾಡಿ ಕೇಂದ್ರ ಸರ್ಕಾರದ ಅನುಮತಿಗಾಗಿ ಕಳುಹಿಸುತ್ತೇವೆ ಎಂದು ಹೇಳಿದ್ದರು. ಇದುವರೆಗೂ ಅದು ಹೋಗಿದೆಯೋ ಇಲ್ಲವೋ ಗೊತ್ತಿಲ್ಲ. ಒಂದು ವಿಚಾರವನ್ನು ಹೇಳಿ ನನ್ನ ಮಾತನ್ನು ಮುಗಿಸು ತ್ತೇನೆ. ಅದು ನೇತ್ರಾವತಿ ವಿಚಾರ. ನೇತ್ರಾವತಿ ನದಿ ನಮ್ಮ ರಾಜ್ಯದ ನದಿ. ಇದರಿಂದ ೩೨೦ ಟಿಎಂಸಿ ನೀರು ಅನ್ಯಾಯವಾಗಿ ಸಮುದ್ರಕ್ಕೆ ಸೇರಿ ಯಾವುದೇ ಫಲ ಕೊಡದಂತಾಗುತ್ತಿದೆ. ಹಿಂದೆ ಇದ್ದ ಮಂತ್ರಿಗಳನ್ನು ಈ ಬಗ್ಗೆ ಪ್ರಶ್ನೆ ಕೇಳಿದಾಗ ೪೦ ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯ ಎಂದು ಹೇಳಿದ್ದರು. ಇದನ್ನು ಉಪಯೋಗಿಸಿಕೊಂಡಿದ್ದೇ ಆದರೆ ಹಾಸನ ಮತ್ತು ತುಮಕೂರು ಜಿಲ್ಲೆಗೆ ನೀರಿನ ಸೌಲಭ್ಯ ಪಡೆಯುವುದಕ್ಕೆ ಸಾಧ್ಯವಿದೆ ಎಂದು ಗೊತ್ತಾಗಿದೆ. ಇದಕ್ಕೆ ೬೦೦ ಕೋಟಿ ರೂಪಾಯಿ ಅಂದಾಜು ವೆಚ್ಚವಾಗಿದ್ದು ಇದರಲ್ಲಿ ೫ ಲಕ್ಷ ೬೦ ಸಾವಿರ ಎಕರೆ ಭೂಮಿಗೆ ನೀರು ಲಭ್ಯವಾಗುತ್ತದೆ ಅಲ್ಲದೆ ೧೦೦೦ ಅಡಿ ನೀರನ್ನು ಧುಮುಕಿಸಿ ವಿದ್ಯುಚ್ಛಕ್ತಿಯನ್ನು ಉಪಯೋಗಿಸಿಕೊಳ್ಳುವುದಕ್ಕೂ ಸಾಧ್ಯವಿದೆಯೆಂಬ ಅಂದಾಜಿದೆ, ಈ ಬಗ್ಗೆ ಅನೇಕ ತಜ್ಞರು ಅಭಿಪ್ರಾಯ ಕೊಟ್ಟಿದ್ದಾರೆ. ಇದನ್ನು ಸರಿಯಾಗಿ ಉಪಯೋಗಿಸಿಕೊಳ್ಳಬೇಕು. ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್ ಮಾಡಿದ್ದೇವೆ. ಕಾವೇರಿ ಬೇಸಿನ್‌ಗೆ ಒಂದು, ಇನ್ನೊಂದು ಕಡೆ ಕೃಷ್ಣ ಬೇಸಿನ್‌ಗೆ ಒಂದು ಎಂದು ಎರಡು ಲಿಫ್ಟ್ ಇರಿಗೇಷನ್ ಸ್ಕೀಂ ಮಾಡಿದ್ದೇವೆ. ಭೂಗರ್ಭದಲ್ಲಿರತಕ್ಕ ಅಂತರ್ಜಲವನ್ನು ಮೇಲಕ್ಕೆತ್ತಿ ರೈತರಿಗೆ ಒದಗಿಸತಕ್ಕದ್ದು ಮತ್ತು ಅಣೆಕಟ್ಟುಗಳಲ್ಲಿ ಚಾನಲ್ ಮೂಲಕ ನೀರನ್ನು ಒದಗಿಸುವುದು ಇದನ್ನು ಮಾಡಬೇಕಾಗಿದೆ. ಈ ಕೆಲಸಕ್ಕೆ ಅಧಿಕಾರಿಗಳನ್ನು ನೇಮಕ ಮಾಡ ಲಾಗಿದೆ. ಸುಮಾರು ೬೫ ಜನ ಕೃಷ್ಣ ಬೇಸಿನ್‌ನಲ್ಲಿ ಮತ್ತು ೫೮ ಜನ ಅಧಿಕಾರಿಗಳನ್ನು ಕಾವೇರಿ ಬೇಸಿನ್‌ನಲ್ಲಿ ನೇಮಕ ಮಾಡಲಾಗಿದೆ.

ಇದರಲ್ಲಿ ಯಾವುದೇ ರೀತಿಯ ನಾರ್ಮ್ಸನ್ನು ಅನುಸರಿಸಿಲ್ಲ. ಒಂದುವೇಳೆ ನೇಮಕಾತಿಯನ್ನು ಮಾಡಬೇಕಾಗಿದ್ದರೆ, ಹರಿಜನ–ಗಿರಿಜನ, ಹಿಂದುಳಿದವರ್ಗದವರು, ಹಾಗೂ ಅಲ್ಪಸಂಖ್ಯಾತರು ಇವರಿಗೆ ಪ್ರಾತಿನಿಧ್ಯವನ್ನು ಕೊಡಬೇಕಾಗಿತ್ತು. ಆ ರೀತಿಯ ಪ್ರಾತಿನಿಧ್ಯವನ್ನು ಇದರಲ್ಲಿ ಕೊಟ್ಟಿಲ್ಲ. ಈ ಜನರಿಗೆ ಇದರಿಂದ ಅನ್ಯಾಯವಾಗಿದೆ. ಕೇವಲ ಒಂದೇ ಕೋಮಿಗೆ ಸೇರಿದ ಸುಮಾರು ೮೦

ಪರ್ಸೆಂಟ್ ಅಧಿಕಾರಿಗಳನ್ನು ಇದರಲ್ಲಿ ನೇಮಕ ಮಾಡಿದ್ದಾರೆ. ಏಕೆಂದರೆ, ಯಾರ್ಯಾರಿಗೆ ಈ ಒಂದು ನೇಮಕಾತಿಯಲ್ಲಿ ಪ್ರಾತಿನಿಧ್ಯ ಸಿಕ್ಕಬೇಕಾಗಿತ್ತು, ಆ ಜನರೆಲ್ಲಾ ನನ್ನ ಹತ್ತಿರ ಬಂದು ತಮ್ಮ ದುಃಖವನ್ನು ವ್ಯಕ್ತಪಡಿಸಿದ್ದಾರೆ. ಇಲ್ಲಿ ಆಗಿರತಕ್ಕ ಅನ್ಯಾಯವನ್ನು ಸರ್ಕಾರ ಗಮನಿಸಿ ಯಾವ ನಾರ್ಮ್ಸ್‌ನ್ನು ನೇಮಕಾತಿ ಸಮಯದಲ್ಲಿ ಅನುಸರಿಸಲಾಗಿದೆ. ಯಾವ್ಯಾವ ಜನಾಂಗದವರನ್ನು ನೇಮಕ ಮಾಡಲಾಗಿದೆ, ಅವರ ಅರ್ಹತೆಗಳೇನು ಇಷ್ಟು ವಿವರಗಳನ್ನು ಮಾನ್ಯ ಕಂದಾಯ ಮಂತ್ರಿಗಳು ತಮ್ಮ ಉತ್ತರದಲ್ಲಿ ತಿಳಿಸಬೇಕು. ಮಾನ್ಯ ಉಪಾಧ್ಯಕ್ಷರು ನನಗೆ ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ ಬಿ ಶಾಣಪ್ಪ (ಶಹಬಾದ್ ಕ್ಷೇತ್ರ).—ಸನ್ಮಾನ್ಯ ಉಪಾಧ್ಯಕ್ಷರೆ, ಇವತ್ತು ನಮ್ಮ ಮುಂದೆ ಇರತಕ್ಕ ಎರಡು ಇಲಾಖೆಯ ಬೇಡಿಕೆಗಳು ಬಹಳ ಮುಖ್ಯವಾದವುಗಳು. ನೀರಾವರಿ ಇಲಾಖೆಯ ಬೇಡಿಕೆ ಸುಮಾರು ೨೦೫ ಕೋಟಿ ರೂಪಾಯಿಗಳು. ಹಾಗೂ ಕಂದಾಯ ಇಲಾಖೆಯ ಬೇಡಿಕೆ ಸುಮಾರು ೨೯ ಕೋಟಿ ರೂಪಾಯಿಗಳು. ಇದರಲ್ಲಿ ಕಂದಾಯ ಇಲಾಖೆಯವರು ರಾಜ್ಯದಾದ್ಯಂತ ತಮ್ಮ ತಮ್ಮ ಸಂಪನ್ಮೂಲಗಳ ಮುಖಾಂತರವಾಗಿ ಯಾವ ರೀತಿಯಾಗಿ ಈ ರಾಜ್ಯದ ಬೊಕ್ಕಸಕ್ಕೆ ಹಣವನ್ನು ಒದಗಿಸಿಕೊಡಬೇಕು ಹಾಗೂ ಆ ಇಲಾಖೆಯಿಂದ ಬಂದಂತಹ ಹಣವನ್ನು ಅಂದರೆ ಯಾವ ಜನರು ಕಂದಾಯ ರೂಪದಲ್ಲಿ ಕೊಟ್ಟಿದ್ದಾರೋ ಅವರ ಉನ್ನತಿಗಾಗಿ ಯಾವ ರೀತಿ ಖರ್ಚು ಮಾಡಬೇಕೆಂಬುದನ್ನು ನಿರ್ಧರಿಸುವಂತಹದ್ದು ನೀರಾವರಿ ಇಲಾಖೆ. ಆದ್ದರಿಂದ ಈ ಎರಡೂ ಇಲಾಖೆಗಳು ಬಹಳ ಮುಖ್ಯವಾದವುಗಳು. ಇವುಗಳ ಬಗ್ಗೆ ಹೇಳುವುದಾದರೆ, ೧೯೮೩ರ ನಂತರ ಅಂದರೆ ಜನತಾ ಸರ್ಕಾರ ಕೆಲವು ಸಮಸ್ಯೆಗಳನ್ನು ತೆಗೆದುಕೊಂಡು ಜನತೆಯ ಮುಂದೆ ಹೋಗಿ ಚುನಾವಣೆಯಲ್ಲಿ ಗೆದ್ದ ನಂತರ ನೀರಾವರಿಯಲ್ಲಿ ಎಷ್ಟರ ಮಟ್ಟಿಗೆ ಸಾಧನೆ ಮಾಡಿದ್ದಾರೆ, ಎಷ್ಟು ಹೆಕ್ಟೇರ್ಸ್ ಭೂಮಿಯನ್ನು ನೀರಾವರಿಯನ್ನಾಗಿ ಪರಿವರ್ತನೆ ಮಾಡಿದ್ದಾರೆ, ಇದರಿಂದಾಗಿ ಈ ರಾಜ್ಯದ ಜನತೆಯ ಆರ್ಥಿಕ ಸ್ಥಿತಿ ಹಾಗೂ ಸಾಮಾಜಿಕ ಪರಿಸ್ಥಿತಿಯಲ್ಲಿ ಯಾವ ರೀತಿಯಾದ ಬದಲಾವಣೆಯಾಗಿದೆ. ಎಂಬುದನ್ನು ಅದರಲ್ಲೂ ಈ ೫ ವರ್ಷಗಳಲ್ಲಿ ಆಗಿರುವಂತಹ ಬದಲಾವಣೆಯನ್ನು ನಾವು ನೋಡಬೇಕು. ಏಕೆಂದರೆ ಪ್ರಜಾತಂತ್ರದಲ್ಲಿ ಪ್ರತಿಯೊಂದು ಸಂದರ್ಭದಲ್ಲೂ ಜನತೆ ತಮಗೆ ಬೇಕಾದ ಸರ್ಕಾರವನ್ನು ಆರಿಸುತ್ತದೆ. ಆ ರೀತಿ ಜನತೆ ತಮಗೆ ಬೇಕಾದ ಸರ್ಕಾರವನ್ನು ಆರಿಸಿದಾಗ ಆ ಸರ್ಕಾರ ಜನರಿಗಾಗಿ ಯಾವ ರೀತಿಯ ಸವಲತ್ತುಗಳನ್ನು ಕೊಟ್ಟಿದೆ ಎಂಬುದು ಮುಖ್ಯ. ಇದನ್ನು ನಾವು ಯೋಚನೆ ಮಾಡಬೇಕು. ಸುಮಾರು ೪-೫ ವರ್ಷಗಳಿಂದ ಈ ರಾಜ್ಯದಲ್ಲಿ ಜನತಾ ಸರ್ಕಾರ ಆಡಳಿತದಲ್ಲಿದೆ. ಅದಕ್ಕಿಂತ ಹಿಂದೆ ಸುಮಾರು ೩೦-೩೫ ವರ್ಷಗಳವರೆಗೆ ಕಾಂಗ್ರೆಸ್ ಪಕ್ಷದ ಸರ್ಕಾರ ಈ ರಾಜ್ಯದಲ್ಲಿ ಆಡಳಿತದಲ್ಲಿತ್ತು. ಒಂದೊಂದು ಸಂದರ್ಭದಲ್ಲಿ ನೀವು ಮಾಡಿದ್ದು ಏನು ನೀವು ಮಾಡಿದ್ದು ಎಂಬುದಾಗಿ ಇಬ್ಬರೂ ಕೇಳುತ್ತಾರೆ. ಆದರೆ ನಾವು ಅಧಿಕಾರದಲ್ಲಿ ಇದ್ದಂತಹ ಈ ಇಬ್ಬರನ್ನೂ ಕುರಿತು ಕೇಳುವುದಕ್ಕೆ ಪ್ರಯತ್ನ ಮಾಡಿದ್ದೇವೆ.

ಈ ಕೃಷ್ಣಾ ಮೇಲ್ದಂಡೆ ಯೋಜನೆ ೧೯೬೩-೬೪ರಲ್ಲಿ ೨೫೦ ಕೋಟಿ ರೂಪಾಯಿಗಳ ವೆಚ್ಚದಲ್ಲಿ ತಯಾರಾದಂತಹ ಯೋಜನೆ. ೧೯೬೩ ರಲ್ಲಿ ಇದರ ಕೆಲಸವನ್ನು ಪ್ರಾರಂಭ ಮಾಡಿದರು. ನಮ್ಮ ಕರ್ನಾಟಕದಲ್ಲಿ ಆದಷ್ಟು ಮಟ್ಟಿಗೆ ಹಿಂದುಳಿದ ಪ್ರದೇಶವೆಂದರೆ, ಹೈದರಾಬಾದ್ ಕರ್ನಾಟಕದ ಭಾಗ ಹಾಗೂ ಬೊಂಬಾಯಿ ಕರ್ನಾಟಕದ ಭಾಗ. ಈ ಭಾಗದಲ್ಲಿರುವಂತಹ ನೀರಿನ ಸಂಪನ್ಮೂಲ ಅಂದರೆ ಕೃಷ್ಣಾ ನದಿ. ಆದ್ದರಿಂದ ಕೃಷ್ಣಾ ಮೇಲ್ದಂಡೆ ಯೋಜನೆಗೆ ವಿಶ್ವ ಬ್ಯಾಂಕಿನ ಸಹಾಯವನ್ನು ತೆಗೆದುಕೊಂಡು, ಅದನ್ನು ಸರಿಯಾಗಿ ಉಪಯೋಗ ಮಾಡಿಕೊಂಡು ಮಾಡಬಹುದಾಗಿತ್ತು. ೧೯೬೩ ರಲ್ಲಿ ಈ ಒಂದು ಕೆಲಸವನ್ನು ಪ್ರಾರಂಭ ಮಾಡಿದರು. ಬಚಾವತ್ ಕಮಿಷನ್ ಪ್ರಕಾರ ೨೦೦೦ನೇ ಇಸವಿಯ ಒಳಗೆ ನಮ್ಮ ಪಾಲಿನ ನೀರನ್ನು ಉಪಯೋಗ ಮಾಡಿಕೊಳ್ಳದಿದ್ದರೆ ನಮ್ಮ ರಾಜ್ಯಕ್ಕೆ ಅನ್ಯಾಯವಾಗುತ್ತದೆ, ನಮ್ಮ ಪಾಲಿನ ನೀರನ್ನೂ ಪಕ್ಕದ ರಾಜ್ಯದವರು ತೆಗೆದುಕೊಳ್ಳುತ್ತಾರೆಂಬುದಾಗಿ ಹಲವಾರು ಸಾರಿ ಇದೇ ಸದನದಲ್ಲಿ ಚರ್ಚೆ ಮಾಡಿದ್ದಾಗಿದೆ. ಅದರ ಬಗ್ಗೆ ಮಾನ್ಯ ಖರ್ಗೆಯವರು ಸವಿಸ್ತಾರವಾಗಿ ಚರ್ಚೆ ಮಾಡಿದ್ದಾರೆ. ಈ ಯೋಜನೆಯನ್ನು ಪೂರ್ಣಗೊಳಿಸಿದರೆ ೨೦ ಲಕ್ಷ ಎಕರೆಗೆ ನೀರಾವರಿಯಾಗು

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ತ್ತದೆ. ಹೈದರಾಬಾದ್ ಕರ್ನಾಟಕದ ಭಾಗ ''ದಕ್ಕನ್ ಪ್ರಸ್ತಭೂಮಿ'' ಇದ್ದ ಹಾಗೆ. ತಮಗೆ ಗೊತ್ತಿದ್ದ ಹಾಗೆ ಅಲ್ಲಿ ನೀರಾವರಿಯಾಗಿದ್ದೇ ಆದರೆ, ಅಲ್ಲಿರತಕ್ಕ ರೈತರಿಗೆ ಹೆಚ್ಚು ಅನುಕೂಲವಾಗಿ ಅವರ ಆರ್ಥಿಕ ಪರಿಸ್ಥಿತಿ ಪರಿವರ್ತನೆಗೊಳ್ಳುವಂತಹ ಒಂದು ಮಹತ್ತರವಾದ ಯೋಜನೆ ಇದು. ನನಗನ್ನಿಸಿದ ಮಟ್ಟಿಗೆ ಈ ಯೋಜನೆಯಾದರೂ ಜನರ ಆರ್ಥಿಕ ಪರಿಸ್ಥಿತಿ ಬದಲಾವಣೆಯಾಗುವ ಮಟ್ಟದಲ್ಲಿಲ್ಲ. ಅದಕ್ಕಾಗಿ ಈ ರಾಜ್ಯದ ನಾನಾ ಭಾಗದ ರೈತರು ಸುಮಾರು ೨೦ ಸಾವಿರ ಜನ ತಮ್ಮ ಸಮಸ್ಯೆಗಳನ್ನು ತೆಗೆದುಕೊಂಡು ಕರ್ನಾಟಕದ ರಾಜಧಾನಿಯಾದ ಬೆಂಗಳೂರಿಗೆ ಮೆರವಣಿಗೆ ಬಂದಿದ್ದರು. ಮಾನ್ಯ ಮುಖ್ಯಮಂತ್ರಿಗಳು, ಕೃಷಿ ಮಂತ್ರಿಗಳನ್ನು ಸರ್ಕಾರದ ಪರವಾಗಿ ಅಲ್ಲಿಗೆ ಕಳುಹಿಸಿ ಏನೇನು ಪರಿಹಾರವನ್ನು ಕೊಡುವುದಕ್ಕೆ ಸಾಧ್ಯ ಎಂಬುದನ್ನು ಅವರ ಮೂಲಕ ಹೇಳಿಸಿದರು. ಅದಕ್ಕಾಗಿ ಅವರಿಗೆ ನನ್ನ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ರೈತರಿಗೆ ಅವರದ್ದೇ ಆದ ಸಮಸ್ಯೆಗಳು ಇವೆ. ರೈತರಿಗೆ ಸಂಬಂಧಪಟ್ಟ ಹಾಗೆ ನೀರಾವರಿ ಇಲಾಖೆ ಇದೆ. ರೈತರ ಸಮಸ್ಯೆಯನ್ನು ನೀರಾವರಿ ಒಂದೇ ಬದಲಾವಣೆ ಮಾಡುತ್ತದೆನ್ನುವುದನ್ನು ನಾನು ಒಪ್ಪುವುದಿಲ್ಲ. ಇವತ್ತು ರೈತನು ಇರತಕ್ಕ ಪರಿಸರದಲ್ಲಿ ನಾವು ಬದಲಾವಣೆಯನ್ನು ತರಬೇಕಾಗುತ್ತದೆ. ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ೨ ಲಕ್ಷ ಎಕರೆ ಜಮೀನಿಗೆ ನೀರು ಬಿಡುತ್ತೇವೆಂದು ಹೇಳಿದಿರಿ. ಇದನ್ನು ಬಿಟ್ಟಿದ್ದರೂ ಕೂಡಾ ಈ ಪ್ರಾಜೆಕ್ಟ್ ಯಾವತ್ತೋ ಮುಗಿಯಬೇಕಾಗಿತ್ತು. ರೊಕ್ಕದ ಕೊರತೆಯಿಂದ ಇನ್ನೂ ಇದು ಮುಗಿದಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಬಿಜಾಪುರದಲ್ಲಿ ಹೇಳಿರುವ ವಿಷಯ ೧೧-೧೧-೧೯೮೭ರ ಪತ್ರಿಕೆಯಲ್ಲಿ ಬಂದಿದೆ. ೧೯೮೭ ರಿಂದ ಮುಂಬರುವ ವರ್ಷಗಳಲ್ಲಿ ನಾನು ಮೂರು ವರ್ಷದಲ್ಲಿ ನೀರಾವರಿಗೆ ೩೦೦ ಕೋಟಿ ರೂಪಾಯಿಯಂತೆ ಕೊಡುತ್ತೇನೆ ಎಂದು ಹೇಳಿದ್ದಾರೆ. ಈ ಪ್ರಕಾರ ೧೯೮೭-೮೮ ರಲ್ಲಿ ೩೦೦ ಕೋಟಿ, ೧೯೮೮-೮೯ಕ್ಕೆ ೩೦೦ ಕೋಟಿ ಹಾಗೂ ೧೯೮೯-೯೦ಕ್ಕೆ ೩೦೦ ಕೋಟಿ ರೂಪಾಯಿಯಂತೆ ೧೦೦೦ ಕೋಟಿ ರೂಪಾಯಿ ಮುಂಬರುವ ವರ್ಷಗಳಲ್ಲಿ ನೀರಾವರಿಗೆ ಕೊಡುತ್ತೇವೆಂದು ಹೇಳಿದ್ದಾರೆ. ಹೋದವರ್ಷ ನೀರಾವರಿಗೆ ಎಷ್ಟು ಹಣವನ್ನು ಕೊಟ್ಟಿದ್ದಾರೆಂದು ಎಲ್ಲರಿಗೂ ಗೊತ್ತಿರುವ ವಿಷಯವೇ. ಮಾನ್ಯ ದೇವೇಗೌಡರು ರಾಜೀನಾಮೆಯನ್ನು ಕೊಟ್ಟರು. ಆ ಬಗ್ಗೆ ನಾನು ಪ್ರಸ್ತಾಪ ಮಾಡಲು ಹೋಗುವುದಿಲ್ಲ. ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಕಡೆಗಾಣಿಸುತ್ತಿರುವ ಬಗ್ಗೆ ಹೇಳಿದರೆ ೮೨ ರವರೆಗೆ ನೀವು ಏನು ಮಾಡಿದಿರಿ, ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಎಷ್ಟು ಹಣ ಈ ಯೋಜನೆಗೆ ತೊಡಗಿಸಿತ್ತು, ೨೫ ವರ್ಷಗಳಲ್ಲಿ ನೀವು ಏನು ಕೊಟ್ಟಿರಿ ಎಂದು ಕೇಳಬಹುದು. ಕಾಂಗ್ರೆಸ್‌ನವರು ಏನು ಕೊಟ್ಟಿಲ್ಲ ಎಂದರೂ ನೀವು ಆದಷ್ಟು ಮಟ್ಟಿಗೆ ಪ್ರಯತ್ನ ಮಾಡಿದ್ದೀರಿ. ಆದರೆ ನೀವು ಏನು ಹಣ ಕೊಡುತ್ತಿದ್ದೀರಿ ಅದರಿಂದ ಇಷ್ಟು ದೊಡ್ಡ ಪ್ರಾಜೆಕ್ಟ್‌ಗೆ ಏನೂ ಉಪಯೋಗವಿಲ್ಲ. ನೀವು ಕೊಟ್ಟ ಹಣ ಸಾಕಾಗುವುದಿಲ್ಲ. ಆ ಭಾಗದ ಜನರ ಸಮಸ್ಯೆ ಬಗೆಹರಿಯಬೇಕಾದರೆ. ಆ ಭಾಗದ ರೈತರ ಜೀವನ ಮಟ್ಟ ಸುಧಾರಿಸಬೇಕಾದರೆ ನೀವು ಕೃಷ್ಣಾ ಯೋಜನೆಗೆ ಬಹಳ ಹಣ ಕೊಡಬೇಕು.

ಎರಡನೆಯದಾಗಿ, ಬೆಣ್ಣೆತೊರ ಪ್ರಾಜೆಕ್ಟ್ ಗುಲ್ಬರ್ಗಾ ಜಿಲ್ಲೆಯ ಪ್ರಾಜೆಕ್ಟ್ ಇದೆ. ಈ ಯೋಜನೆಯ ಎಸ್ಟಿಮೇಟ್ ೧೯೭೬ ರಲ್ಲಿ ೧೨ ಕೋಟಿ ೨೭ ಲಕ್ಷ ರೂಪಾಯಿಗಳಿಗೆ ಆಯಿತು. ಮತ್ತೆ ೧೯೮೫-೮೬ರಲ್ಲಿ ಈ ಯೋಜನೆ ೫೦ ಕೋಟಿ ೧೨ ಲಕ್ಷ ರೂಪಾಯಿಗಳಿಗೆ ರೀಎಸ್ಟಿಮೇಟ್ ಆಯಿತು. ಈಗ ನಾವು ೧೯೮೮ ರಲ್ಲಿ ಇದ್ದೇವೆ. ಎಂದರೆ ಕಳೆದ ೨ ವರ್ಷಗಳಲ್ಲಿ ಈ ಪ್ರಾಜೆಕ್ಟ್‌ಗೆ ಬೇಕಾದ ಹಣ ೭೦ ಕೋಟಿ ರೂಪಾಯಿ ಮೀರುತ್ತದೆ ಎಂದರೆ ಆಶ್ಚರ್ಯಪಡಬೇಕಾಗಿಲ್ಲ. ಈ ಪ್ರಾಜೆಕ್ಟ್ ಕೂಡಾ ಇನ್ನೂ ಮುಗಿದಿಲ್ಲ. ಈ ಪ್ರಾಜೆಕ್ಟನ್ನು ಸೀರಿಯಸ್ಸಾಗಿ ತೆಗೆದುಕೊಳ್ಳದೇ ಇದ್ದರೆ ಅಲ್ಲಿಯ ರೈತರಿಗೆ ಏನೂ ನ್ಯಾಯವನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ನಮ್ಮ ಭಾಗದಲ್ಲಿ ಯಾವುದೇ ಯೋಜನೆಗಳ ಪೂರ್ಣಗೊಂಡಿಲ್ಲ. ಕಾರಂಜ ಯೋಜನೆ ಹಾಗೆಯೇ ಉಳಿದಿದೆ. ೧೯೭೬-೭೭ರಲ್ಲಿ ೯೦ ಲಕ್ಷ ರೂಪಾಯಿಗೆ ಎಸ್ಟಿಮೇಟ್ ಮಾಡಿದ್ದು ೩೫,೭೧೪ ಹೆಕ್ಟೇರ್‌ಗೆ ನೀರು ಒದಗಿಸುತ್ತೇವೆಂದು ಹೇಳಿದಿರಿ. ೧೯೮೫-೮೬ ರಲ್ಲಿ ಇದು ಮತ್ತೆ ೮೯೭ ಲಕ್ಷ ರೂಪಾಯಿಗಳಿಗೆ ರೀಎಸ್ಟಿಮೇಟ್ ಆಗಿದೆ. ಆದ್ದರಿಂದ ದಿನದಿನ ಕಳೆದಂತೆ ಅದರ ಕಾಸ್ಟ್ ಕೂಡಾ ಹೆಚ್ಚು ಆಗುತ್ತಾ ಹೋಗುತ್ತದೆ. ಆಯಾ ಕಾಲದಲ್ಲಿನ ಆರ್ಥಿಕ ಸ್ಥಿತಿಯನ್ನು ಗಮನದಲ್ಲಿ ಇಟ್ಟುಕೊಂಡು ಅಧಿಕಾರಿಗಳು ಒಂದು ಕಾಸ್ಟ್ ಲೆಕ್ಕ ಮಾಡಿರುತ್ತಾರೆ.

ತಾವು ಪ್ಲಾನಿಂಗ್ ಮಂತ್ರಿಗಳು ಇದ್ದೀರಿ. ತಮಗೆ ಅಟ್‌ಲಿಸ್ಟ್ ಒಂದು ಐಡಿಯಾ ಇರಬೇಕು. ಈ ಪ್ರಾಜೆಕ್ಟ್ ಅನ್ನು ನಾನು ೧೦ ವರ್ಷಗಳಲ್ಲಿ ಮುಗಿಸಬೇಕು, ಸಾಮಾನಿನ ಬೆಲೆ ಎಲ್ಲಿಯ ತನಕ ಹೋಗಬಹುದು, ಅದರ ಕಾಸ್ಟ್ ಎಷ್ಟಾಗಬಹುದು ಅದನ್ನು ತಾವು ಎಂದೂ ಯೋಚನೆ

ಮಾಡುವುದಿಲ್ಲ. ವರ್ಷೇ ವರ್ಷೇ ಕಾಸ್ಟ್ ಚೇಂಜ್ ಆಗುತ್ತಾ ಹೋಗುತ್ತದೆ. ತಾವು ಕೊಟ್ಟ ೧೯೮೪-೮೫ರ ವರದಿಯಲ್ಲಿ ನಾನು ನೋಡಿದ್ದೇನೆ ಸ್ವಾಮಿ. ಲಾಳಪುರ ಟ್ಯಾಂಕ್ ಶಹಬಾದ್ ಕ್ಷೇತ್ರದಲ್ಲಿ ಬರುತ್ತದೆ. ಬಸಪ್ಪ ಟ್ಯಾಂಕ್‌ನ ಸರ್ವೆ ಕೆಲಸ ೧೯೭೭ರಲ್ಲಿ ಮುಗಿದಿದೆ. ೧೯೮೫ರಲ್ಲಿ ಸಣ್ಣ ನೀರಾವರಿ ಮಂತ್ರಿಗಳಾಗಿದ್ದ ಮಾನ್ಯ ಲಕ್ಷ್ಮೀಪತಿಯವರು ಅದನ್ನು ಬಜೆಟ್‌ನಲ್ಲಿ ಸೇರಿಸಿದರು. ೧೯೮೬-೮೭, ೧೯೮೭-೮೮, ೧೯೮೮-೮೯ರಲ್ಲಿ ಅದು ಇಲ್ಲವೇ ಇಲ್ಲ. ೧೦ ಸಾವಿರ ರೂಪಾಯಿ ಟೋಕನ್ ಅಡ್ವಾನ್ಸ್ ಕೊಟ್ಟಿದ್ದಾರೆ. ಆ ಟ್ಯಾಂಕ್ ಕೆಲಸ ಕಂಪ್ಲೀಟ್ ಆದರೆ ನಾಲ್ಕೈದು ಸಾವಿರ ಎಕರೆ ನೀರಾವರಿಯಾಗುತ್ತದೆಂದು ನಮಗೆ ಸಂತೋಷವಿತ್ತು. ಲಾಳಪುರಟ್ಯಾಂಕ್, ಮನೆಗೆ ಹೋಯಿತು. ಕೊಲ್ಲೂರು ಟ್ಯಾಂಕಿನ ವಿಚಾರದಲ್ಲಿ ಅಲ್ಲಿದ್ದ ಎಕ್ಸಿಕುಟೀವ್ ಇಂಜಿನಿಯರ್ ಮೇಲೆ ಅಲಿಗೇಷನ್ ಬಂದು ಅವರನ್ನು ಸಸ್ಪೆಂಡ್ ಮಾಡಿದ್ದಾರೆ. ಅಲ್ಲಿ ಅದು ನಡೆದಿದೆ, ನಮ್ಮ ಭಾಗದಲ್ಲಿ ಯಾವುದೇ ಕೆಲಸ ತೆಗೆದುಕೊಂಡರೂ ಇದುವರೆಗೆ ಮುಗಿದಿಲ್ಲ ಮುಗಿಸುವಂತಹ ಪರಿಸ್ಥಿತಿಯಲ್ಲಿಯೂ ಇಲ್ಲ ಜನತಾ ಸರ್ಕಾರದ ಅವಧಿ ಇನ್ನು ೧೮ ತಿಂಗಳುಗಳಲ್ಲಿ ಮುಗಿಯುತ್ತದೆ. ೧೯೮೫ರಲ್ಲಿ ಬಂದಿದ್ದೀರಿ ನಿಮಗೆ ಇನ್ನು ೧೮ ತಿಂಗಳು ಚಾನ್ಸ್ ಇದೆ.

ಒಬ್ಬ ಮಾನ್ಯ ಸದಸ್ಯರು.—ಆಮೇಲೆ ನಿಮ್ಮ ಪಕ್ಕದಲ್ಲಿರುವವರು ಮಾಡುತ್ತಾರೆಯೇ ?

SRI K. B. SHANAPPA.—You have got only 18 months chance and then you to go the people. ಅವರು ನಿಮ್ಮ ಹಾಗೆ ಮಾಡಿದ್ದಕ್ಕೆ ಇಲ್ಲಿ ಕುಳಿತಿದ್ದಾರೆ. ನೀವು ಹೀಗೆ ಮಾಡಿದರೆ ನಿಮ್ಮ ಹಣೆಯ ಬರಹವೂ ಹಾಗೇ ಆಗುತ್ತದೆ. ಅದಕ್ಕೆ ನೀವು ಕೇರ್‌ಫುಲ್ಲಾ ಆಗಿ ಇರಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಯಾರೇ ಆಳಿದರೂ, ಅವರೇ ಆಳಲಿ ನಾವೇ ಆಳಲಿ ಯಾರು ಏನೇ ಮಾಡಿದರೂ ನೀವು ಅಳುತ್ತಾ ಇರುವುದಕ್ಕೆ ಏನು ತೊಂದರೆಯಿಲ್ಲ, ನೀವು ಅಳುತ್ತಾ ಇರಬಹುದು.

ಶ್ರೀ ಕೆ.ಬಿ. ಶಾಣಪ್ಪ.—ದಯಮಾಡಿ ನೀವು ಏನಾದರೂ ಮಾಡಿ ಇರಿಗೇಷನ್ ಡಿಪಾರ್ಟ್‌ಮೆಂಟ್‌ಗೆ ಹೆಚ್ಚು ಹಣವನ್ನು ಕೊಡಬೇಕು. ವರ್ಲ್ಡ್ ಬ್ಯಾಂಕಿನವರು ೬೦೦ ಕೋಟಿ ರೂಪಾಯಿ ಕೊಟ್ಟಿದ್ದಾರೆ. ಅದರಲ್ಲಿ ನಮಗೆ ೩೨೦ ಕೋಟಿ ಬರುತ್ತದೆ. ಅದರ ಬಗ್ಗೆ ಎಸ್ಟಿಮೇಟ್ ಕಮಿಟಿಯಲ್ಲಿ ಚರ್ಚೆ ಮಾಡಿದ್ದೇವೆ. ಸೆಂಟ್ರಲ್‌ನವರನ್ನು ಏತಕ್ಕೆ ಕಡಿಮೆ ಕೊಡುತ್ತೀರಿ ಎಂದು ಕೇಳಿದ್ದಕ್ಕೆ ಒಂದು ರೀಸನ್ ಕೊಟ್ಟರು ಡಾಲರ್ ಬೆಲೆ ಹೆಚ್ಚಾಯಿತು ಹಾಗೆ ಹೀಗೆ ಎಂದು ಹೇಳಿ ಕಡಿಮೆ ಕೊಡುತ್ತೇವೆಂದು ಹೇಳುತ್ತಾರೆ. ಏನೇ ಮಾಡಿದರೂ ತಾವು ಯು.ಕೆ.ಪಿ.ಯನ್ನು ಮರೆಯ ಬಾರದು. ನಮ್ಮ ಕೆಲಸ ಮಾಡಿ ಬೇರೆ ಪ್ರಾಜೆಕ್ಟ್‌ಗಳ ಕೆಲಸವನ್ನು ನಿಲ್ಲಿಸಿ ಎಂದು ನಾನು ಹೇಳುವುದಿಲ್ಲ. ಆದಷ್ಟು ಮಟ್ಟಿಗೆ ನಮ್ಮ ಭಾಗವನ್ನು ಗಮನದಲ್ಲಿಟ್ಟುಕೊಳ್ಳಬೇಕು. ೧೯೫೧ಕ್ಕಿಂತ ಮುಂಚೆ ೨೫ ಸಾವಿರ ಟ್ಯಾಂಕುಗಳು ಹಳೆಯ ಮೈಸೂರಿನಲ್ಲಿದ್ದವು ಆ ಅಂಕಿ ಅಂಶಗಳನ್ನು ತಾವೇ ಕೊಟ್ಟಿದ್ದೀರಿ, ೧೯೫೨ರಿಂದ ೧೯೮೭ರ ಮಾರ್ಚಿಯ ತನಕ ತಾವು ನೀರಾವರಿಗಾಗಿ ಖರ್ಚು ಮಾಡಿರತಕ್ಕದ್ದು ೨,೦೮೬ ಕೋಟಿ. ೩೬–೩೭ ವರ್ಷಗಳಲ್ಲಿ ೨,೦೮೬ ಕೋಟಿ ರೂಪಾಯಿಗಳನ್ನು ನೀರಾವರಿಗಾಗಿ ಖರ್ಚು ಮಾಡಿದ್ದೀರಿ. ಆದರೂ ನೀರಾವರಿಯ ಸಮಸ್ಯೆ ಬಗೆಹರಿದಿಲ್ಲ. ರಾಜ್ಯದ ೩–೪ ಕೋಟಿ ಜನಸಂಖ್ಯೆಯಲ್ಲಿ ಶೇಕಡ ೮೦ರಷ್ಟು ರೈತರು ಇದ್ದಾರೆ. ರೈತರ ಸಮಸ್ಯೆಯನ್ನು ಈ ಸದನದಲ್ಲಿ ಅನೇಕ ಸಲ ಚರ್ಚೆ ಮಾಡಿದ್ದೇವೆ. ಇದು ರೈತರಿಂದ ಬಂದಂತಹ ಸರ್ಕಾರ. ನಾವು ಅಧಿಕಾರಕ್ಕೆ ಬಂದ ಮೇಲೆ ೫ ಚುನಾವಣೆಗಳನ್ನು ಮಾಡಿದ್ದೇವೆ, ೮ ಚುನಾವಣೆಗಳನ್ನು ನೋಡಿದ್ದೇವೆಂದು ಹೇಳುತ್ತೀರಿ. ನೀವು ೧೦ ಚುನಾವಣೆಗಳನ್ನು ಮಾಡಿ ನಾವು ಬೇಡವೆನ್ನುವುದಿಲ್ಲ. ಚುನಾವಣೆಗಳಿಂದ ಜನರ ಸಮಸ್ಯೆ ಬಗೆಹರಿಯುವುದಿಲ್ಲ. ನಿಮ್ಮದು ಮಂಡಲ ಪಂಚಾಯತಿ ಚುನಾವಣೆಯಾಗಿರಬಹುದು, ಕೌನ್ಸಿಲ್ ಚುನಾವಣೆಯಾಗಿರಬಹುದು ಅಸೆಂಬ್ಲಿ ಚುನಾವಣೆಯಲ್ಲಿ ೧೦ ಸಲ ಆರಿಸಿ ಬಂದಿರಬಹುದು, ಲೋಕಸಭೆಗೆ ಮೂರು ಸಲ ಆರಿಸಿ ಹೋಗಿರಬಹುದು. ಚುನಾವಣೆ ಮಾಡುವುದರಿಂದ ಬೆಲೆ ಬರುವುದಿಲ್ಲ. ತಾವು ಕೈಗಾರಿಕಾ ಸಚಿವರಾಗಿದ್ದಾಗ ಒಂದು ಮನೆಗೆ ಒಂದು ನೌಕರಿ ಕೊಡುತ್ತೇವೆಂದು ಹೇಳಿದ್ದೀರಿ ತಿಂಗಳಿಗೆ ಒಂದು ಸಾವಿರ ಕೈಗಾರಿಕೆಗಳನ್ನು ತೆಗೆಯುತ್ತೇವೆಂದು ಹೇಳಿದಿರಿ. ಅವುಗಳನ್ನು ಜನಗಳಿಗೆ ಹೇಳಿರಬಹುದು. ಇದೆಲ್ಲಾ ಮಾಡಿದ್ದೇವೆಂದು ಹೇಳಬಹುದು. ಅದು ಮಾಡಿದ್ದೇವೆ, ಇದು ಮಾಡಿದ್ದೇವೆಂದು ಹೇಳಿದರೆ ಜನ ಅದನ್ನು ನೋಡುವುದಿಲ್ಲ. ಜನ ನೋಡುವುದು ಏನು ? ನಾನು ರೈತ ಹಳ್ಳಿಯಲ್ಲಿದ್ದೇನೆ ನನ್ನ ಮಗನ ಪರಿಸ್ಥಿತಿಯೇನು, ನನ್ನ ಹೊಲಕ್ಕೆ ನೀರು ಬರುತ್ತದೆಯೇ, ದನಗಳಿಗೆ

ನೀರು ಮೇವು ಸಿಗುತ್ತದೆಯೇ. ಬರಗಾಲ ಬಂದಾಗ ಸರ್ಕಾರ ಏನು ಪರ್‌ಫಾರ್ಮೆನ್ಸ್ ಮಾಡಿದೆ. ಇರಿಗೇಷನ್ ಪ್ರಾಜೆಕ್ಟ್‌ಗಳಲ್ಲಿ ಇಂತಿಷ್ಟು ಕೆಲಸ ಆಗಿದೆಯೇ ಎಂಬುದನ್ನು ಜನ ನೋಡುತ್ತಾರೆ. ನೀವು ಮಾಡಿದ್ದು ಎಲ್ಲವೂ ತಪ್ಪು ಎಂದು ನಾನು ಹೇಳುವುದಿಲ್ಲ. ಕೆಲವು ಕಡೆ ಒಳ್ಳೆಯ ಕೆಲಸ ಮಾಡಿರಬಹುದು. ತಾಳಿಭಾಗ್ಯ ಯೋಜನೆಯನ್ನು ಬೇರೆ ವಾಪಸ್ಸು ತೆಗೆದುಕೊಂಡಿರಿ ಆದರೆ ಯಾವ ರೈತನಿಗೆ ಆಶ್ವಾಸನೆ ಯನ್ನು ಕೊಟ್ಟು ಬಂದಿದ್ದೀರಿ. ಯಾವ ರೈತನ ಹೊಲಕ್ಕೆ ನೀರು ಕೊಡುತ್ತೇವೆ ಎಂದು ಹೇಳಿದ್ದೀರಿ. ೧೯೯೬ರೊಳಗೆ ಯು.ಕೆ.ಪಿ.ಯಲ್ಲಿ ನೀರು ಒದಗಿಸಿಕೊಡುತ್ತೇವೆ ಎಂದು ಶ್ರೀ ದೇವೇಗೌಡರು ಹೇಳಿದ್ದರು. ಇದು ಇಲ್ಲಿದೆ.

೧೯-೪-೮೫ರ ಕನ್ನಡ ಪ್ರಭದಲ್ಲಿ ಬಂದಿರುವುದು ಇದು, ೧೯೯೦ರಲ್ಲಿ ಯು ಕೆ.ಪಿ. ಪೂರ್ಣ ಗೊಳಿಸುವುದಾಗಿ ಬಾಗಲಕೋಟೆಯಲ್ಲಿ ಅವರು ಎಂದರೆ ಶ್ರೀ ಹೆಚ್ ಡಿ. ದೇವೇಗೌಡರು ಹೇಳಿಕೆ ನೀಡಿದರು. ಆಕಾಲವೂ ಹೋಯಿತು. ಪ್ರತಿಯೊಬ್ಬರೂ ಒಂದೊಂದು ಭರವಸೆಯನ್ನು ಈ ರಾಜ್ಯದ ಜನತೆಗೆ ಕೊಟ್ಟಿದ್ದಾರೆ ಎಷ್ಟರ ಮಟ್ಟಿಗೆ ಅವುಗಳನ್ನು ಫುಲ್‌ಫಿಲ್ ಮಾಡಿದ್ದೀರಿ ಎಂದು ದಯವಿಟ್ಟು ಹಾಳೆಗಳನ್ನು ತೆಗೆದುನೋಡಿ. ಎಲ್ಲಿಯವರೆಗೆ ನೀವು ಹಾಗೆ ಮಾಡುವುದಿಲ್ಲ ಅಲ್ಲಿಯವರೆಗೆ ನಾವು ಹೇಳುತ್ತಲೇ ಇರುತ್ತೇವೆ. ನೀವು ಕೊಟ್ಟಂಥ ಭರವಸೆಗಳಾಗಲೀ, ಪರ್‌ಫಾರ್ಮೆನ್ಸ್ ಬಡ್ಜೆಟ್ ಆಗಲಿ, ಬೇರೆಬೇರೆ ಇಲಾಖೆಗಳ ಬೇಡಿಕೆಗಳನ್ನು ಇಟ್ಟಾಗ ವರ್ಷ ವರ್ಷವೂ ನಾವು ಇದೇ ಮಾತನ್ನು ಆಡುತ್ತೇವೆ. ಪ್ರತಿವರ್ಷವೂ ಸರ್ಕಾರದ ತಪ್ಪುಗಳನ್ನು ನಾವು ಕೇಳುತ್ತೇವೆ. ತಿದ್ದಿಕೊಳ್ಳಿರಿ ನೀವು, ರಾಜ್ಯದ ಜನತೆಯ ಸಮಸ್ಯೆಗಳನ್ನು ಪರಿಹರಿಸಿ ಎಂದು ಹೇಳುತ್ತೇವೆ. ನೀವು ಅದನ್ನು ಮಾಡದೇ ಇದ್ದರೆ ಯಾರು ನಿಮ್ಮನ್ನು ಆರಿಸಿ ಕಳಿಸುತ್ತಾರೆ. ಅವರೇ ಅದನ್ನು ಫೈಸಲ್ ಮಾಡುತ್ತಾರೆ. ಕೊನೆಯದಾಗಿ ಈ ಕಂದಾಯ ಇಲಾಖೆಯ ಬಗ್ಗೆ ಕೆಲವು ಮಾತನ್ನು ಹೇಳಬೇಕು.

ಇದಕ್ಕೆ ಮುಂಚಿತವಾಗಿ ಅಧ್ಯಕ್ಷರೇ, ಇವರು ಇನ್ನೊಂದು ಟ್ಯಾಂಕ್ ಇರಿಗೇಷನ್ ಪ್ರಾಜೆಕ್ಟ್ ಅನು ತೆಗೆದುಕೊಂಡಿದ್ದಾರೆ. ಟ್ಯಾಂಕ್ ಇರಿಗೇಷನ್ ಪ್ರಾಜೆಕ್ಟ್ ೧೯೮೪ರಲ್ಲಿ ಆಯಿತು. ವರ್ಲ್ಡ್ ಬ್ಯಾಂಕ್ ನಿಂದ ಲೋನ್ ತೆಗೆದುಕೊಂಡು ಇದನ್ನು ನಾಲ್ಕು ವರ್ಷಗಳಲ್ಲಿ ಮುಗಿಸುತ್ತೇವೆ ಎನ್ನುವ ಒಂದು ಕಂಡೀಷನ್ ಇದೆ. ಇದುವರೆಗೂ ಇದನ್ನು ಕಂಪ್ಲೀಟ್ ಮಾಡಿಲ್ಲ. ಆಮೇಲೆ ಸೆಂಟ್ರಲ್ ಗವರ್ನ ಮೆಂಟಿಗೆ, ವರ್ಲ್ಡ್ ಬ್ಯಾಂಕ್‌ಗೆ ಪತ್ರ ಬರೆದು ಸಮಯ ಎಕ್ಸ್‌ಟೆಂಡ್ ಮಾಡಿ ಎಂದು ಪತ್ರ ಬರೆದಿರುವುದಾಗಿ ಹೇಳುತ್ತಾರೆ. ನೀವು ಅಧಿಕಾರಕ್ಕೆ ಬಂದ ಮೇಲೆ ಹಾಕಿಕೊಂಡಂಥ ಪ್ರೋಗ್ರಾಂಗಳು ನಿಮ್ಮಿಂದ ಕೂಡ ಆಗಿಲ್ಲ. ನಾಲ್ಕು ವರ್ಷ ಕಾಲಾವಧಿಯ ಯೋಜನೆ ಇದು, ಅದಕ್ಕೆ ಬೇಕಾದಂಥ ಆರು ಕೋಟಿ ರೂಪಾಯಿಗಳನ್ನು ವರ್ಲ್ಡ್‌ಬ್ಯಾಂಕ್‌ನವರು ಕೊಡುತ್ತೇವೆ ಎಂದು ಹೇಳಿದ್ದರು. ಆದರೆ ಇದುವರೆಗೂ ಅದನ್ನು ಮಾಡಿಲ್ಲ. ಇದಕ್ಕೆ ಜವಾಬು ಯಾರು ಕೊಡಬೇಕು ? ವರ್ಲ್ಡ್‌ಬ್ಯಾಂಕ್‌ನವರು ನಿಮಗಾಗಿ ಕಾದು ಕುಳಿತಿರುತ್ತಾರಾ? ಇದೇ ಪ್ರಕಾರ ಅನೇಕ ಮೈನರ್ ಇರಿಗೇಷನ್ ಸ್ಕೀಮ್‌ಗಳು. ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್ ಬೇರೆ ಮಾಡಿದ್ದೀರಿ. ಸುಮಾರು ಸಾವಿರಾರು ಲಿಫ್ಟ್ ಇರಿಗೇಷನ್ ಸ್ಕೀಮ್‌ಗಳು ನಮ್ಮ ಹತ್ತಿರ ಇವೆ. ಎಲ್ಲಿಯೂ ಈ ಸ್ಕೀಮ್ ಅನ್ನು ರೈತರ ಉಪಯೋಗ ಮಾಡಿಕೊಂಡಿಲ್ಲ. ಸಣ್ಣತೇರಿ ಲಿಫ್ಟ್ ಇರಿಗೇಷನ್ ಸ್ಕೀಮ್ ಇದೆ. ಚಿತಾಪ್ಪುರ ತಾಲ್ಲೂಕಿನಲ್ಲಿ. ಸುಮಾರು ೧೫ ವರ್ಷ ಆಯಿತು. ಸರ್ಕಾರಿ ಲೆಕ್ಕದಲ್ಲಿ ಇದು ಕಂಪ್ಲೀಟ್ ಆಗಿದೆ. ಆದರೆ ಒಂದು ಎಕರೆ ಜಮೀನಿಗೂ ಕೂಡ ಇದುವರೆಗೂ ನೀರು ಕೊಟ್ಟಿಲ್ಲ. ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್, ಎಕ್ಸಿಕ್ಯೂಟಿವ್ ಇಂಜಿನಿಯರ್, ಜಿಲ್ಲೆಯ ಅಧಿಕಾರಿಗಳು, ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಹೋಗಿ ೧೯೮೪ರಲ್ಲಿ ಇನ್ಸ್‌ಪೆಕ್ಷನ್ ಮಾಡಿದ್ದಾರೆ. ಇಲ್ಲಿ ಪ್ರಾಕ್ಟಿಕಲ್ ಆಗಿ ಟೆಕ್ನಿಕಲ್ ಡಿಫೆಕ್ಟ್ ಇದೆ. ಅಲ್ಲಿ ನೀರೇ ಬರುವುದಿಲ್ಲ. ಇದನ್ನು ಆದಷ್ಟು ಮಟ್ಟಿಗೆ ಸುಧಾರಿಸಬೇಕು ಎಂದು ನಾವು ನೂರು ಸಲ ಹೇಳಿದ್ದೇವೆ. ಎರಡು-ಮೂರು ಕೋಟಿ ರೂಪಾಯಿ ಗಳನ್ನು ಖರ್ಚು ಮಾಡುವಂಥ ಅಧಿಕಾರ ನಿಮಗೆ ಇಲ್ಲ. ಆದರೆ ರಾಜ್ಯದ ಜನತೆ, ಟ್ಯಾಕ್ಸ್ ರೂಪದಲ್ಲಿ ಕೊಟ್ಟಂಥ ಹಣ ಸದುಪಯೋಗ ಆಗಬೇಕೇ ಹೊರತಾಗಿ ಯಾರೋ ಇಂಜಿನಿಯರ್ ಮಾಡಿದಂಥ ಶ್ರೀ ತಪ್ಪಿಗೆ ಖರ್ಚಾಗಲಿಕ್ಕೆ ಅಲ್ಲ. ಇದು ಏಕೆ ಫೇಲ್ಯೂರ್ ಆಯಿತು ? ಇಟ್ಕಾ ಲಿಫ್ಟ್ ಇರಿಗೇಷನ್ ಧರ್ಮಸಿಂಗ್ ಅವರ ಕಾನ್ಸ್‌ಸ್ಟಿಟ್ಯೂಯೆನ್ಸಿಯಲ್ಲಿದೆ. ಸುಮಾರು ಹತ್ತು-ಹನ್ನೆರಡು ವರ್ಷಗಳಾಯಿತು. ಇನ್ನು ಎಂಟು-ಹತ್ತು ಲಕ್ಷ ಖರ್ಚು ಮಾಡಿದರೆ ಈ ಲಿಫ್ಟ್ ಇರಿಗೇಷನ್ ಪೂರ್ತಿಯಾಗುತ್ತದೆ. ೧೯೮೭-೮೮ರಲ್ಲಿ......

ಶ್ರೀ ಹೆಚ್.ಡಿ. ದೇವೇಗೌಡ.—ಈ ಕೆಲಸ ಆಗಿರುವ ಹಿಸ್ಟರಿಯೆಲ್ಲಾ ಅವರಿಗೆ ಗೊತ್ತಿದೆ. ಇದು ಹೇಗೆ, ಏಕೆ ಏನು ಎಂಬುದು ಅವರಿಗೆ ಗೊತ್ತು. ಲ್ಯಾಂಡ್ ಆರ್ಮಿಯಿಂದ ನಡೆದಂಥ ಕೆಲಸ ಇದು. ಕ್ಯಾನಲ್ ಸಿಸ್ಟಮ್‌ಗೆ ಎಸ್ಟಿಮೇಟೇ ಇಲ್ಲ, ಇನಾಗ್ಯುರೇಷನ್ ಮಾಡುವುದಕ್ಕೆ ನಾನು ಮತ್ತು ಅವರು ಹೋಗಿದ್ದೆವು, ಇದರ ಬಗ್ಗೆ ಚರ್ಚೆ ಬೇಡ.

೨-೦೦ ಪಿ.ಎಂ.

ಅದರ ಬಗ್ಗೆ ನಾನಾ ಕಾರಣಗಳು ಇವೆ, ಸರಿಪಡಿಸುವುದು ಹೇಗೆ ಎಂದು ಹೇಳಿ. ಹಿಂದೆ ಆಗಿದ್ದರ ಬಗ್ಗೆ ಸಾಕಷ್ಟು ಚರ್ಚೆ ಮಾಡಿದ್ದೇವೆ. ಅಗ ಯಾರು ಇದ್ದರು ಎಂಬ ಬಗ್ಗೆ ವಾದ ಮಾಡುವುದರ ಬದಲು ಸರಿ ಮಾಡುವುದರ ಬಗ್ಗೆ ಸಲಹೆ ಕೊಡಿ. ಈಗ ಹೊಸ ನೀರಾವರಿ ಮಂತ್ರಿಗಳು ಇದ್ದಾರೆ......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಮಗೆ ಪಿ.ಡಬ್ಲ್ಯು.ಡಿ. ಮತ್ತು ಇರಿಗೇಷನ್‌ಗಿಂತ ಲ್ಯಾಂಡ್ ಆರ್ಮಿ ಕಾರ್ಪೊರೇಷನ್ ಮೇಲೆ ಹೆಚ್ಚು ಒಲವು ಇದೆ, ನಿಮಗೆ, ನಿಮ್ಮ ಮೇಲೆ ನಂಬಿಕೆ ಇಲ್ಲ, ಬೇರೆಯವರ ಮೇಲೆ ನಂಬಿಕೆ ಜಾಸ್ತಿ.

ಶ್ರೀ ಕೆ.ಬಿ. ಶಾಣಪ್ಪ.—ಈ ಪ್ರಕಾರವಾಗಿ ಅನೇಕ ನ್ಯೂನತೆಗಳು ಇರತಕ್ಕ ಸ್ಕೀಮುಗಳು ಇವೆ. ಇದೇರೀತಿಯಾಗಿ ಫಿರೋಜಾಬಾದ್ ಯೋಜನೆಯೂ ಆಗಿದೆ. ಈ ಇರಿಗೇಷನ್ ಸ್ಕೀಮ್ಸ್‌ಗಾಗಿ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ. ಇದರ ಬಗ್ಗೆ ತಾವು ಏನಾದರೂ ಸರ್ವೆ ಮಾಡಿದ್ದೀರಾ ? ಈಗ ಮೈನರ್ ಇರಿಗೇಷನ್ ಮುಖಾಂತರ ಟ್ಯಾಂಕ್‌ಗಳನ್ನು ಕಟ್ಟುತ್ತೇವೆ. ಈ ಟ್ಯಾಂಕುಗಳು ರೆಡಿಯಾದ ನಂತರ, ಇದರ ನೀರನ್ನು ಎಷ್ಟು ಎಕರೆ ಜಮೀನಿಗೆ ರೈತ ಉಪಯೋಗ ಮಾಡಿಕೊಳ್ಳುತ್ತಾನೆ ಎಂಬುದನ್ನು ವಿಚಾರಿಸಿದ್ದೀರಾ ? ನೀವು ಕೊಟ್ಟಂಥ ಅಂಕಿಸಂಖ್ಯೆಗಳಿಗೆ ಇಲ್ಲಿ ನಾವು ಕೈ ಎತ್ತುತ್ತೇವೆ, ನೀವು ಹಣವನ್ನು ಖರ್ಚು ಮಾಡುತ್ತೀರಿ. ಎಷ್ಟು ಎಕರೆ ಭೂಮಿಯನ್ನು ರೈತರು ಉಳುಮೆ ಮಾಡಿದ್ದಾರೆ, ಆದರಿಂದ ಎಷ್ಟು ಉತ್ಪನ್ನ ಬಂದಿದೆ ಎಂಬುದನ್ನು ಯಾರೂ ಸರ್ವೆ ಮಾಡುವುದಿಲ್ಲ. ಈ ಸ್ಕೀಮುಗಳನ್ನು ಆದಷ್ಟುಮಟ್ಟಿಗೆ ರೀಚೆಕ್ ಮಾಡ ಬೇಕು. ಎಲ್ಲೆಲ್ಲಿ ಯಾವ ಯಾವ ಯೋಜನೆಗಳು ಫೇಲ್ ಆಗಿವೆ, ಅವುಗಳನ್ನು ಬಿಟ್ಟುಬಿಡಿ......

ಶ್ರೀ ಎನ್. ಎಸ್. ಖೇಡ್.—ತಾವು ಎಸ್ಟಿಮೇಟ್ ಕಮಿಟಿಯಲ್ಲಿದ್ದು, ಈ ವಿಚಾರಗಳನ್ನು ಹೇಳಿದ್ದೀರಿ, ಇದು ಆ ಕಮಿಟಿ ರಿಪೋರ್ಟ್‌ನಲ್ಲಿ ಬಂದಿದೆ. ಅದನ್ನೇ ಮತ್ತೆ ಇಲ್ಲಿ ಏಕೆ ಹೇಳುತ್ತೀರಿ ?

SRI K.B. SHANAPPA.—Estimates Committee we are separate there. I am answerable to this House. ಇದು ಪ್ರತ್ಯೇಕ. ಇವತ್ತು ನೂರಾರು ಟ್ಯಾಂಕುಗಳು ಇವೆ. ನಾವು ಎಸ್ಟಿಮೇಟ್ ಕಮಿಟಿಯಲ್ಲಿದ್ದು ಕೆಲವು ಸಲಹೆಗಳನ್ನು ಕೊಟ್ಟಿದ್ದೇವೆ. ಈ ಟ್ಯಾಂಕ್‌ಗಳನ್ನು ಡೀಷಿಲ್ಟ್ ಮಾಡಬೇಕು. ಹಿಂದೆ ೧೦ ಅಡಿ ನಿಲ್ಲುತ್ತಿದ್ದ ನೀರು ಈಗ ೪ ಅಡಿ ಕೂಡ ನಿಲ್ಲುವುದಿಲ್ಲ. ತಾವೇನು ಈ ಟ್ಯಾಂಕುಗಳನ್ನು ಕಟ್ಟಿಕೊಂಡು ಹೋಗುತ್ತೀರಿ. ಇವುಗಳ ಬಗ್ಗೆ ಒಂದು ಹೊಸ ಸ್ಕೀಮ್ ಮಾಡಿ. ಇದಕ್ಕೆ ಹೊಸ ಬಜೆಟ್ ಕೊಡಿ. ಈಗಾಗಲೇ ಟ್ಯಾಂಕ್‌ಗಳ ಬಗ್ಗೆ ಸರ್ವೆ ಆಗಿದೆ. ಮಾನ್ಯ ಚಿಕ್ಕಣ್ಣನವರು ಒಂದು ರಿಪೋರ್ಟ್ ಕೊಟ್ಟಿದ್ದಾರೆ. ಎಷ್ಟು ಟ್ಯಾಂಕ್‌ಗಳಿಗೆ ಎಷ್ಟು ಖರ್ಚಾಗುತ್ತದೆ ಎಂಬುದು ಗೊತ್ತಾಗಿದೆ. ಇವತ್ತು ಇವುಗಳಿಗೆ ನೂರು, ಇನ್ನೂರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ಇದಕ್ಕಾಗಿಯೇ ಒಂದು ಹೊಸ ಯೋಜನೆಯನ್ನು ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಮಾನ್ಯ ಅಧ್ಯಕ್ಷರೇ, ಕಂದಾಯ ಇಲಾಖೆಯ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ. ಕಂದಾಯ ಇಲಾಖೆಯಲ್ಲಿ ಡಿವಿಜನಲ್ ಕಮೀಷನರ್, ಡೆಪ್ಯೂಟಿ ಕಮೀಷನರ್ ಅವರಿಂದ ಹಿಡಿದು, ಎಲ್ಲಾ ಜಿಲ್ಲಾ ಮೇಲಧಿಕಾರಿಗಳು, ರೆವಿನ್ಯೂ ಅದಾಯಕ್ಕಾಗಿ, ಈ ರಾಜ್ಯದ ಬೊಕ್ಕಸಕ್ಕೆ ಹಣ ಮಾಡುವ ಅಧಿಕಾರಿಗಳು, ರೈತನ ಸಮಸ್ಯೆಯನ್ನು ಯಾವ ಪ್ರಕಾರವಾಗಿ ಬಗೆಹರಿಸಬೇಕೆಂಬ ಇಮ್ಮೀಡಿಯಟ್ ಅಧಿಕಾರಿಗಳು. ಮಾನ್ಯ ಇದಿನಬ್ಬನವರು ಹೇಳಿದರು, ರೆವಿನ್ಯೂ ಇಲಾಖೆಯಲ್ಲಿ ಇರುವಷ್ಟು ಕರಪ್ಷನ್ ನಾವು ಎಲ್ಲೂ ನೋಡುವುದಕ್ಕಾಗುವುದಿಲ್ಲ ಎಂದು. ಒಬ್ಬ ವಿಲೇಜ್ ಅಕೌಂಟೆಂಟ್‌ನಿಂದ ಹಿಡಿದು ಮೇಲಿನ ತನಕ ಇದು ನಡೆಯುತ್ತಿದೆ. ಇವತ್ತು ಯಾರೊಬ್ಬರೂ ಕೂಡ ಈ ಕರಪ್ಷನ್ ತೆಗೆದು ಹಾಕು

ವುದಕ್ಕಾಗುವುದಿಲ್ಲವೆಂದು ಹೇಳುತ್ತೇನೆ. They cannot do it. The capitalist system itself is the backbone of corruption, said Marx. Corruption is always there unless and until the State gives overall facilities to the people of the State.

ಶ್ರೀ ಎಸ್. ಆರ್. ಬೊಮ್ಮಾಯಿ —ಕಮ್ಯೂನಿಸ್ಟ್ ದೇಶದಲ್ಲೂ ಕರಪ್ಷನ್ ಇದೆ. ಕಾರಲ್ ಮಾರ್ಕ್ಸ್ ರಾಜ್ಯದಲ್ಲೂ ಕರಪ್ಷನ್ ಇದೆ. ಅದು ಹ್ಯೂಮನ್ ನೇಚರ್.

ಶ್ರೀ ಧರ್ಮಸಿಂಗ್.—ಮಾನ್ಯ ಶಾಣಪ್ಪನವರ ಕಾರಲ್ ಮಾರ್ಕ್ಸ್ ಹೆಸರನ್ನು, ಈ ರಾಜ್ಯದಲ್ಲಿ, ಏಕೆ ಹೇಳುತ್ತೀರಿ ?

ಶ್ರೀ ಯಮ್. ಭೂಪತಿ.—ಕಾರ್ಲ್ ಮಾರ್ಕ್ಸ್ ಹೆಸರು ಬೇಡ, ಇಂದಿರಾಗಾಂಧಿ, ರಾಜೀವ್‌ಗಾಂಧಿ ಹೆಸರು ಹೇಳುತ್ತೇವೆ. ಆಗಬಹುದೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಲಂಚ ಒಂದು ಸಿಸ್ಟಮ್‌ನಲ್ಲಿ ಕಡಿಮೆ ಇರಬಹುದು ಇನ್ನೊಂದು ಸಿಸ್ಟಮ್‌ನಲ್ಲಿ ಹೆಚ್ಚು ಇರಬಹುದು.

ಶ್ರೀ ಕೆ.ಬಿ. ಶಾಣಪ್ಪ.—ಚರ್ಚೆ ಅಂದಮೇಲೆ ಕೆಲವು ವಿಚಾರಗಳನ್ನು ಹೇಳಬೇಕಾಗುತ್ತದೆ. ಕಾಂಗ್ರೆಸ್‌ನವರು ಇಂದಿರಾಗಾಂಧಿ ಹೆಸರು ತೆಗೆದುಕೊಳ್ಳುತ್ತಾರೆ, ಜನತಾದವರು ಜಯಪ್ರಕಾಶ್ ನಾರಾಯಣ್ ಹೆಸರು ತೆಗೆದುಕೊಳ್ಳುತ್ತಾರೆ, ನಾವು ಕಾರ್ಲ್‌ಮಾರ್ಕ್ಸ್ ಹೆಸರು ತೆಗೆದುಕೊಳ್ಳುತ್ತೇವೆ. ಈ ಸಿಸ್ಟಮ್ ಹಾಗಿದೆ. ಕರಪ್ಷನ್ ತೆಗೆಯುಲಿಕ್ಕೆ ಸಾಧ್ಯವಿಲ್ಲ ಎಂದು ಬಿಡುವುದಕ್ಕೆ ಆಗುತ್ತದೆಯೇ. ಇದನ್ನು ಯಾವ ಪ್ರಕಾರ ಕಂಟ್ರೋಲ್ ಮಾಡಬೇಕೆಂದು ತಾವು ಮಾಡಿದ್ದೀರಿ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ಕಂಟ್ರೋಲ್ ಮಾಡಬಹುದು.

ಶ್ರೀ ಕೆ.ಬಿ. ಶಾಣಪ್ಪ.—ಅದಕ್ಕಾಗಿ ಲೋಕಾಯುಕ್ತ ತಯಾರು ಮಾಡಿದ್ದಾರೆ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ಯಾವಯಾವುದು ಬೇಕೋ ಅದನ್ನು ಹೊಡೆದುಕೊಳ್ಳುವುದು, ಮಿಕ್ಕಿದ್ದನ್ನು ಬಿಡುವುದು. ಈ ರೀತಿ ಕಂಟ್ರೋಲ್ ಮಾಡಬಹುದು.

ಶ್ರೀ ಕೆ. ಬಿ. ಶಾಣಪ್ಪ.—ಗ್ರಾಮಲೆಕ್ಕಿಗ ಯಾರಿದ್ದಾನೆ ಅವನು ೯೦ ಪರ್ಸೆಂಟ್ ಜನರಿಗೆ ಸಂಬಂಧಪಟ್ಟ ಅಧಿಕಾರಿ. ತಾವು ಅವನ ಹತ್ತಿರ ಪಹಣಿ ತೆಗೆಯಲಿಕ್ಕೆ ಹೋಗಿ, ಅವನು ಪಹಣಿ ಕೊಡುವುದಿಲ್ಲ. ಎಂ.ಎಲ್ ಎ ಗಳು, ಜಿಲ್ಲಾ ಪರಿಷತ್ ಮೆಂಬರ್‌ಗಳು ಪದೇ ಪದೇ ಅವನ ಹತ್ತಿರ ಹೋಗಲಿಕ್ಕೆ ಸಾಧ್ಯವಿಲ್ಲ. ಮಂಡಲ್ ಪಂಚಾಯತ್ ಮೆಂಬರ್‌ಗಳನ್ನು ತಾವು ಮಾಡಿರುತ್ತೀರಿ. ಅದರದ್ದೇ ಒಂದು ಕಥೆ ಇದೆ. ಒಂದು ಪರಿಸ್ಥಿತಿಯಲ್ಲಿ ಜನರ ಸಮಸ್ಯೆಯನ್ನು ತಾವು ಹೇಗೆ ಬಗೆಹರಿಸುತ್ತೀರಿ ? ಟ್ರೆಜರಿ ಆಫೀಸ್‌ನಲ್ಲಿ ಹೋದರೆ ಅಲ್ಲಿಯದೇ ಒಂದು ಕಥೆ. ಮಾನ್ಯ ಶ್ರೀನಿವಾಸ್‌ರವರೇ ಕೇಳಿರಿ, ಹೇಳುತ್ತೇನೆ. ಗುಲಬರ್ಗಾದಲ್ಲಿ ರುಮಐ.ಬಿ. (ಪ್ರವಾಸಿ ಮಂದಿರ)ಗೆ ಸಂಬಂಧಪಟ್ಟ ನಾಲ್ಕು ತಿಂಗಳು ಟೆಲಿಫೋನ್ ಬಿಲ್ ಕೊಡಲಿಲ್ಲ. ಫೋನ್ ಕಟ್ ಆಯಿತು. ಐ.ಬಿ.ಗೆ ಆರು ತಿಂಗಳು ಟೆಲಿಫೋನ್ ಇರಲಿಲ್ಲ. ಆ ಐ.ಬಿ.ದು ೧೫-೨೦ ಸಾವಿರ ಟೆಲಿಫೋನ್ ಬಿಲ್ ಆಗಿದೆ. ಮಾರ್ಚ್ ೩೦ನೇ ತಾರೀಖು ಆಗಿಹೋಯಿತು, ಏತಕ್ಕೆ ಇನ್ನೂ ಟೆಲಿಫೋನ್ ಬಿಲ್ ಕಟ್ಟಲಿಲ್ಲ ಎಲ್.ಒ.ಸಿ. ಏಕೆ ಬಿಡುಗಡೆ ಮಾಡಲಿಲ್ಲ ಎಂದರೆ, ಅವರು ಏನು ಹೇಳುತ್ತಾರೆ ಗೊತ್ತೆ ಸ್ವಾಮಿ, ಎಲ್.ಒ.ಸಿ, ಬಿಡುಗಡೆ ಮಾಡುವ ಅಧಿಕಾರಿ ಏನಿದ್ದಾನೆ. ಅವನಿಗೆ ಟೆಲಿಫೋನ್ ಬಿಲ್‌ಗೆ ಸಂಬಂಧಿಸಿದಂತೆ ಪರ್ಸೆಂಟೇಜ್ ಕೊಡಲಿಲ್ಲ ಎಂದರೆ ಅವರು ಎಲ್.ಒ.ಸಿ. ಬಿಡುಗಡೆ ಮಾಡುವುದಿಲ್ಲ ಎಂದು ಹೇಳುತ್ತಾರೆ. This is the state of affairs in our State. ಇದು ಯಾರದ್ದೋ ಕೆಲಸ ಅಲ್ಲ. ಸರಕಾರಿ ಕೆಲಸಕ್ಕೆ ಉಪಯೋಗ ಮಾಡಿದ ಟೆಲಿಫೋನ್ ಬಿಲ್‌ಗೆ ಸಂಬಂಧಿಸಿದ ಎಲ್.ಒ.ಸಿ. ಬಿಡುಗಡೆ ಮಾಡುವುದಿಲ್ಲ. ಅದನ್ನು ಬಿಡುಗಡೆ ಮಾಡುವುದಕ್ಕೆ ಪರ್ಸೆಂಟೇಜ್ ಕೊಡಬೇಕು. ದಯವಿಟ್ಟು ಇದನ್ನು ತಾವು ಚೆಕ್ ಮಾಡಬೇಕು. ಯಾವರೀತಿ ನಡೆದಿದೆ ಎಂಬುದನ್ನು ತಾವು ನೋಡಬೇಕು. ಇದು ತಮ್ಮ ಕಣ್ಣಿಗೆ ಕಾಣುವುದಿಲ್ಲ. ಮಾನ್ಯ ಇದಿನಬ್ಬನವರು ಹೇಳಿದ ಹಾಗೆ ತಾವು ಹೇಳದೆ ಕೇಳದೆ ಇನ್‌ಸ್ಪೆಕ್ಷನ್ ಮಾಡಿರಿ. ಇದು ಗೊತ್ತಾಗುತ್ತದೆ. ರಿಜಿಸ್ಟ್ರೇಷನ್ ಮಾಡುವ ಆಫೀಸ್‌ಗೆ ಹೋಗಿರಿ, ಕೋ-ಆಪರೇಟೀವ್ ಆಫೀಸ್‌ಗೆ ಹೋಗಿರಿ, ರೆವಿನ್ಯೂ ಡಿಪಾರ್ಟ್‌ಮೆಂಟ್ ಆಫೀಸ್‌ಗೆ ಹೋಗಿರಿ, ಪ್ರತಿಯೊಂದು ಕಡೆ ಇದನ್ನು ತಾವು ನೋಡಬಹುದು. ಕೆಲವು

ಏಜೆಂಟ್ಸ್ ಇದ್ದಾರೆ. ಯಾವುದೇ ಕೆಲಸ ಆಗಬೇಕಾದರೆ ಅವನಿಗೆ ಬೇಕಾದಂಥ ಒಂದು ಹಣವನ್ನು ಕೊಡಲಿಲ್ಲ ಎಂದರೆ ಕೆಲಸ ಆಗುವುದಿಲ್ಲ. ತಾವು ಕೆಲವು ಸಲ ಟ್ರಾನ್ಸ್‌ಫರ್ ಮಾಡಿ ಎಂದು ಆದೇಶ ಕಳುಹಿಸುತ್ತೀರಿ. ಆದರೂ ಅದು ಆಗುವುದಿಲ್ಲ. ಮಿನಿಸ್ಟರ್ ಆರ್ಡರ್ ಮಾಡಿದರೂ ಆಗುವುದಿಲ್ಲ. ಇದು ಹೆಲ್ತ್ ಡಿಪಾರ್ಟ್‌ಮೆಂಟ್‌ನಲ್ಲಿದೆ, ರೆವಿನ್ಯೂ ಡಿಪಾರ್ಟ್‌ಮೆಂಟ್‌ನಲ್ಲೂ ಇದೆ. ಎಲ್ಲಾ ಡಿಪಾರ್ಟ್‌ಮೆಂಟ್‌ನಲ್ಲೂ ಇದೆ. Afterall you are the sovereign Government and you have for the sovereign authority to give orders. ನೀವು ಕಳುಹಿಸಿದಂಥ ಆರ್ಡರ್‌ಗಳನ್ನು ಅಧಿಕಾರಿಗಳು ಎಕ್ಸಿಕ್ಯೂಟ್ ಇನ್‌ಸ್ಟನ್ಸಸ್ ಮಾಡಬೇಕು. ಆದರೆ ಮಾಡಿಲ್ಲ. ಅನೇಕ ಇದೆ. ಹೆಲ್ತ್, ರೆವಿನ್ಯೂ, ಪಿ.ಡಬ್ಲ್ಯು.ಡಿ, ಚೀಫ್ ಡಿಪಾರ್ಟ್‌ಮೆಂಟ್‌ಗಳ ಇನ್‌ಸ್ಟೆನ್ಸಸ್ ಇದೆ. ಮಿನಿಸ್ಟರ್ ಮಾಡಿದಂಥ ಆರ್ಡರ್ ಕೂಡಾ ಇಂಪ್ಲಿಮೆಂಟ್ ಆಗದಂಥ ಪರಿಸ್ಥಿತಿ ಇದೆ. ಆರ್ಡರ್ ಬರುವುದಕ್ಕೆ ಮುಂಚೆಯೇ ಖಾಲಿ ಇದ್ದ ಆ ಜಾಗಕ್ಕೆ ಬೇರೆಯವರನ್ನು ಹಾಕಿಬಿಡುತ್ತಾರೆ. ತಾವು ಕಳುಹಿಸಿದ ಆರ್ಡರ್ ಬಂದಿದೆ. meanwhile we have already filled up that post ಎಂದು ಹೇಳಿಬಿಡುತ್ತಾರೆ. ತಾವು ಜನರಿಂದ ಆರಿಸಿ ಬಂದಿದ್ದೀರಿ. ಇದು ಜನರಿಂದ ಆರಿಸಿ ಬಂದಂಥ ಸರಕಾರ. ಎಕ್ಸಿಕ್ಯುಟೀವ್ ಪವರ್ಸ್‌ನ್ನು ತಮ್ಮ ಕೈಗೆ ಕೊಟ್ಟಿದ್ದೇವೆ. We have delegated our power to Mr. Bommai and his Cabinet colleagues and not to the Officers who follow your orders. ಇಂತಹ ಎಷ್ಟೆಷ್ಟು ಕೇಸ್‌ಗಳನ್ನು ತಾವು ಕೊಟ್ಟಿದ್ದೀರಿ ಎಂಬುದನ್ನು ಪುಸ್ತಕ ತೆಗೆದುನೋಡಿರಿ. ಉದಾಹರಣೆಗೆ ರಾಮಣ್ಣ ಎಂಬುವವರನ್ನು ಎ. ಯಿಂದ ಬಿ.ಗೆ ಹಾಕಿರಿ ಎಂದು ಆರ್ಡರ್ ಹಾಕಿದ್ದೀರಿ. ಬಿ.ಗೆ ಅವನನ್ನು ಹಾಕಿದ್ದಾರೆಯೇ ಇಲ್ಲವೇ ಎಂಬುದನ್ನು ತಾವು ಕೊಶ್ಚನ್ ಮಾಡುತ್ತೀರಾ ? ನೋಡುತ್ತೀರಾ ? ನೋಡಿ ಈ ರೀತಿ ನಡೆಯುತ್ತಿದೆ. ಅಲ್ಲಿನ ಕ್ಲರ್ಕ್‌ಗೆ ಇದು ಒಂದು ಸಣ್ಣ ವಿಷಯ. ಎರಡು ತಿಂಗಳಾದರೂ ಮಾಡುವುದಿಲ್ಲ. ಸಂಬಂಧಪಟ್ಟ ಎಂ.ಎಲ್.ಎ. ಫೋನ್ ಮಾಡುತ್ತಾರೆ, ಡಿಸ್ಟ್ರಿಕ್ಟ್ ಮಿನಿಸ್ಟರ್ ಫೋನ್ ಮಾಡುತ್ತಾರೆ, ಹಣ ಕೊಡುವ ತನಕ ಕೇಸ್ ವರ್ಕರ್ ಪುಟ್ ಅಪ್ ಮಾಡುವುದಿಲ್ಲ.

ರೆವಿನ್ಯೂ ಸೆಕ್ರೆಟರಿಗೆ ಕಳುಹಿಸಿದಂತಹ ಲೆಟರ್ಸ್ ರೆವಿನ್ಯೂ ಸೆಕ್ರೆಟರಿ ಕಣ್ಣಿಗೆ ಬೀಳಬೇಕಾದರೆ ಕನಿಷ್ಠ ಪಕ್ಷ ೬ ತಿಂಗಳುಗಳು ಬೇಕಾಗುತ್ತದೆ. ಅದನ್ನು ಅವರು ಬೇಗ ನೋಡುವುದಿಲ್ಲ. ಇದೇ ರೀತಿಯಾಗಿ ರೆವಿನ್ಯೂ ಕಮಿಷನರ್ ಆಗಲಿ, ಹೋಮ್ ಸೆಕ್ರೆಟರಿಯಾಗಲಿ, ಹೆಲ್ತ್ ಸೆಕ್ರೆಟರಿಗಾಗಲಿ ಮಿನಿಸ್ಟರ್ ಬರೆದಂತಹ ಪತ್ರಗಳನ್ನು ಎಷ್ಟು ಅಟೆಂಡ್ ಮಾಡಿದ್ದೀರೆಂದು ಏನಾದರೂ ಕೇಳಿದ್ದೀರಾ ? Whether it has gone to the top man ? ತಾವು ಪ್ರತಿಯೊಂದು ಸೆಕ್ಷನ್‌ಗೂ ಹೋಗಿ ನೋಡಬೇಕಾಗುತ್ತದೆ. ಪ್ರತಿಯೊಂದು ಕಡೆ ಹೋಗಿ ವಿಚಾರಿಸಬೇಕಾಗುತ್ತದೆ. ತಾವು ಕಳುಹಿಸಿದಂತಹ ಲೆಟರ್ ಅಂಡರ್ ಸೆಕ್ರೆಟರಿಗೆ ಹೋಗುತ್ತದೆ, ಆಮೇಲೆ ಡೆಪ್ಯುಟಿ ಸೆಕ್ರೆಟರಿಗೆ ಹೋಗುತ್ತದೆ, ಆ ಮೇಲೆ ಸೆಕ್ರೆಟರಿಗೆ ಹೋಗುತ್ತದೆ. ಈ ಪ್ರಕಾರವಾಗಿ ಇರತಕ್ಕ ವ್ಯವಸ್ಥೆಯನ್ನು ತಾವು ತೆಗೆದುಹಾಕಿ ಯಾವ ರೀತಿ ಸುಧಾರಣೆ ಮಾಡುವುದಕ್ಕೆ ಸಾಧ್ಯವೋ ಆ ರೀತಿ ಮಾಡಿ ಒಳ್ಳೆಯ ಕೆಲಸಗಳನ್ನು ಕರ್ನಾಟಕ ರಾಜ್ಯದ ಜನತೆಗೆ ತೀವ್ರಗತಿಯಲ್ಲಿ ಆಗಲು ಒಂದು ಪ್ಲಾನ್ ಹಾಕಿಕೊಳ್ಳಬೇಕೆಂದು ಹೇಳಿ, ಕೊನೆಯದಾಗಿ ಈ ರೆವಿನ್ಯೂ ಲ್ಯಾಂಡ್ಸನ್ನು ನಾನ್ ಅಗ್ರಿಕಲ್ಚರ್ ಲಾಂಡ್ಸ್ ಆಗಿ ಪರಿವರ್ತನೆ ಮಾಡುವುದಕ್ಕೆ ಸರ್ಕಾರ ಒಂದು ಕಾರ್ಯಕ್ರಮ ಹಾಕಿಕೊಂಡಿದ್ದೀರಿ. ಈ ಕಾರ್ಯಕ್ರಮವನ್ನು ೧೯೮೭-೮೮ನೇ ಇಸವಿಯಲ್ಲಿ ಹಾಕಿಕೊಂಡು ಒಂದು ಸರ್ಕ್ಯುಲರ್ ಕಳುಹಿಸಿ ಇಂತಹ ಲ್ಯಾಂಡ್ಸನ್ನು ಪರ್ಚೇಜ್ ಮಾಡಿರುವುದು ಹೌಸಿಂಗ್ ಬೋರ್ಡ್‌ನವರು. ಈಗ ಗ್ರೂಪ್ ಮನೆಗಳನ್ನು ಕಟ್ಟುವ ಸಲುವಾಗಿ ಕಾನೂನು ತಿದ್ದುಪಡಿ ಮಾಡಿದಿರಿ. ಅಂದರೆ ಸೆಕ್ಷನ್ ೭೯ಕ್ಕೆ ಇರಬೇಕು. ಇಂತಹ ನೂರಾರು ಕೇಸುಗಳು ಇರುವಂತಹ ಕಡೆಗಳಲ್ಲಿ ಆಯಾಯಾ ಜಿಲ್ಲೆಯ ಜಿಲ್ಲಾಧಿಕಾರಿಗಳನ್ನು ಅಧ್ಯಕ್ಷರನ್ನಾಗಿ ಮಾಡಿ ಅಸಿಸ್ಟೆಂಟ್ ಕಮಿಷನರ್ ಮತ್ತು ಬೇರೊಬ್ಬರನ್ನು ಹಾಕಿ ಒಟ್ಟು ಮೂರು ಜನರ ಒಂದು ಕಮಿಟಿಯನ್ನು ಮಾಡಿದಿರಿ. ಆದರೆ ಈ ಕಮಿಟಿಯವರು ಯಾವ ಯಾವ ಜಿಲ್ಲೆಯಲ್ಲಿ ಮೀಟಿಂಗ್ ಮಾಡಿದ್ದಾರೆ ? ಯಾವ ಯಾವ ರೆವಿನ್ಯೂ ಲ್ಯಾಂಡ್ಸನ್ನು ರಿವ್ಯೂ ಮಾಡಿ ಕಳುಹಿಸಿದ್ದಾರೆ ? ಇದನ್ನು ಮಾನ್ಯ ಬೊಮ್ಮಾಯಿಯವರು ಹೇಳಬೇಕು. Whether you have reviewed to see that the people are not suffered ? They are not doing anything else. Deputy Commissioner is empowered to do this.

ಉಪಾಧ್ಯಕ್ಷರು.—ದಯಮಾಡಿ ಮುಗಿಸಿ.

ಶ್ರೀ ಕೆ. ಬಿ. ಶಾಣಪ್ಪ.—ಇಂತಹ ಪರಿಸ್ಥಿತಿಯಲ್ಲಿ ತಾವು ಕಾನೂನು ಮಾಡಿದ್ದೀರಿ. ಆ ಕಾನೂನು ಇಂಪ್ಲಿಮೆಂಟ್ ಆಗಿದೆಯೋ ಇಲ್ಲವೋ ? ಇದಕ್ಕೆ ಯಾವುದಾದರೊಂದು ಯಾರ್ಡ್‌ಸ್ಟಿಕ್ ಇದೆಯೋ ಇಲ್ಲವೋ ? ಇನ್ನು ವಿಧವೆಯರಿಗೆ ಹಣ ಕೊಡುತ್ತೇವೆಂದು ತಾವು ಹೇಳಿದ್ದೀರಿ. ಅದಕ್ಕೆ ಕೆಲವು ಜನ ಏಜೆಂಟರು ಇದ್ದಾರೆ, ಸುಮಾರು ೬ ತಿಂಗಳಾದರೂ ಪೆನ್‌ಷನ್ ತೆಗೆದುಕೊಳ್ಳುವುದು ಕಷ್ಟವಾಗುತ್ತದೆ. ತಹಶೀಲ್ದಾರ್ ಆಫೀಸ್‌ಗೆ ಡಾಕ್ಟರ್ ಸರ್ಟಿಫಿಕೇಟ್ ದಾಖಲೆಗಳನ್ನು ಕೊಟ್ಟರೆ Some MLA gives certificate that he knows the lady. Immediately she should get it. ಅದು ಆಗುತ್ತಿಲ್ಲ. ಇಂತಹ ನೂರಾರು ಸಮಸ್ಯೆಗಳು ತಮ್ಮ ಡಿಪಾರ್ಟ್‌ಮೆಂಟ್‌ನಲ್ಲಿವೆ. ನಂತರ ಕೆ.ಎ.ಎಸ್, ಮತ್ತು ಐ.ಎ.ಎಸ್. ಇವರಲ್ಲಿ ಒಂದು ಪ್ರಾಬ್ಲಂ ಇದೆ. ಇವರಲ್ಲಿ ಸೀನಿಯಾರಿಟಿ ಪ್ರಾಬ್ಲಂ ಇದೆ. ಇವರಿವರಲ್ಲಿಯೇ ಗೊಂದಲ. ಐ.ಎ.ಎಸ್.ನವರಿಗೆ ಕೋಡ್ ಬಂದಿರುತ್ತದೆಯೋ ? ಕೆ.ಎ.ಎಸ್.ನವರನ್ನು discontentment ಮಾಡಿದ್ದಾರೆ ಈ ಅಡ್ಮಿನಿಸ್ಟ್ರೇಟೀವ್ apparatus ಏನಿದೆ ಇಲ್ಲಿ ಗೊಂದಲವಿರಬಾರದು. There should be harmony. ಕೋ ಆರ್ಡಿನೇಷನ್ ಇರಬೇಕು. ಐ.ಎ.ಎಸ್.ಅಧಿಕಾರಿಗಳಿಗೆ ಬೇಕಾದಂತಹ ಸವಲತ್ತುಗಳನ್ನು ಕೊಟ್ಟು ಕೆ.ಎ.ಎಸ್.ನವರಿಗೆ ಕೊಟ್ಟಿಲ್ಲವೆನ್ನುವುದು ಇದೆ. ಇದನ್ನು ಸರಿಪಡಿಸಿ. ಇದನ್ನು ಯಾವ ರೀತಿ ಸರಿಪಡಿಸಬೇಕೋ ಆ ರೀತಿ ಸರಿ ಮಾಡಿ. ಈ ರಾಜ್ಯದ ಜನತೆಗೆ ಕೊಟ್ಟಂತಹ ಭರವಸೆಗಳನ್ನು ಈಡೇರಿಸಿ ಎಂದು ನಾನು ಹಾರೈಸುತ್ತೇನೆ. ನೀವು ಈಡೇರಿಸದಿದ್ದರೆ ಪುನಃ ಈ ರಾಜ್ಯದ ಜನತೆ ತಮ್ಮನ್ನು ಮರೆಯುವುದಿಲ್ಲವೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುವುದಕ್ಕಿಂತ ಮುಂಚಿತವಾಗಿ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಮಲ್ಲಪ್ಪ (ನಾಯಕೊಂಡ).—ಮಾನ್ಯ ಅಧ್ಯಕ್ಷರೇ, ಈ ದಿನ ಸರ್ಕಾರ ಮಂಡಿಸಿರತಕ್ಕ ನೀರಾವರಿ ಬೇಡಿಕೆಯನ್ನು ಸ್ವಾಗತಿಸುತ್ತಾ, ನೀರಾವರಿ ಬಗ್ಗೆ ಒಂದೆರಡು ಮಾತುಗಳನ್ನು ಆಡುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಅಧ್ಯಕ್ಷರೇ, ಒಂದು ರಾಷ್ಟ್ರ ಮತ್ತು ಒಂದು ರಾಜ್ಯ ಪ್ರಗತಿದಾಯಕವಾಗಬೇಕಾದರೆ ನೀರಾವರಿ ಕ್ಷೇತ್ರಕ್ಕೆ ಹೆಚ್ಚು ಮಹತ್ವವನ್ನು ಕೊಡಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ ಕೃಷಿ ಕ್ಷೇತ್ರವನ್ನು ಉತ್ತಮಪಡಿಸುವ ಹೊಣೆಗಾರಿಕೆ ನಮ್ಮ ರಾಜ್ಯ ಸರ್ಕಾರದ ಮೇಲಿದೆ. ಇತ್ತೀಚಿನ ದಿನಗಳಲ್ಲಿ ನಮ್ಮ ಸರ್ಕಾರ ನೀರಾವರಿ ಕೆಲಸಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟಿದೆ. ಆದರೆ, ಸರ್ಕಾರ ಕೈಗೊಳ್ಳುವ ದೊಡ್ಡ ದೊಡ್ಡ ನೀರಾವರಿ ಯೋಜನೆಗಳು ಸುಮಾರು ಹದಿನೈದು ವರ್ಷ ಇಪ್ಪತ್ತು ವರ್ಷ ಮೂವತ್ತು ವರ್ಷಗಳಾದರೂ ಯೋಜನೆಗಳು ಪೂರ್ಣಗೊಳ್ಳದೇ ಇರುವ ಸಂದರ್ಭಗಳನ್ನು ನಾವು ಕಾಣುತ್ತಿದ್ದೇವೆ. ನಮ್ಮ ರಾಜ್ಯದಲ್ಲಿ ಸಾಕಷ್ಟು ಜಲ ಸಂಪನ್ಮೂಲ ಇದೆ. ಸಾಕಷ್ಟು ನದಿಗಳು ಹರಿಯುತ್ತಿವೆ, ಅಂತರ್ಜಲ ಸಂಪನ್ಮೂಲವೂ ಸಾಕಷ್ಟು ನಮ್ಮ ರಾಜ್ಯದಲ್ಲಿ ಇದೆ, ಇತ್ತೀಚಿನ ದಿನಗಳಲ್ಲಿ ಚಿಕ್ಕ ಚಿಕ್ಕ ನೀರಾವರಿ ಯೋಜನೆಗಳ ಜೊತೆಗೆ ಕೊಳವೆ ಬಾವಿಗಳನ್ನು ಹಾಕಿಸಿ ನಮ್ಮ ರೈತರುಗಳು ಅಂತರ್‌ಜಲವನ್ನು ಉಪಯೋಗಿಸುತ್ತಿದ್ದಾರೆ. ಇದರ ಜೊತೆಗೆ ಚಿಕ್ಕ ಚಿಕ್ಕ ಏತನೀರಾವರಿ ಯೋಜನೆಗಳನ್ನು ಮಾಡುವುದಕ್ಕೆ ಸರ್ಕಾರ ಹೆಚ್ಚು ಪ್ರೋತ್ಸಾಹ ಕೊಟ್ಟರೆ ಕೃಷಿ ಉತ್ಪಾದನೆಗೆ ಮತ್ತು ರಾಷ್ಟ್ರೀಯ ಉತ್ಪಾದನೆಗೆ ಹೆಚ್ಚು ಅನುಕೂಲವಾಗುತ್ತದೆ ಗಂಗಾ ಕಲ್ಯಾಣ ಯೋಜನೆಯ ಕೆಳಗೆ ಈ ರೀತಿ ಚಿಕ್ಕ ಚಿಕ್ಕ ಏತ ನೀರಾವರಿ ಯೋಜನೆಗೆ ಸರ್ಕಾರ ಪ್ರೋತ್ಸಾಹ ಕೊಡಬೇಕು. ಚಿಕ್ಕ ಚಿಕ್ಕ ನೀರಾವರಿ ಯೋಜನೆಗಳನ್ನು ಹೆಚ್ಚು ಹೆಚ್ಚು ಮಾಡಿ ಗ್ರಾಮಾಂತರ ಪ್ರದೇಶಗಳಲ್ಲಿರುವ ಜಲ ಸಂಪನ್ಮೂಲವನ್ನು ಉಪಯೋಗಿಸಿಕೊಂಡು ರೈತರುಗಳಿಗೆ ಹೆಚ್ಚಿನ ಅನುಕೂಲವನ್ನು ಮಾಡಬೇಕೆಂದು ತಮ್ಮ ಮೂಲಕ ಕೋರಿಕೊಳ್ಳುತ್ತಿದ್ದೇನೆ. ನಂತರ, ಇತ್ತೀಚೆಗೆ ನಮ್ಮ ರಾಜ್ಯದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಕೊಳವೆ ಬಾವಿಗಳನ್ನು ನಮ್ಮ ರೈತರುಗಳು ತೆಗೆಸಿ ಭೂಮಿಯಲ್ಲಿರುವ ಅಂತರ್‌ಜಲವನ್ನು ಉಪಯೋಗಿಸುತ್ತಿದ್ದಾರೆ. ಆದರೆ. ಇತ್ತೀಚಿನ ದಿನಗಳಲ್ಲಿ ಕರೆಂಟಿನ ಅಭಾವ ಹೆಚ್ಚಾಗಿರುವುದರಿಂದ ಕೊಳವೆ ಬಾವಿಗಳಿಂದ ನೀರು ಎತ್ತುವುದಕ್ಕೆ ಪಂಪುಸೆಟ್ಟುಗಳಿಗೆ ಕರೆಂಟ್ ಸರಿಯಾಗಿ ಸರಬರಾಜಾಗುತ್ತಿಲ್ಲ. ಸರಿಯಾಗಿ ಕರೆಂಟ್ ಸರಬರಾಜು ಆಗದೇ ಇರುವುದರಿಂದ ನೀರು ಇದ್ದರೂ ಸಹ ಉಪಯೋಗಿಸುವುದಕ್ಕೆ ಆಗದೆ ರೈತರುಗಳು ತಮ್ಮ ಫಸಲಿನಲ್ಲಿ ನಷ್ಟವನ್ನು ಅನುಭವಿಸುತ್ತಿದ್ದಾರೆ. ಆದ್ದರಿಂದ, ಕೃಷಿಗೆ ಉಪಯೋಗಿಸುವ ಪಂಪುಸೆಟ್ಟುಗಳಿಗೆ ಹೆಚ್ಚಿನ ಒಂದು ಆದ್ಯತೆ ಕೊಟ್ಟು ಕರೆಂಟನ್ನು ಸರಬರಾಜು ಮಾಡಬೇಕು. ಸುಮಾರು ಎರಡು ವರ್ಷಗಳಿಂದಲೂ ವಿದ್ಯುಚ್ಛಕ್ತಿಯ ಅಭಾವ ಕಂಡು ಬರುತ್ತಲೇ

ಇದೆ. ಇದರ ಬಗ್ಗೆ ಸರ್ಕಾರ ತೀವ್ರಗತಿಯಿಂದ ಗಮನ ಹರಿಸಿ ಎಲ್ಲಾ ರೀತಿಯಿಂದಲೂ ಕೃಷಿಗೆ ಅನುಕೂಲವಾಗುವ ರೀತಿಯಲ್ಲಿ ಕೆಲಸ ಮಾಡಬೇಕೆಂದು ತಮ್ಮ ಮೂಲಕ ಕೋರಿಕೊಳ್ಳುತ್ತೇನೆ. ನಂತರ ಇನ್ನೊಂದು ವಿಷಯ ಏನೆಂದರೆ, ಕೃಷಿ ಕ್ಷೇತ್ರದ ಅಭಿವೃದ್ಧಿಗೋಸ್ಕರ ಮತ್ತು ನೀರಾವರಿ ಪ್ರದೇಶಗಳನ್ನು ಅಭಿವೃದ್ಧಿಪಡಿಸುವುದಕ್ಕೋಸ್ಕರ ಸರ್ಕಾರವು ಒಂದು ಏತ ನೀರಾವರಿ ನಿಗಮವನ್ನು ಮಾಡಿತ್ತು. ಈ ಏತ ನೀರಾವರಿ ನಿಗಮವು ಸರಿಯಾದ ರೀತಿಯಲ್ಲಿ ಮತ್ತು ತ್ವರಿತ ಗತಿಯಲ್ಲಿ ಕೆಲಸ ಮಾಡಿದಂಥ ಪ್ರಸಂಗ ಕಾಣುತ್ತಿಲ್ಲ. ಈ ಏತ ನೀರಾವರಿ ನಿಗಮವನ್ನು ರಚನೆ ಮಾಡಿದ ಮೇಲೆ ಶಿವಮೊಗ್ಗ ಮತ್ತು ಚಿತ್ರದುರ್ಗ ಜಿಲ್ಲೆಯ ಏತ ನೀರಾವರಿ ಕೆಲಸಗಳನ್ನು ನೋಡಿಕೊಳ್ಳುವುದಕ್ಕೆ ಬಿಜಾಪುರ ಜಿಲ್ಲೆಯ ಏತ ನೀರಾವರಿ ಡಿವಿಜನ್‌ಗೆ ಅಧಿಕಾರವನ್ನು ಕೊಡಲಾಗಿದೆ. ಶಿವಮೊಗ್ಗ ಮತ್ತು ಚಿತ್ರದುರ್ಗ ಜಿಲ್ಲೆಯವರು ಬಿಜಾಪುರಕ್ಕೆ ಹೋಗಿ ಕೆಲಸಗಳನ್ನು ಮಾಡಿಸಿಕೊಂಡು ಬರುವುದಕ್ಕೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಚಿತ್ರದುರ್ಗ ಮತ್ತು ಶಿವಮೊಗ್ಗ ಜಿಲ್ಲೆಗಳನ್ನು ಮೈಸೂರು ವಿಭಾಗದ ನಿಗಮಕ್ಕೆ ಸೇರಿಸಬೇಕೆಂದು ಕೇಳಿಕೊಳ್ಳುತ್ತೇನೆ. ನಂತರ, ಭದ್ರಾ ಜಲಾಶಯಕ್ಕೆ ಸಂಬಂಧಪಟ್ಟಂತೆ ಒಂದೆರಡು ಮಾತುಗಳನ್ನು ಹೇಳಬೇಕಾದರೆ, ಇತ್ತೀಚೆಗೆ ಅಂದರೆ ೧೯೭೭ರಲ್ಲಿ ಜನತಾ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಭದ್ರಾ ಜಲಾಶಯದ ನಾಲೆಗಳು ವ್ಯವಸ್ಥಿತ ರೀತಿಯಲ್ಲಿ ದುರಸ್ತಿ ಮಾಡಬೇಕೆಂದು ಸುಮಾರು ನೂರಾರು ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ಮಾಡಿತ್ತು. ಈ ಯೋಜನೆಯಡಿಯಲ್ಲಿ ಈಗಾಗಲೇ ದುರಸ್ತಿ ಕೆಲಸಗಳಿಗಾಗಿ ಎಂಟತ್ತು ಕೋಟಿ ರೂಪಾಯಿಗಳ ಕೆಲಸಗಳನ್ನು ತೆಗೆದುಕೊಳ್ಳಲಾಗಿದೆ. ಈ ಕೆಲಸಗಳನ್ನು ತ್ವರಿತಗತಿಯಿಂದ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಭದ್ರಾ ಜಲಾಶಯದ ಕೊನೇ ಅಚ್ಚುಕಟ್ಟು ಪ್ರದೇಶದಲ್ಲಿರತಕ್ಕ ರೈತರುಗಳಿಗೆ ನೀರು ಸಿಗದೆ ಅವರು ಬೆಳೆದ ಬೆಳೆಯು ನಷ್ಟವಾಗಿದೆ. ನಾಲೆಗಳ ದುರಸ್ತಿ ಕಾರ್ಯವನ್ನು ತ್ವರಿತಗತಿಯಿಂದ ಮಾಡಿದರೆ ಕೊನೆ ಭಾಗದ ಅಚ್ಚುಕಟ್ಟು ಪ್ರದೇಶಗಳಲ್ಲಿರುವ ರೈತರುಗಳಿಗೆ ನೀರು ಸಿಗುತ್ತದೆ. ಆದ್ದರಿಂದ, ಈ ಕೆಲಸವನ್ನು ತ್ವರಿತಗತಿಯಲ್ಲಿ ಮಾಡಬೇಕೆಂಬ ನನ್ನ ಕೋರಿಕೆಯನ್ನು ತಮ್ಮ ಮುಖಾಂತರ ಸರ್ಕಾರಕ್ಕೆ ಸಲ್ಲಿಸುತ್ತೇನೆ. ನಂತರ, ೩೦ ವರ್ಷಗಳಾದರೂ ಭದ್ರಾ ಜಲಾಶಯದ ಅಚ್ಚುಕಟ್ಟು ಪ್ರದೇಶಕ್ಕೆ ಸೇರಿದ ರೈತರುಗಳು ತಮ್ಮ ಸರಕುಗಳನ್ನು ಮತ್ತು ಫಸಲುಗಳನ್ನು ಸಾಗಾಣಿಕೆ ಮಾಡಲಿಕ್ಕೆ, ಸರಬರಾಜು ಮಾಡಲಿಕ್ಕೆ ವ್ಯವಸ್ಥಿತವಾದ ರೀತಿಯಲ್ಲಿ ರಸ್ತೆಗಳು ಈ ಭಾಗದಲ್ಲಿ ಆಗಿಲ್ಲ.

ಸರಕುಗಳನ್ನು ಸಾಗಾಣಿಕೆಯನ್ನು ಮಾಡಲು ಬೇರೆ ಕಡೆಗಳಿಗೆ ಸರಬರಾಜು ಮಾಡಲು ವ್ಯವಸ್ಥಿತವಾದ ರೀತಿಯಲ್ಲಿ ರಸ್ತೆಗಳು ಇಲ್ಲ. ಅದಕ್ಕೆ ಸಂಬಂಧಪಟ್ಟಂಥ ಸೇತುವೆಗಳು ಇಲ್ಲ. ಇದರಿಂದ ರೈತರು ಬಹಳ ಕಷ್ಟವನ್ನು ಅನುಭವಿಸುತ್ತಾ ಇದ್ದಾರೆ. ಈ ದಿಸೆಯಲ್ಲಿ ಹೆಚ್ಚಿನ ಹಣವನ್ನು ಭದ್ರಾ ಜಲಾಶಯಕ್ಕೆ ಸಂಬಂಧಪಟ್ಟಂಥ ದುರಸ್ತಿಗೆ, ಕಾಡಾ ಸಮಿತಿಗೆ, ಯೋಜನೆಗೆ ಅನುಗುಣವಾಗಿ ದುರಸ್ತಿ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತಾ ಇದ್ದೇನೆ. ಇತ್ತೀಚೆಗೆ ಚಾನಲ್‌ಗಳಲ್ಲಿ ಸಿಲ್ಟ್ ತುಂಬಿಕೊಂಡು ಚಾನಲ್‌ಗಳು ಭರ್ತಿ ಆಗಿರುವುದರಿಂದಾಗಿ ನೀರು ವ್ಯವಸ್ಥಿತ ರೀತಿಯಿಂದ ಸರಬರಾಜು ಆಗದೆ ನೀರು ವಿನಾ ಕಾರಣ ಹಾಳಾಗಿ ಹೋಗತಕ್ಕಂಥ ಸಂದರ್ಭವನ್ನು ನಾವು ಕಾಣುತ್ತಾ ಇದ್ದೇವೆ. ಈ ದೃಷ್ಟಿಯಿಂದ ಸರಕಾರದವರು ಅದಕ್ಕೆ ಹೆಚ್ಚಿನ ಹಣವನ್ನು ಕೊಡುವುದರ ಜೊತೆಗೆ ಸಿಲ್ಟ್ ಆಗಿರತಕ್ಕಂಥ ಚಾನಲ್‌ಗಳಲ್ಲಿನ ಸಿಲ್ಟನ್ನು ತೆಗೆಯುವುದರ ಜೊತೆಗೆ ರಸ್ತೆಗಳನ್ನು, ಸೇತುವೆಗಳನ್ನು ಮಾಡುವುದರ ಜೊತೆಗೆ, ಈ ಮೂಲಕ ರೈತರಿಗೆ ಹೆಚ್ಚಿನ ಒಂದು ಸೌಕರ್ಯವನ್ನು ಮಾಡಿಕೊಡಬೇಕೆಂದು ಕೇಳುತ್ತಾ ಇದ್ದೇವೆ. ಇನ್ನು ಅಲ್ಲಿ ಭದ್ರಾ ಜಲಾಶಯಕ್ಕೆ ಸಂಬಂಧಪಟ್ಟಂಥ ದೇವರಬಡಕೆರೆ ಪಿಕ್‌ಅಪ್ ಅಂತ, ಒಂದು ಕೆರೆಯನ್ನು ನಿರ್ಮಾಣ ಮಾಡಲಾಗಿದೆ. ಅದರ ಪೂರ್ಣ ಕೆಲಸವಾಗಿದೆ. ಆದರೂ ಕೂಡ ಇನ್ನೂ ಕೆಲವು ಭಾಗಗಳಿಗೆ ನೀರು ಕೊಡತಕ್ಕಂಥ ವ್ಯವಸ್ಥೆ ಆಗಿಲ್ಲ. ಪೂನ–ಬೆಂಗಳೂರು ರೇಲ್ವೆ ಲೈನ್ ಕೆಳಗಡೆ ಸೇತುವೆ ಆಗಿರುವುದರಿಂದ ಅಲ್ಲಿ ನೀರು ಸರಬರಾಜು ಮಾಡತಕ್ಕಂಥ ವ್ಯವಸ್ಥೆಯನ್ನು ಇಲ್ಲಿಯ ತನಕವೂ ಮಾಡಲಿಲ್ಲ. ೨೦ ವರ್ಷಗಳಿಂದ ಈ ಯೋಜನೆಯ ಪ್ರಯೋಜನವನ್ನು ಆ ಭಾಗದ ರೈತರು ಪಡೆದುಕೊಳ್ಳುವ ಅನುಕೂಲತೆಯೂ ಆಗಿಲ್ಲ. ಈ ದಿಸೆಯೊಳಗೆ ಕಾರ್ಯವನ್ನು ತೀವ್ರಗತಿಯಲ್ಲಿ ಮಾಡಿದಾಗ, ಹರಿಹರ ತಾಲ್ಲೂಕು, ಹರಪನಹಳ್ಳಿ ತಾಲ್ಲೂಕಿನ ಕೆಲವು ಭಾಗಗಳಿಗೆ ನೀರು ಹೋಗತಕ್ಕಂಥ ಸಂದರ್ಭ ಇದೆ. ಈ ದೇವರ ಬಡಕೆರೆಗೆ ಸಂಬಂಧಪಟ್ಟಂಥ ನೀರಿನ ಸರಬರಾಜು ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಿ, ಆ ಭಾಗದ ರೈತರಿಗೆ ಹೆಚ್ಚಿನ ಅನುಕೂಲತೆಗಳನ್ನು ಮಾಡಿಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಇನ್ನು ನನ್ನ ಕ್ಷೇತ್ರದ (ಮಾಯಕೊಂಡ)ಲ್ಲಿರತಕ್ಕಂಥ ಮೂರು ಏತ ನೀರಾವರಿ ಯೋಜನೆಗಳನ್ನು ತೆಗೆದುಕೊಳ್ಳಬೇಕೆಂದು ನಿರ್ಧರಿಸಿ, ಮಾನ್ಯ ದೇವೇಗೌಡರು ಅದರಲ್ಲಿ ಒಂದು ಏತ ನೀರಾವರಿಗೆ ಈಗಾಗಲೇ ಅಡಿಗಲ್ಲನ್ನು ಕೂಡ ಹಾಕಿದ್ದಾರೆ. ಈ ಏತ ನೀರಾವರಿ ಯೋಜನೆಗೆ ಸುಮಾರು ೧೬ ಲಕ್ಷ ರೂಪಾಯಿಗಳು ಅಂದಾಜು ಆಗುತ್ತದೆ. ಇದಕ್ಕೆ ಅಡಿಗಲ್ಲನ್ನು ಹಾಕಿದ್ದರೂ ಸಹ ಇದುವರೆಗೆ ಕೆಲಸ ಪ್ರಾರಂಭವಾಗಿಲ್ಲ. ಕಾರಣ ಈ ಏತ ನೀರಾವರಿ ನಿಗಮ ಸ್ಥಾಪನೆಯಾದ ಮೇಲೆ ಅದಕ್ಕೆ ಸಂಬಂಧಪಟ್ಟಂಥ ನಕ್ಷೆಗಳಾಗಲಿ, ಅಂದಾಜುಗಳನ್ನಾಗಲಿ, ಹುಡುಕಿದರೂ ಸಿಗದಂಥ ಒಂದು ಪರಿಸ್ಥಿತಿಯಲ್ಲಿ ಇದೆ. ನಿಗಮದ ಕಛೇರಿಯು ಬಿಜಾಪುರದಲ್ಲಿ ಇರುವ ಕಾರಣ ಇಲ್ಲಿಂದ ಅಲ್ಲಿಗೆ ಹೋಗುವ ಮತ್ತು ಹುಡುಕಾಡುವ ಕೆಲಸ ಕಷ್ಟಸಾಧ್ಯವಾಗಿದೆ. ಮಾಯಕೊಂಡ ಕ್ಷೇತ್ರದಲ್ಲಿ ಕುರ್ಕಿ, ಶಿರಿಯಾಪುರ ಎನ್ನತಕ್ಕಂಥ ಎರಡು ಭಾಗಗಳಲ್ಲಿಯೂ ಸಹ ಈಗಾಗಲೇ ನೀರಾವರಿಯಲ್ಲಿರತಕ್ಕಂಥ ಏತನೀರಾವರಿ ಕೆಲಸಗಳ ಬಗ್ಗೆ ತೀವ್ರಗತಿಯಲ್ಲಿ ಕೆಲಸ ಪ್ರಾರಂಭ ಮಾಡಬೇಕು. ನೀರಿನ ಸಂಪನ್ಮೂಲಗಳು ಸಾಕಷ್ಟು ಇರುವುದರಿಂದಾಗಿ ಈ ಮೂರು ಏತನೀರಾವರಿಗಳನ್ನು ಮಾಡುವುದರಿಂದ ನಮ್ಮ ಭಾಗದ ರೈತರಿಗೆ ಸಹಾಯವಾಗುತ್ತದೆ. ಆದಕಾರಣ ಸರಕಾರದವರು ಇವುಗಳನ್ನು ಕೈಗೆತೆಗೆದುಕೊಳ್ಳ ಬೇಕೆಂದು ಕೇಳಿಕೊಂಡು ರೈತರಿಗೆ ಈ ಒಂದು ಸವಲತ್ತನ್ನು ಒದಗಿಸಿಕೊಡುತ್ತಾರೆ ಎಂಬ ನಂಬಿಕೆಯನ್ನು ಕೂಡ ವ್ಯಕ್ತ ಪಡಿಸುತ್ತೇನೆ. ದೇಶದ ಮತ್ತು ರಾಜ್ಯದ ಹಿತದೃಷ್ಟಿಯಿಂದ ಈ ದೇಶದಲ್ಲಿ ಕೃಷಿಗೆ ಹೆಚ್ಚಿನ ಒಂದು ಪ್ರಾಧಾನ್ಯತೆಯನ್ನು ಕೊಡಬೇಕಾಗಿರುವುದರಿಂದ ನಮ್ಮ ರಾಜ್ಯದಲ್ಲಿರುವ ಎಲ್ಲಾ ನೀರಿನ ಸಂಪನ್ಮೂಲಗಳನ್ನು ಬಳಸಿಕೊಂಡು ಹೆಚ್ಚಿನ ಉತ್ಪಾದನೆಯನ್ನು ಮಾಡತಕ್ಕಂಥ ಕಾರ್ಯವನ್ನು ಮಾಡಬೇಕು. ನಮ್ಮ ನಾಡು, ರಾಷ್ಟ್ರ ಒಂದು ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿ ಆಗಬೇಕಾಗಿದೆ. ನಮ್ಮ ರಾಜ್ಯ ಕೃಷಿಯ ಮೇಲೆ ಅವಲಂಭಿಸಿರತಕ್ಕಂಥದ್ದು ಆಗಿದೆ. ಆ ದೃಷ್ಟಿಯಿಂದ ಹೆಚ್ಚಿನ ಒಂದು ಸವಲತ್ತುಗಳನ್ನು ಈ ಯೋಜನೆಗಳಿಗೆ ಕೊಡಬೇಕಾಗಿದೆ. ಯಾವುದೇ ದೊಡ್ಡ ಯೋಜನೆಗಳನ್ನು ತೆಗೆದುಕೊಳ್ಳಬಾರದು ಎಂದು ನಾವು ಹೇಳುತ್ತಿಲ್ಲ. ಆದರೆ ಅದಕ್ಕೆ ಹೆಚ್ಚಿನ ಹಣ ಬೇಕಾಗಿರುವುದರಿಂದ, ಆರ್ಥಿಕಪರಿಸ್ಥಿತಿಗೆ ಅನುಗುಣವಾಗಿ ಆ ಯೋಜನೆಗಳಿಗೆ ಹೆಚ್ಚಿನ ಒಂದು ಆದ್ಯತೆ ಕೊಟ್ಟಾಗ ಗ್ರಾಮಾಂತರ ಪ್ರದೇಶಗಳಲ್ಲಿ ಏತನೀರಾವರಿ ಯೋಜನೆಗಳನ್ನು ಕೆರೆಕಟ್ಟೆಗಳನ್ನು, ಕೊಳವೆ ಬಾವಿಗಳನ್ನು ತೆಗೆಸುವುದು ಮುಂತಾದ ಕಾರ್ಯಗಳನ್ನು ಮಾಡುವುದರ ಮೂಲಕ ಗ್ರಾಮಾಂತರ ಪ್ರದೇಶಗಳಲ್ಲಿ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲಿಕ್ಕೆ ಅನುಕೂಲ ಆಗುತ್ತದೆ. ಅದೇ ರೀತಿಯಲ್ಲಿ ಕೃಷಿಕಾರ್ಮಿಕರು ಹೆಚ್ಚಾಗಿರತಕ್ಕಂಥ ಪ್ರದೇಶಗಳಲ್ಲಿ ಅವರಿಗೆ ಉದ್ಯೋಗವನ್ನು ಕೂಡ ಕೊಟ್ಟ ಹಾಗೆ ಆಗಿ ಅವರು ತಮ್ಮ ಜೀವನವನ್ನು ನೆಮ್ಮದಿಯಿಂದ ನಡೆಸಿಕೊಂಡು ಹೋಗಲು ಸಹಾಯವಾಗುತ್ತದೆ ಎಂದು ಹೇಳಿ. ಈ ಬಗ್ಗೆ ಸರಕಾರದವರು ತೀವ್ರ ಗಮನಕೊಟ್ಟು ರೈತವರ್ಗದವರಿಗೆ ಅನುಕೂಲ, ಮಾಡಿಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಂಡು, ಅವಕಾಶ ಕೊಟ್ಟ ತಮಗೆ ಧನ್ಯವಾದಗಳನ್ನು ಅರ್ಪಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಸಿ.ಎಂ. ಉದಾಸಿ (ಹಾನಗಲ್). — ಮಾನ್ಯ ಅಧ್ಯಕ್ಷರೇ, ಇಂದು ಸಭೆಯ ಮುಂದಿರುವ ನೀರಾವರಿ ಮತ್ತು ಕಂದಾಯ ಇಲಾಖೆಗಳ ಬೇಡಿಕೆಗಳ ಮೇಲೆ ನಾನು ಕೆಲವು ಮಾತುಗಳನ್ನು ಆಡಲು ಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ನೀರಾವರಿ ಯೋಜನೆಗಳು ಏನಿವೆ ಅವು ಯಾವ ಮಟ್ಟದಲ್ಲಿ ಆಗಬೇಕೆಂದು ನಿರೀಕ್ಷಿಸಿದ್ದೆವೋ ಆ ಮಟ್ಟದಲ್ಲಿ ಆಗಿಲ್ಲ ಎಂದರೆ ಅತಿಶಯೋಕ್ತಿಯಾಗುವುದಿಲ್ಲ. ಆದ್ದರಿಂದ ಆ ಬಗ್ಗೆ ಮರು ಚಿಂತನೆ ಮಾಡುವ ಕಾಲ ಬಂದಿದೆ. ಎಲ್ಲಾ ಉಳಿದ ಯೋಜನೆಗಳನ್ನೂ ಒಂದು ಬದಿಗಿಟ್ಟು, ಈ ತರಹದ ಯೋಜನೆಗಳಿಗೆ ಅಗ್ರಪ್ರಾಶಸ್ತ್ಯ ಕೊಡುವ ಅವಶ್ಯಕತೆ ಇದೆ. ಏಕೆಂದರೆ ನೀರಾವರಿಯಿಂದ ಆಗುವ ಆರ್ಥಿಕ ಬದಲಾವಣೆಯನ್ನು ಬೇರೆ ಯಾವ ರೀತಿಯಿಂದಲೂ ಸಾಧಿಸಲು ಆಗುವುದಿಲ್ಲ ಎಂಬುದು ನಮಗೀಗ ತಿಳಿದಿದೆ. ಆದ್ದರಿಂದ ಇದಕ್ಕೆ ಪ್ರಥಮ ಪ್ರಾಶಸ್ತ್ಯ ಸಿಗಬೇಕು ಮತ್ತು ಬೇರೆಲ್ಲವನ್ನೂ ತಾತ್ಕಾಲಿಕವಾಗಿ ಬದಿಗಿಡಬೇಕು. ಹಾಗೆ ಮಾಡದಿದ್ದರೆ ರೈತರು ಹತಾಶರಾಗಿರುವಂತಾಗಲು ಹಿಂದಿನವರು ಹೇಗೆ ಕಾರಣರಾದರೋ ಹಾಗೆಯೇ ಆ ಜವಾಬ್ದಾರಿ ದೂಷಣೆಯನ್ನು ನಾವೂ ಹೊತ್ತುಕೊಳ್ಳಬೇಕಾಗುತ್ತದೆ.

ಮುಖ್ಯವಾಗಿ ೧೯೮೩–೮೪ರ ವರೆಗೆ ನಮ್ಮ ಕರ್ನಾಟಕದಲ್ಲಿ ಅದರಲ್ಲೂ ಉತ್ತರ ಕರ್ನಾಟಕದಲ್ಲಿ ಆಗಿರುವ ಕೆಲವಾರು ಯೋಜನೆಗಳ ಪ್ರಗತಿ ನೋಡಿದರೆ ಬಹಳ ಕಡಿಮೆ. ಮುಖ್ಯವಾಗಿ ಧಾರವಾಡ ಜಿಲ್ಲೆಯಲ್ಲಿ ವರದಾ ನದಿಗೆ, ತುಂಗಭದ್ರಾ ನದಿಗೆ ಮತ್ತು ಕುಮುದವತಿ ನದಿಗಳಿಗೆ ಬ್ರಿಡ್ಜ್ ಕಮ್ ಬ್ಯಾರೇಜಸ್ ಕಟ್ಟುವ ವಿಚಾರವನ್ನು ತೆಗೆದುಕೊಂಡರೆ ಆ ನದಿ ದಂಡೆಗಳ ಮೇಲೆ ಲಿಫ್ಟ್ ಇರಿಗೇಷನ್

ಸ್ಕೀಂಗಳನ್ನು ಮಾಡುವ ವಿಚಾರದಲ್ಲಿ ಪ್ರತಿ ವರ್ಷ ಬಜೆಟ್‌ನಲ್ಲಿ ಹಣ ಸಮೂದಿಸುವುದು ಆದರೆ ಆ ಹಣ ಬಳಸಿ ಸ್ಕೀಮ್‌ಗಳನ್ನು ಕಾರ್ಯರೂಪಕ್ಕೆ ಮಾತ್ರ ತರದಿರುವುದು ವಿಷಾದದ ಸಂಗತಿ. ಹಾವೇರಿ ಮತ್ತು ಹಾನಗಲ್ ಎರಡೂ ತಾಲ್ಲೂಕುಗಳನ್ನೇ ತೆಗೆದುಕೊಂಡರೆ ಹಾನಗಲ್ ತಾಲ್ಲೂಕಿನಲ್ಲಿ ಬಂದಂಥ ಲಿಫ್ಟ್ ಇರಿಗೇಷನ್ ಸ್ಕೀಮ್ ತಮಗೆಲ್ಲರಿಗೂ ಗೊತ್ತಿರುವಂತೆ ಇದಕ್ಕೆ ಮಂತ್ರಿಗಳೇ ಅಡಿಗಲ್ಲು ಇಟ್ಟು ಸಮಾರಂಭ ಆಗಿದ್ದರೂ ಕೂಡ ಅದು ಕಾರ್ಯರೂಪಕ್ಕೆ ಬಂದಿಲ್ಲ. ಬಹುಶಃ ಇಲಾಖೆಯನ್ನು ಕಾಲಕಾಲಕ್ಕೆ ಬದಲಾಯಿಸುತ್ತಿರುವುದರಿಂದ ಹೀಗಾಗಿರಬಹುದೇನೋ. ಏಕೆಂದರೆ ಮೊದಲು ಇದು ಮೈನರ್ ಇರಿಗೇಷನ್‌ಲ್ಲಿತ್ತು. ಆಮೇಲೆ ಲಿಫ್ಟ್ ಇರಿಗೇಷನ್ ಬಂತು ಈ ತರಹ ಕೊಂಕಣದ ಬ್ರಿಜ್ ಕಮ್ ಬ್ಯಾರೇಜ್, ನಾಗನೂರು ಬ್ರಿಜ್ ಕಮ್ ಬ್ಯಾರೇಜ್ ಇವೆ. ಅಲ್ಲದೆ ಈ ಯೋಜನೆಗಳು ಬಜೆಟ್‌ನಲ್ಲಿ ಹಣ ಇರಿಸಿಕೊಂಡಿದ್ದರೂ ಕೆಲಸವೇ ಪ್ರಾರಂಭವಾಗದಿದ್ದುದನ್ನು ನೋಡಿದರೆ ವಿಷಾದಪಡಬೇಕಾಗಿದೆ. ಈಗಲಾದರೂ ಮಾನ್ಯ ಮಂತ್ರಿಗಳು ಇವುಗಳ ಕಡೆ ಗಮನಹರಿಸಿ ಪ್ರಾಮಾಣಿಕ ಪ್ರಯತ್ನ ಮಾಡುತ್ತಾರೆಂದು ಭಾವಿಸಿ ಕೊಂಡಿದ್ದೇನೆ. ಜೊತೆಗೆ ಮರುಚಿಂತನೆ ನಡೆಸಿ ಆರ್ಥಿಕ ಸಂಪತ್ತಿನ ಕ್ರೋಢೀಕರಣದ ಬಗ್ಗೆ ಕೆಲಸ ಮಾಡಬೇಕಾಗಿದೆ. ಹಾನಗಲ್ ತಾಲ್ಲೂಕಿನ ಶೇಷಗಿರಿ ಲಿಫ್ಟ್ ಇರಿಗೇಷನ್ ಮತ್ತು ಕುಸನೂರು ಲಿಫ್ಟ್ ಇರಿಗೇಷನ್ ಏನಿವೆ ಇವುಗಳ ಜೊತೆಗೆ ಮೇವುಂಡಿ ಮತ್ತು ಹಾವನೂರು ಹಾವೇರಿ ಸ್ಕೀಮ್‌ಗಳಲ್ಲಿ ಬಳಸಿರುವ ಪಂಪ್‌ಗಳು ಅಲ್ಲಿನ ನಿರ್ಮಲ ಇಂಜಿನಿಯರಿಂಗ್ ಕಂಪನಿಯ ಸೆಂಟ್ರಿಫ್ಯೂಗಲ್ ಪಂಪುಗಳು. ಈ ಯೋಜನೆಗಳು ಯಾವ ರೀತಿ ನಡೆಯುತ್ತಿದೆ ಎಂದರೆ ಮಳೆಗಾಲ ಬಂದಾಗ ಪಂಪ್‌ಗಳನ್ನು ನಾವು ಬಿಚ್ಚಿ ಇಡಬೇಕು ಮತ್ತು ಮಳೆಗಾಲ ಮುಗಿದಾಗ ಅವುಗಳನ್ನು ಜೋಡಿಸಬೇಕು.

೨-೩೦ ಪಿ. ಎಂ.

ನಿರ್ಮಲ ಇಂಜಿನಿಯರಿಂಗ್ ಕಂಪೆನಿಯ ಮೋಟಾರ್‌ಗಳು ಏನು ಇದೆ ಅದನ್ನೇ ಹಾಕುತ್ತಾ ಬಂದುದರಿಂದಾಗಿ ೭೮ರಿಂದ ಪ್ರಾರಂಭವಾದ ಯೋಜನೆಗಳು ಏನು ಇವೆ ಅದು ಹತ್ತು ವರ್ಷವಾದರೂ ಸಹ ಶೇಕಡಾ ೨೫ ರಷ್ಟು ಲಾಭವನ್ನು ಪಡೆಯಲಿಕ್ಕೆ ಸಾಧ್ಯವಾಗುತ್ತಿಲ್ಲ. ಇದರಿಂದ ಯಾವುದೇ ಪ್ರಗತಿಯನ್ನು ಸಾಧಿಸಲಿಕ್ಕೆ ಸಾಧ್ಯವಾಗಿಲ್ಲವೆಂಬುದನ್ನು ತಮ್ಮ ಮೂಲಕ ಸರಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ನೀರಾವರಿ ಯೋಜನೆಯ ಪೂರ್ಣ ಪ್ರಯೋಜನವನ್ನು ಪಡೆಯಬೇಕಾದರೆ ಡೀಪ್ ವೆಲ್ ಪಂಪ್‌ಗಳನ್ನು ಹಾಕಿದರೆ ೧೨ ತಿಂಗಳೂ ನೀರಾವರಿ ಯೋಜನೆಯ ಲಾಭವನ್ನು ಪಡೆದುಕೊಳ್ಳುವಂತಹ ವ್ಯವಸ್ಥೆಯನ್ನು ಮಾಡಬಹುದು. ಇದನ್ನು ಮಾಡಿದ್ದೇ ಆದರೆ ಹಾನಗಲ್, ಹಾವೇರಿ ತಾಲ್ಲೂಕಿನಲ್ಲಿ ಸಕ್ಕರೆ ಕಾರ್ಖಾನೆಗೆ ಬೇಕಾದಂತಹ ಕಬ್ಬು ಬೆಳೆಯಬೇಕಾದಂತಹ ಪ್ರದೇಶವೇನು ಇದೆ ಅದಕ್ಕೆ ಹೆಚ್ಚು ಮಹತ್ವ ಬರುತ್ತದೆ. ಇದರ ಜೊತೆಗೆ ಹಾನಗಲ್. ಹಾವೇರಿ ರಾಣೆಬೆನ್ನೂರು ಮತ್ತು ಹಿರೇಕೆರೂರು ತಾಲ್ಲೂಕುಗಳಿಗೆ ಕೂಡ ಅನುಕೂಲವಾಗುತ್ತದೆ. ಅಪ್ಪರ್ ತುಂಗಾ ಯೋಜನೆಯನ್ನು ಸರಕಾರ ಈಗಲಾದರೂ ಕಾರ್ಯರೂಪಕ್ಕೆ ತರುವುದರಲ್ಲಿ ಆಲೋಚನೆ ಮಾಡುವುದು ಒಳ್ಳೆಯದು. ೪೦೦ ಕೋಟಿ ರೂಪಾಯಿಯ ಈ ಯೋಜನೆಯನ್ನು ಜಾರಿಗೆ ತಂದರೆ ಧಾರವಾಡದಲ್ಲಿ ೨ ಲಕ್ಷಕ್ಕಿಂತ ಹೆಚ್ಚು ಪ್ರದೇಶ ನೀರಾವರಿಗೆ ಒಳಪಡುತ್ತದೆ. ಈ ಯೋಜನೆಯನ್ನು ಜಾರಿಗೆ ತರಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನೀರಾವರಿ ಬಗ್ಗೆ ಇನ್ನು ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಹಿಂದೆ ಮೈನರ್ ಇರಿಗೇಷನ್ ಇಲಾಖೆ ಇದನ್ನು ನೋಡಿಕೊಳ್ಳುತ್ತಿತ್ತು, ಈಗ ಅದನ್ನು ಜಿಲ್ಲಾ ಪರಿಷತ್ತಿಗೆ ವರ್ಗಾವಣೆ ಮಾಡಿದ್ದಾರೆ. ಕೆರೆ ಕಟ್ಟೆಗಳ ರಿಪೇರಿ ಕೆಲಸಗಳು ಜಿಲ್ಲಾ ಪರಿಷತ್ತಿನ ಕೈಕೆಳಗೆ ಆಗಲಿಕ್ಕೆ ಸಾಧ್ಯವಿಲ್ಲ. ಉದಾಹರಣೆಗೆ ಹೇಳುವುದಾದರೆ, ಹಾನಗಲ್ ತಾಲ್ಲೂಕು ಒಂದರಲ್ಲೇ ೧೨೦೦ ಕೆರೆಗಳು ಇವೆ ಬೇರೆ ಕಡೆಗಳಲ್ಲಿ ಎಷ್ಟು ಇರಬಹುದು ಎಂಬುದನ್ನು ಯೋಚನೆ ಮಾಡಬೇಕು. ಜಿಲ್ಲಾ ಪರಿಷತ್ತಿಗೆ ಇದನ್ನು ವರ್ಗಾವಣೆ ಮಾಡುವುದರಿಂದ ಯಾವುದೇ ಪ್ರಯೋಜನವಾಗುವುದಿಲ್ಲ. ಪಿ ಹೆಚ್. ಇ ಇಲಾಖೆಯ ಕೆಲಸ ರಸ್ತೆ ರಿಪೇರಿ ಕೆಲಸವಾಗಲಿ ಕುಡಿಯುವ ನೀರಿನ ಕೆಲಸ ಮತ್ತು ಪ್ರತಿಯೊಂದು ಯೋಜನೆಯ ಉಸ್ತುವಾರಿಯನ್ನು ನೋಡುವುದರ ಜೊತೆಗೆ ನೀರಾವರಿಯನ್ನು ಯೋಜನೆಯನ್ನೂ ನೋಡಿಕೊಳ್ಳಬೇಕೆಂದು ಹೇಳಿದರೆ ಈ ಕೆರೆ ಕಟ್ಟೆಗಳ ರಿಪೇರಿ ಕೆಲಸವನ್ನು ಅವರಿಂದ ಯಾವತ್ತೂ ಮಾಡುವುದಕ್ಕಾಗುವುದಿಲ್ಲ. ಇನ್ನು ಗಂಗಾ ಕಲ್ಯಾಣ ಯೋಜನೆಯನ್ನು ಕೂಡ ಅವರಿಗೇ ಕೊಟ್ಟಿದ್ದಾರೆ. ಅವರು ಇದನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗುವುದಿಲ್ಲ. ಇದನ್ನು ಕಾರ್ಯ ರೂಪಕ್ಕೆ ತರವುದಕ್ಕೆ ಸಾಧ್ಯವಾಗುವುದಿಲ್ಲ. ಧಾರವಾಡ ಜಿಲ್ಲೆಯಲ್ಲಿ ಗಂಗಾ ಕಲ್ಯಾಣ ಯೋಜನೆ ಒಂದು ವರ್ಷದಿಂದ ನಡೆಯುತ್ತಿದೆ.

ಆದರೆ ಅದು ಪ್ರಗತಿಯಾಗಿಲ್ಲವೆಂದು ಹೇಳಿದರೆ ಏನೂ ಆಶ್ಚರ್ಯವಾಗುವುದಿಲ್ಲ. ಈ ಇಲಾಖೆಯ ಬಗ್ಗೆ ಮತ್ತೆ ಹೊಸ ಯೋಜನೆಯನ್ನೇನಾದರೂ ತರುವುದು ಸೂಕ್ತವೆಂದು ನನ್ನ ಭಾವನೆ. ಅದು ಬಿಟ್ಟು ಎಲ್ಲವನ್ನೂ ಜಿಲ್ಲಾಪರಿಷತ್ತಿಗೆ ಸೇರಿಸುವುದಾದರೆ ಇದರ ಯೋಜನೆಯ ಪೂರ್ಣ ಲಾಭವನ್ನು ಪಡೆಯಲಿಕ್ಕೆ ಸಾಧ್ಯವಾಗುವುದಿಲ್ಲ. ಈ ಯೋಜನೆಗಳ ಪೂರ್ಣ ಲಾಭವನ್ನು ಪಡೆಯಬೇಕಾದರೆ ಇದಕ್ಕೊಂದು ಕಾರ್ಯಕ್ರಮವನ್ನು ಹಾಕಿಕೊಂಡು ಅದಕ್ಕೊಂದು ಬೇರೆ ಇಲಾಖೆಯನ್ನು ಮಾಡುವುದರ ಬದಲಾಗಿ ಸಿ ಅಂಡ್ ಬಿ ಇಲಾಖೆ ಏನು ಇದೆ ಅದಕ್ಕೆ ಕೆಲಸ ಕಾರ್ಯಗಳು ಇರುವುದಿಲ್ಲ ಅದಕ್ಕೇ ವಹಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇವರಿಂದ ಕೆರೆ ಕಟ್ಟೆಗಳ ರಿಪೇರಿಯನ್ನು ಮಾಡಿಸುವುದಾದರೆ ಪ್ರಯೋಜನವಾಗುತ್ತದೆ. ವರ್ಲ್ಡ್ ಬ್ಯಾಂಕ್ ಅಸಿಸ್ಟೆನ್ಸ್ ಯೋಜನೆಯಲ್ಲಿ ಹಾನಗಲ್‌ನಲ್ಲಿನ ಧರ್ಮಾಪುರ ಪ್ರಾಜೆಕ್ಟ್ ಅನ್ನು ರೀಮಾಡಲಿಂಗ್ ಮಾಡುವ ಕೆಲಸ ಕಾರ್ಯರೂಪಕ್ಕೆ ಬರಬೇಕಾಗಿತ್ತು. ಆದರೆ ಇದುವರೆಗೂ ಕಾರ್ಯ ರೂಪಕ್ಕೆ ಬಂದಿಲ್ಲ. ವಾಣಿವಿಲಾಸ್ ಯೋಜನೆಗೆ ಹಣ ಬಿಡುಗಡೆ ಮಾಡಿ ಕೆಲಸ ಪ್ರಾರಂಭವಾಗಿದೆ. ಒಂದು ಕೋಟಿ ೯೦ ಲಕ್ಷ ರೂಪಾಯಿ ಅಂದಾಜಿನ ಪ್ರಾಜೆಕ್ಟನ್ನು ವಿಶ್ವಬ್ಯಾಂಕ್ ನೆರವಿನಿಂದ ಕಾರ್ಯ ರೂಪಕ್ಕೆ ತಂದರೆ ಶೇಕಡ ೫೦ ರಷ್ಟು ಹಾಳಾಗಿ ಹೋಗುವ ನೀರನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ. ಈ ವಿಚಾರಕ್ಕೆ ಬಹಳ ಮಹತ್ವ ಕೊಟ್ಟು ಮಾಡುತ್ತಾರೆ ಎಂಬ ಆಶಯವನ್ನು ನಾನು ಇಟ್ಟುಕೊಂಡಿದ್ದೇನೆ. ಇದರ ಜೊತೆಗೆ ೧೦೦ ಕೊಳವೆ ಬಾವಿಗಳ ಯೋಜನೆಗಳು ಏನು ಇದೆ ಅದರಲ್ಲಿ ತೊಂದರೆಯಾಗುತ್ತಿದೆ. ನೀರಾವರಿ ಯೋಜನೆಯಿಂದ ರೈತರಿಗೆ ಪ್ರಯೋಜನ ಸಿಗಬೇಕಾದಂತಹ ಸಂದರ್ಭದಲ್ಲಿ ಎರಡು ಕೊಳವೆ ಬಾವಿಗಳ ಮಧ್ಯದಲ್ಲಿ ೮೦೦ ಮೀಟರ್‌ವರೆಗೆ ಅಂತರವನ್ನು ಇಡಬೇಕು. ಪ್ರತಿಯೊಂದಕ್ಕೂ ಈ ರೀತಿಯ ಅಂತರವನ್ನು ತರದೇ ಹೋದರೆ ಎರಡೂ ಕೊಳವೆ ಬಾವಿಗಳು ವಿಫಲವಾಗಿ ರೈತರಿಗೆ ತೊಂದರೆಯಾಗುವಂತಹ ಸಂದರ್ಭ ಹೆಚ್ಚಾಗಿರುವುದರಿಂದ ಸರಕಾರ ಈ ಬಗ್ಗೆ ಗಮನಹರಿಸಬೇಕು. ಇನ್ನು ನದಿಯಿಂದ ನೀರು ಎತ್ತುವ ಸಲುವಾಗಿ ಪರವಾನಗಿಯನ್ನು ಪಡೆಯಬೇಕಾಗುತ್ತದೆ. ಮೊದಲು ಇದಕ್ಕೆ ಪರವಾನಗಿಯನ್ನು ಕೊಡುವ ಅಧಿಕಾರ ಮೈನರ್ ಇರಿಗೇಷನ್ ಇಲಾಖೆಗೆ ಇತ್ತು ಈಗ ಇದನ್ನು ಜಿಲ್ಲಾ ಪರಿಷತ್ತಿಗೆ ಹಾಕಬೇಕೆಂದು ಸಧ್ಯದಲ್ಲಿ ಆಜ್ಞೆಯನ್ನು ಹೊರಡಿಸಿದ್ದಾರೆಂದು ಕೇಳಿದ್ದೇನೆ. ಹೀಗಾದರೆ ಜನರು ಯಾವುದಕ್ಕೆ ಎಲ್ಲಿಗೆ ಹೋಗಬೇಕು ಎಂಬುದನ್ನು ಗೊತ್ತಾಗದಂತ ಪರಿಸ್ಥಿತಿ ಇದೆ. ಸ್ಥಳೀಯವಾಗಿ ಇವಕ್ಕೆ ಪರವಾನಗಿ ಕೊಡುವಂತಹ ವ್ಯವಸ್ಥೆ ಮಾಡಿದರೆ ನದಿಯಿಂದ ನೀರು ಎತ್ತುವಂತಹ ವ್ಯವಸ್ಥೆಯಿಂದ ಜನರು ಪ್ರಯೋಜನವನ್ನು ಪಡೆಯಬಹುದು. ಮುಖ್ಯವಾಗಿ ಇಲ್ಲಿ ನೀರನ್ನು ಬಳಸುವ ಬಗ್ಗೆ ತರಬೇತಿಯನ್ನು ಕೊಡಬೇಕಾದ್ದು ಅವಶ್ಯ ಇದೆ ಎಂದು ನನ್ನ ಭಾವನೆ ಈ ನೀರನ್ನು ಬಳಕೆ ಮಾಡಬೇಕಾದಂತ ರೈತರು ಕಡಿಮೆ ನೀರಿನಲ್ಲಿ ಹೆಚ್ಚು ಫಲಪ್ರದವಾಗಿ ಬೆಳೆ ಬೆಳೆಯಬೇಕಾದಂಥ ತರಬೇತಿಯನ್ನು ಕೊಡಬೇಕಾಗಿದೆ. ಆ ರೀತಿ ಅವರಿಗೆ ತರಬೇತಿ ಇಲ್ಲದೇ ಇರುವುದರಿಂದ ನೀರು ಹೆಚ್ಚು ಪೋಲಾಗಿ ಹೋಗುತ್ತಿದೆ. ಇದನ್ನು ನಾವು ಇವತ್ತು ಸಾಮಾನ್ಯವಾಗಿ ಕಾಣುತ್ತಿದ್ದೇವೆ. ಆ ರೀತಿ ತರಬೇತಿ ಕೊಡಬೇಕಾದ್ದು ಈ ವಿಚಾರದಲ್ಲಿ ನೀರಾವರಿ ಇಲಾಖೆ ಮತ್ತು ಕೃಷಿ ಇಲಾಖೆ ಇದರ ಬಗ್ಗೆ ಯೋಚಿಸಿ ಸರಿಯಾದ ತರಬೇತಿಯನ್ನು ಕೊಡಬೇಕು. ನೀರನ್ನು ಸರಿಯಾದ ರೀತಿಯಲ್ಲಿ ಬಳಸಿಕೊಂಡು ಮೂರು ಪಟ್ಟು ಬೆಳೆಬೆಳೆಯುವ ಹಾಗೆ ತರಬೇತಿ ನೀಡಿದರೆ ಆ ರೀತಿ ಅವರು ಹೆಚ್ಚು ಬೆಳೆಯನ್ನು ತೆಗೆಯಲಿಕ್ಕೆ ಸಾಧ್ಯವಾಗುತ್ತದೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಸನ್ಮಾನ್ಯ ಸಚಿವರು ಇತ್ತ ಕಡೆ ಗಮನಹರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಮುಖ್ಯವಾಗಿ ನೀರಾವರಿಯಲ್ಲಿ ಕೆರೆಕಟ್ಟೆಗಳ ರಿಪೇರಿ ಕೆಲಸ ಕಾರ್ಯಗಳು ಇಪ್ಪತ್ತು ವರ್ಷಗಳಿಂದಲೂ ಆಗಿಲ್ಲ ಏನಾದರೂ ಹೊಸ ವ್ಯವಸ್ಥೆಯನ್ನು ಮಾಡಿ ಕೆರೆಕಟ್ಟೆಗಳ ರಿಪೇರಿ ಕೆಲಸಕಾರ್ಯಗಳು ಬಗ್ಗೆ ಹೆಚ್ಚು ಆಸ್ತೆ ವಹಿಸಿ ಕೆಲಸಗಳನ್ನು ಮಾಡುತ್ತಾರೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಇನ್ನು ಕಂದಾಯ ಇಲಾಖೆಯ ಬಗ್ಗೆ ಒಂದೆರಡು ವಿಷಯಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಂದಾಯ ಇಲಾಖೆಯಲ್ಲಿ ಮಾಡಿದಂಥ ಒಂದು ಭೂಸುಧಾರಣಾ ಕಾನೂನು..

ಶ್ರೀ ಬಿ. ಬಸವಲಿಂಗಪ್ಪ.—ಅಧ್ಯಕ್ಷರೇ ಮಾನ್ಯ ಉದಾಸಿಯವರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ, ಅಂಕಿಅಂಶಗಳನ್ನು ಕೊಟ್ಟುಬಿಟ್ಟು ಅವರ ಕ್ಷೇತ್ರದ ಬಗ್ಗೆ ಮತ್ತು ರಾಜ್ಯದ ಬಗ್ಗೆ ಅಷ್ಟು ನಿಷ್ಠೆಯಿಂದ ಅಭ್ಯಾಸ ಮಾಡಿಬಿಟ್ಟು ಮಾತನಾಡುತ್ತಿದ್ದಾರೆ, ಅವರ ಮಾತುಗಳನ್ನು ನಾನು ಮಾತನಾಡುವಾಗ ಒತ್ತಾಯ ಮಾಡುತ್ತೇನೆ. ಅವರು ಮಾತನಾಡುವಾಗ ಸಂಬಂಧಪಟ್ಟ ಮಂತ್ರಿಗಳಿಗೆ

ಜವಾಬ್ದಾರಿ ಇಲ್ಲವೇ–ಎಂದು ಒಂದು ಪ್ರಶ್ನೆ ಅವರು ಯಾರಿಗೆ ಹೇಳುತ್ತಿದ್ದಾರೆ, ಶ್ರೀಮಾನ್ ಲಕ್ಷ್ಮೀಸಾಗರ್ ಅವರು ಇದ್ದಾರೆ. ಅವರು ಪವರ್ ಆಫ್ ಅಟಾರ್ನಿ ಹೋಲ್ಡರ್. ಅವರು ಈ ಸರ್ಕಾರದ ಎಲ್ಲಾ ಖಾತೆಗಳನ್ನು ನಾನೇ ನೋಡಿಕೊಳ್ಳುತ್ತೇನೆ ಎಂದು ಹೇಳುತ್ತಾರೆ. ಈ ರೀತಿ ಇರುವಾಗ ಸಂಬಂಧಪಟ್ಟ ನೀರಾವರಿ ಮಂತ್ರಿಗಳು ಯೋಜನಾ ಮಂತ್ರಿಗಳು, ರೆವಿನ್ಯೂ ಮಂತ್ರಿಗಳು ಇಲ್ಲಿ ಇರಬಾರದೇ?

ಉಪಾಧ್ಯಕ್ಷರು.—ಊಟಕ್ಕೆ ಹೋಗಿದ್ದಾರೆ, ಬರುತ್ತಾರೆ.

ಶ್ರೀ ಬಿ. ಬಸವಲಿಂಗಪ್ಪ.—ದಯಮಾಡಿ ಅವರನ್ನು ಕರೆಸಿ.

ಶ್ರೀ ಸಿ. ಎಂ. ಉದಾಸಿ.—ನಾನು ಕಂದಾಯ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಹೆಚ್ಚಾಗಿ ಗೇಣಿದಾರರಿಗೆ ಭೂ ನ್ಯಾಯ ಮಂಡಲಿಯ ತೀರ್ಮಾನದಂತೆ ಆದ ನಾಲ್ಕು ಲಕ್ಷದ ಎಂಭತ್ತೇಳು ಸಾವಿರ ಜನ ರೈತರಿಗೆ ಹಾಗೂ ಹೆಚ್ಚುವರಿ ಜಮೀನನ್ನು ಇಪ್ಪತ್ತೇಳು ಸಾವಿರ ಜನ ರೈತರಿಗೆ ಕೊಟ್ಟಾಗಿದೆ. ಸುಮಾರು ಐದೂವರೆ ಲಕ್ಷ ಜನ ರೈತರು ಏನು ಭೂ ನ್ಯಾಯ ಮಂಡಲಿಯಿಂದ ಆ ರೈತರಿಗೆ ಹಕ್ಕು ಪ್ರಾಪ್ತಿಯಾಗಿದೆ, ಆ ಹಕ್ಕು ಪ್ರಾಪ್ತಿಯಾದ ನಂತರ ಅಲ್ಲಿ ಆಗಿರುವ ಬದಲಾವಣೆ ಏನು ಎನ್ನುವುದನ್ನು ಸಹಾ ನಾವು ಇವತ್ತು ಆಲೋಚನೆ ಮಾಡಬೇಕಾಗಿದೆ. ಇದರ ಬಗ್ಗೆ ಪುನರ್ ವಿಮರ್ಶೆ ಮಾಡಿ ತೀರ್ಮಾನಕ್ಕೆ ಬಾರದೇ ಹೋದರೆ ನಾವೇನು ಯೋಚಿಸಿದ್ದೇವೆ, ಆ ರೈತರನ್ನು ಒಂದು ಶೋಷಣೆಯಿಂದ ತಪ್ಪಿಸಬೇಕು ಎಂದು, ಆ ರೈತರನ್ನು ಭೂ ಮಾಲೀಕನಿಂದ ಆ ಶೋಷಣೆಯನ್ನು ತಪ್ಪಿಸಿ ಅವನಿಗೇ ಮಾಲೀಕತ್ವ ಕೊಡಬೇಕು ಎನ್ನುವ ಉದ್ದೇಶದಿಂದ ಮಾಡಿದ್ದೆವು. ಅದು ವಿಫಲವಾಗುತ್ತದೆ, ಐದು ಲಕ್ಷ ಜನ ರೈತರಿಗೆ ಕೊಟ್ಟಿರುವ ಭೂಮಾಲೀಕತ್ವದಿಂದ ಇಲ್ಲಿ ಆಗಿರುವುದೇನು? ಆ ಪ್ರಗತಿಯಲ್ಲಿ ಬದಲಾವಣೆ ಸಾಧ್ಯವಾಗಿದೆಯೋ ಎನ್ನುವುದನ್ನು ಸಹಾ ನೋಡಬೇಕಾಗಿದೆ. ಏಕೆಂದರೆ ರಾಜ್ಯದ ಒಂದು ಮೌಲ್ಯಮಾಪನ ಮಾಡಬೇಕಾದ್ದು ಅತೀ ಪ್ರಾಮುಖ್ಯವಾದ ಕೆಲಸ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಆ ಜಮೀನನ್ನು ಹೊಂದಿದಂಥ ಬಡ ರೈತರು ಏನು ಇದ್ದಾರೆ, ಆ ರೀತಿ ಜಮೀನನ್ನು ಪಡೆದ ನಂತರ ಇವತ್ತು ಬೇರೆಯವರಿಗೆ ಭೋಗ್ಯಕ್ಕೆ ಕೊಟ್ಟಂಥಹ ಅನೇಕ ಉದಾಹರಣೆಗಳು ಇದೆ. ಕಾನೂನು ಪ್ರಕಾರ ಏನಾಗಿದೆ ಎಂದು ಹೇಳಿದರೆ ೧೫ ವರ್ಷಗಳ ತನಕ ಪರಭಾರೆ ಮಾಡಬಾರದು, ಎಂದು ಕಾನೂನು ಇರುವುದರಿಂದ ಮತ್ತಷ್ಟು ನಾವೇ ರೈತರನ್ನು ಶೋಷಣೆಗೆ ಒಳಗಾಗುವಂತೆ ನಾವು ಒಂದು ದಾರಿಯನ್ನು ಮಾಡಿಕೊಡುತ್ತಿದ್ದೇವೆ ಎಂದು ಕಾಣುತ್ತದೆ. ಯಾರು ಭೂಮಾಲೀಕತ್ವವನ್ನು ಪಡೆದ ಜನ ತಮ್ಮ ಬರಗಾಲದ ಪರಿಸ್ಥಿತಿಯಲ್ಲಿ, ಬೇರೆಯವರಿಗೆ ಭೋಗ್ಯಕ್ಕೆ ಕೊಡದಿರುವ ಬಗ್ಗೆ ೧–೩–೧೯೭೪ರ ಆ ನಂತರ ಒಂದು ಕಾನೂನನ್ನು ತಂದಿದ್ದಾರೆ. ಆ ರೀತಿ ಕಾನೂನು ಇದ್ದರೂ ಸಹಿತ ಕೊಟ್ಟಿರುವುದು ನೋಡಿದರೆ ಅವರಿಗೆ ಗತಿ ಇಲ್ಲ, ಗತಿ ಇಲ್ಲದಿದ್ದರೂ ಕಾನೂನು ರೀತ್ಯಾ ಕೊಡಲಿಕ್ಕೆ ಬರುವುದಿಲ್ಲ, ಈ ಒಂದು ಕಾರಣದಿಂದ ನಾವೇ ಶೋಷಣೆಗೆ ಕಾರಣಕರ್ತರಾಗಿದ್ದೇವೆ ಎನ್ನುವ ಭಾವನೆ ಬರುತ್ತದೆ. ಏಕೆಂದರೆ ೧೫ ವರ್ಷಗಳವರೆಗೆ ಬೇರೆಯವರಿಗೆ ಖರೀದಿ ಕೊಡಬಾರದು, ಬೇರೆಯವರಿಗೆ ಪರಭಾರೆ ಮಾಡಬಾರದು ಎಂದು ನಿಯಮಾವಳಿ ಇರುವುದರಿಂದ ಇದರ ಬಗ್ಗೆ ನಾವು ಮತ್ತೆ ಮರು ಚಿಂತನೆ ಮಾಡಬೇಕಾದಂಥ ಕಾಲ ಬಂದಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಆದ್ದರಿಂದ ಇತ್ತ ಕಡೆ ದಯವಿಟ್ಟು ಮಾನ್ಯ ಸಚಿವರು ಗಮನ ಹರಿಸುತ್ತಾರೆ ಎಂದು ನಾನು ಭಾವಿಸಿದ್ದೇನೆ. ಭೂ ನ್ಯಾಯ ಮಂಡಲಿಯಿಂದ ತೀರ್ಮಾನ ಆದ ಮೇಲೆ, ತೀರ್ಮಾನವಾದಂತಹ ಜಮೀನುಗಳ ಪಕ್ಕಾ ಪತ್ರ ಬದಲಾವಣೆ ಆಗಬೇಕಾಗುತ್ತದೆ. ಸಾಮಾನ್ಯವಾಗಿ ಭೂ ನ್ಯಾಯ ಮಂಡಲಿಗಳ ತೀರ್ಮಾನಕ್ಕೆ ಮೊದಲು ಅರ್ಜಿದಾರ ಹಿರಿಯ ಮಗ ಆಗಿರಲಿ, ಯಾರೇ ಆಗಿರಲಿ ಅರ್ಜಿ ಕೊಟ್ಟಿದ್ದರೆ, ಅವರ ನಂತರದ ವಾರಸುದಾರ ಅದನ್ನು ಬದಲಾವಣೆ ಮಾಡಬೇಕಾದ ಸಂದರ್ಭ ಬಂದಲ್ಲಿ ಸಿವಿಲ್ ಲಿಟಿಗೇಷನ್‌ಗೆ ದಾರಿಯಾಗುವಂತಹ ಸಂದರ್ಭಗಳು ಬಹಳಷ್ಟು ಬರುತ್ತವೆ. ಇವುಗಳನ್ನು ಸ್ಥಳೀಯವಾಗಿ ಅಲ್ಲಿಯೇ ತಹಸೀಲ್‌ದಾರ್‌ರವರ ಆಫೀಸಿನಲ್ಲಿ ತೀರ್ಮಾನ ತೆಗೆದುಕೊಳ್ಳುವ ವ್ಯವಸ್ಥೆ ಮಾಡದೇ ಇದ್ದರೆ ತುಂಬಾ ತೊಂದರೆ ಆಗುತ್ತದೆ. ಇದನ್ನು ಬೇಗ ಒಂದು ಕಾನೂನಿನಲ್ಲಿ ಬದಲಾವಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆಂದು ನಾನು ಭಾವಿಸಿದ್ದೇನೆ. ಇನ್ನು ಬಹಳಷ್ಟು ಭೂ ಮಾಲೀಕರಿಗೆ ಹಣ ಕೊಡಬೇಕಾಗಿತ್ತು. ಬಾಕಿ ಇರುವಂತಹ ಹಣದ ಬಗ್ಗೆ ತೀರ್ಮಾನ ಮಾಡಬೇಕು ಎಂದು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಮುಖ್ಯವಾಗಿ ನಮ್ಮ ಎದುರುಗಡೆ ಬಂದಿರುವುದು ಅಂದರೆ ನಿಯಮ ೭೯ ಎ ಮತ್ತು ಬಿ ಯ ಉಲ್ಲಂಘನೆ ಪ್ರಕರಣ. ಈ ೭೯ ಎ ಮತ್ತು ಬಿ ಉಲ್ಲಂಘನೆ ಪ್ರಕರಣಗಳಲ್ಲಿ ಸಾಮಾನ್ಯವಾಗಿ

ಒಂದು ಕಾನೂನು ಕಟ್ಟಳೆ ಪ್ರಕಾರ ಹನ್ನೆರಡು ಸಾವಿರಕ್ಕಿಂತ ಹೆಚ್ಚು ಆದಾಯವನ್ನು ಅಂದರೆ ಕೃಷಿಯೇತರ ಆದಾಯವನ್ನು ಹೊಂದಿರತಕ್ಕ ರೈತರು ಯಾರು ಇರುತ್ತಾರೆ, ಅವರು ಖರೀದಿ ಮಾಡಬೇಕಾದಾಗ ಪರವಾನಗಿ ಪಡೆಯಬೇಕು ಎನ್ನುವುದಾಗಲೀ ಅಥವಾ ಖರೀದಿ ಪಡೆಯುವುದು ಕಾನೂನು ಬಾಹಿರ ಎನ್ನುವುದು ಏನು ಇದೆ, ಇದರಿಂದ ಸಾಮಾನ್ಯವಾಗಿ ಎಲ್ಲ ಕಡೆ ತೊಂದರೆಯಾಗಿದೆ. ೧—೩—೧೯೭೪ರಲ್ಲಿ ಕಾನೂನು ಮಾಡಬೇಕಾದಾಗ ಇದ್ದ ಹನ್ನೆರಡು ಸಾವಿರ ಬೆಲೆಗೂ ಇವತ್ತಿನ ೧೯೭೪ರ ಬೆಲೆಗೂ ಹೋಲಿಸಿ ನೋಡಿದರೆ ಎಷ್ಟು ವ್ಯತ್ಯಾಸ ಇರಬೇಕೆಂಬುದನ್ನು ನಾವು ಗಮನಿಸ ಬೇಕಾಗಿದೆ. ಈ ಹನ್ನೆರಡು ಸಾವಿರ ರೂಪಾಯಿ ಜಮೀನಿನ ಬೆಲೆ ಎಂದು ಹೇಳಿದೇ ಆದರೆ ಇವತ್ತು ಯಾರೂ ಆ ಜಮೀನನ್ನು ಖರೀದಿ ಮಾಡುವುದಕ್ಕೆ ಬರದೇ ಇರತಕ್ಕ ಪರಿಸ್ಥಿತಿ ನಿರ್ಮಾಣ ಆಗುತ್ತದೆ. ಆದುದರಿಂದ ಹನ್ನೆರಡು ಸಾವಿರ ರೂಪಾಯಿಗಳ ಜಮೀನು ಖರೀದಿ ಮಾಡುವುದರ ಸಲುವಾಗಿ ಏನು ನಿಷೇಧ ಮಾಡಿದ್ದೀರಿ, ಇದರ ಬಗ್ಗೆ ಸರ್ಕಾರ ಮರು ಪರಿಶೀಲನೆ ಮಾಡಿ ಕನಿಷ್ಟ ಪಕ್ಷ ನಲವತ್ತರಿಂದ ಐವತ್ತು ಸಾವಿರ ರೂಪಾಯಿವರೆಗೆ ಮಿತಿ ಇಡಬೇಕೆಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮುಖ್ಯವಾಗಿ ಬಡ ಗೇಣಿದಾರನಿಗೆ ಕಾನೂನು ನೆರವು ಪ್ರಶ್ನೆ ಬಗ್ಗೆ ಹೇಳಿದ್ದಾರೆ.

ಉಪಾಧ್ಯಕ್ಷರು.—ಮುಗಿಸಿ, ಸಮಯ ಆಯಿತು.

ಶ್ರೀ ಸಿ. ಎಂ. ಉದಾಸಿ.—ಕಾನೂನು ನೆರವು ಬಗ್ಗೆ ಹೇಳುವುದಾದರೆ ೧೯೭೮—೭೯ನೇ ಇಸವಿಯಲ್ಲಿ ಬಡ ಗೇಣಿದಾರರಿಗೆ ಕಾನೂನು ನೆರವಿನ ಅಡಿಯಲ್ಲಿ ಕೇವಲ ೫೧೭ ಜನರಿಗೆ ಕಾನೂನು ನೆರವು ದೊರಕಿದೆ ಎಂದು ತೋರಿಸಿದ್ದಾರೆ. ಈ ೫೧೭ ಜನರಿಗೆ ಕಾನೂನು ನೆರವು ಸಿಕ್ಕಿದೆ ಎಂದು ಹೇಳುವುದಾದರೆ ಬಹಳಷ್ಟು ಸಂಖ್ಯೆಯಲ್ಲಿ ಕಡಿಮೆ ಆಗುತ್ತದೆ. ಕಾನೂನು ನೆರವು ಬಗ್ಗೆ ಜನರಲ್ಲಿ ಸಂಶಯ ಮೂಡುತ್ತದೆ. ಉಚಿತವಾಗಿ ಕಾನೂನು ನೆರವಿನ ಸಂದರ್ಭ ಬಂದಾಗ ನಮ್ಮ ಪರವಾಗಿ ಹೋರಾಟವನ್ನು ಮಾಡುವವರು ಸರಿಯಾಗಿ ಹೋರಾಟ ಮಾಡುತ್ತಿದ್ದಾರೆಯೋ ಅಥವಾ ಇಲ್ಲವೇ ಎಂಬ ಸಂಶಯದ ವಾತಾವರಣ ಜನರಲ್ಲಿ ಮೂಡುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಇದಕ್ಕೆ ಭರವಸೆಯನ್ನು ಮೂಡಿಸುವುದರ ಸಲುವಾಗಿ ನ್ಯಾಯಾಲಯದಲ್ಲಿ ಸರಿಯಾಗಿ ಹೋರಾಟ ಮಾಡತಕ್ಕ ನ್ಯಾಯವಾದಿಗಳನ್ನು ಗುರುತಿಸಿ ಅಂಥವರಿಂದ ಕೆಲಸ ಕಾರ್ಯಗಳನ್ನು ಮಾಡಿಸಬೇಕು. ಇವೊತ್ತು ಸರ್ಕಾರದ ಹಿತಾಸಕ್ತಿಗಳಿಗೆ ವಿರುದ್ಧವಾಗಿ ತೀರ್ಮಾನವಾದಂತಹ ಭೂ ನ್ಯಾಯ ಮಂಡಲಿಯ ತೀರ್ಮಾನದ ಬಗ್ಗೆ ಅಂಕಿ ಸಂಖ್ಯೆಯನ್ನು ಕೊಟ್ಟಿದ್ದಾರೆ. ನನಗೆ ಗೊತ್ತಿರುವ ಹಾಗೆ ಎಷ್ಟೋ ಸಂದರ್ಭಗಳಲ್ಲಿ ಭೂ ನ್ಯಾಯ ಮಂಡಲಿಗಳು ಸರ್ಕಾರಿ ಕೆರೆಕಟ್ಟೆಗಳ ಸಹಿತ ಫಾರಂ ೭ರಲ್ಲಿ ಕೊಟ್ಟಿರುವ ಅರ್ಜಿಗಳಿಗೆ ತೀರ್ಮಾನ ಕೊಟ್ಟಿದ್ದಾರೆ. ಇದು ಕಾನೂನು ಬಾಹಿರ ...

ಉಪಾಧ್ಯಕ್ಷರು.—ಬೇಗೆ ಮುಗಿಸಿ.

ಶ್ರೀ ಸಿ. ಎಂ. ಉದಾಸಿ.—ಇಂತಹ ನಡೆದ ಪ್ರಕರಣಗಳು ಏನಾದರೂ ಸರ್ಕಾರದ ಗಮನಕ್ಕೆ ಬಂದಲ್ಲಿ ಅವುಗಳನ್ನು ಬೇಗ ಪುನರ್ ಪರಿಶೀಲನೆ ಮಾಡುವ ಸಲುವಾಗಿ ಅಪಿಲೇಟ್ ಮಾಡುವಂತಹ ಅಧಿಕಾರವನ್ನು ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇವೊತ್ತು ಅಪಿಲೇಟ್ ಟ್ರಿಬ್ಯೂನಲ್ಸ್ ಬಗ್ಗೆ ಹೇಳುವುದಾದರೆ ರಾಜ್ಯದಲ್ಲಿ ೩೨ ಪ್ರಾಧಿಕಾರಗಳು ಇವೆ. ಇದುವರೆಗೆ ಪ್ರಾಧಿಕಾರದಲ್ಲಿ ಒಂದು ವರ್ಷದಲ್ಲಿ ತೀರ್ಮಾನವಾದ ಕೇಸ್‌ಗಳು ಎಷ್ಟು ಅಂದರೆ ಅದು ೬ ಸಾವಿರ ಕೇಸ್‌ಗಳು. ಈ ಪ್ರಾಧಿಕಾರದಲ್ಲಿ ಒಂದು ವಾರದಲ್ಲಿ ೪ ಕೇಸ್‌ಗಳಿಗಿಂತ ಹೆಚ್ಚು ಕೇಸ್‌ಗಳನ್ನು ತೀರ್ಮಾನ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ಹೇಳುವುದಾದರೆ ಇದು ನಿಜವಾಗಿ ಶೋಚನೀಯ ಪರಿಸ್ಥಿತಿ ಎಂದು ಹೇಳುತ್ತೇನೆ. ಇದೇ ರೀತಿ ಆದರೆ ಇನ್ನು ೧೦ ವರ್ಷಗಳಾದರೂ ಭೂ ನ್ಯಾಯ ಮಂಡಲಿಯವರ ಕಾರ್ಯಕ್ರಮ ಮುಗಿಯಲಿಕ್ಕಿಲ್ಲ ಎಂದು ನನ್ನ ಭಾವನೆ. ದಯವಿಟ್ಟು ಕೂಡಲೇ ಪೆಂಡಿಂಗ್ ಕೇಸ್‌ಗಳನ್ನು ತೀರ್ಮಾನ ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕು ಮತ್ತು ಹೆಚ್ಚು ಹೆಚ್ಚು ಕೇಸ್‌ಗಳನ್ನು ತೀರ್ಮಾನ ಮಾಡುವುದರ ಸಲುವಾಗಿ ಕೂಡ ಕಡ್ಡಾಯ ದಿನಗಳನ್ನು ಗೊತ್ತುಪಡಿಸಬೇಕು ಎಂದು ಹೇಳುತ್ತೇನೆ. ಇವೊತ್ತು ಜಮೀನು ಮಂಜೂರಾತಿ ವಿಷಯ ಹೇಳುವುದಾದರೆ ೧—೪—೧೯೭೪ರ ವರೆಗೆ ಯಾರು ಅತಿಕ್ರಮಣ ಮಾಡಿದಂತಹ ಜಮೀನುಗಳನ್ನು ಮಂಜೂರಾಗಿ ಮಾಡಬೇಕೆಂದು ಅರ್ಜಿ ಕೊಟ್ಟಿರುತ್ತಾರೆ, ಅವುಗಳನ್ನು ಆದಷ್ಟು ಬೇಗನೆ ಮಾಡಿಕೊಡಬೇಕು ಎಂದು ಹೇಳಿ ಇನ್ನು ಕೇವಲ ಕೆಲವೇ ವಿಷಯಗಳನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು.—ಬಹಳಷ್ಟು ಸಮಯ ಆಯಿತು, ಮುಗಿಸಿ.

ಶ್ರೀ ಸಿ. ಎಂ ಉದಾಸಿ.—ಜಮೀನು ಭೂ ಸ್ವಾಧೀನ ಪ್ರಶ್ನೆ ಬಂದಾಗ ರಾಜ್ಯಾದ್ಯಂತ ಯಾವುದೇ ಒಂದು ಭೂ ಸ್ವಾಧೀನವನ್ನು ಮಾಡಿಕೊಡಬೇಕು ಎಂದು ಹೊರಟರೆ ಕನಿಷ್ಟ ಪಕ್ಷ ೧೦ ವರ್ಷ ೧೫ ವರ್ಷ ವಾದರೂ ಸಹ ಈ ಭೂ ಸ್ವಾಧೀನ ಕೆಲಸ ಮುಗಿಯುವುದಿಲ್ಲ. ಇದಕ್ಕೆ ಏನಾದರೂ ಒಂದು ಹೊಸ ತಿದ್ದುಪಡಿ ತರದೇ ಇದ್ದರೆ ನಮ್ಮ ಐದು ವರ್ಷದ ಶಾಸಕರ ಅವಧಿಯಲ್ಲಿ ನಾವು ಯಾರಿಗೆ ನಿವೇಶನ ಕೊಡಬೇಕು ಎಂದು ಇಷ್ಟಪಟ್ಟರಂತ್ತೇವೆ, ಅದನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ನನ್ನ ಭಾವನೆ. ಯಾಕೆಂದರೆ ಹಾನಗಲ್ ತಾಲ್ಲೂಕಿನ ಚಿಕ್ಕ ಹುಲ್ಲಳ ಎಂಬ ಗ್ರಾಮದಲ್ಲಿ ೧೯೭೩ರಲ್ಲಿ ಭೂ ಸ್ವಾಧೀನ ಆದ ಬಹಳಷ್ಟು ಜಮೀನುಗಳು ಇದುವರೆಗೆ ಸಹಿತ ವಿತರಣೆ ಮಾಡಿರುವುದಿಲ್ಲ. ಭೂ ಸ್ವಾಧೀನ ಆಗುವಾಗ ಈ ರೀತಿಯ ತೊಂದರೆಗಳನ್ನು ತಪ್ಪಿಸುವ ಸಲುವಾಗಿ ಒಂದು ಕಾನೂನನ್ನು ತರುತ್ತೀರೆಂದು ಆಶಿಸಿ ಮತ್ತೆ ಒಂದೆರಡು ವಿಷಯಗಳನ್ನು......

ಉಪಾಧ್ಯಕ್ಷರು.—ಸಾಕಷ್ಟು ಸಮಯ ಆಯಿತು ಮುಗಿಸಿ......

ಶ್ರೀ ಸಿ. ಎಂ. ಉದಾಸಿ.—ಭೂ ಮಾಪನ ಮತ್ತು ಕಂದಾಯ ಇಲಾಖೆ ಬಗ್ಗೆ ಒಂದೆರಡು ವಿಷಯಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಇವತ್ತು ರಾಜ್ಯದಾದ್ಯಂತ ಭೂಸುಧಾರಣಾ ಕಾನೂನು ಪ್ರಕಾರ ೧೦ ವರ್ಷಗಳಿಂದ ಒಟ್ಟು ತೀರ್ಮಾನವಾಗದಂತಹ ಕೇಸುಗಳ ಸಂಖ್ಯೆ ೭೬,೩೨೬. ಆದರೆ ಒಂದು ಮಾತ್ರ ನಮ್ಮೆಲ್ಲರಿಗೂ ನೆನಪು ಬರುತ್ತಾ ಇದೆ ಚುನಾವಣೆಯಲ್ಲಿ ಗೆದ್ದವ ಸೋತ, ಸೋತವ ಸತ್ತ, ಭೂ ಮಾಲೀಕರು ತಮಗೆ ವಹಿಸಿದ ಭೂಮಿಯ ಸರ್ವೆ ಮಾಡಿಸಿಕೊಡಿಯೆಂದು ಹೊಸ ಖಾತೆ ಮಾಡಿಕೊಡಿಯೆಂದು ಅರ್ಜಿಯನ್ನು ಕೊಟ್ಟರೆ, ಖಾತೆ ಮತ್ತು ಸರ್ವೆ ಕೆಲಸ ಬೇಗ ಆಗುವುದಿಲ್ಲ. ಭೂ ಮಾಪನ ಇಲಾಖೆಗೆ ಸರ್ವೆ ಸಲುವಾಗಿ ಅರ್ಜಿಯನ್ನು ಕೊಟ್ಟರೆ ಅದು ಕನಿಷ್ಟ ೫ ವರ್ಷ ಅಥವಾ ೧೦ ವರ್ಷವಾದರೂ ಕೆಲಸ ಆಗದೇ ಇರುವಂತಹ ಪರಿಸ್ಥಿತಿಯನ್ನು ನಾವು ನೋಡಿದ್ದೇವೆ.

ಅಸಿಸ್ಟೆಂಟ್ ಚಾರಿಟಿ ಕಮಿಷನರ್ ಆಫೀಸ್‌ನಲ್ಲಿ ಪಿ.ಟಿ.ಆರ್. ಎಕ್ಸ್‌ಟ್ರಾಕ್ಟ್‌ಗಳನ್ನು ಬೇಗ ಕೊಡುವುದಿಲ್ಲ. ಅದು ಬೇಗ ದೊರೆಯುವಂತಹ ವ್ಯವಸ್ಥೆಯಾಗಬೇಕು. ವಾರ್ಷಿಕ ವರದಿಯ ಪುಟ೮-ರಲ್ಲಿ "ಪಿ.ಟಿ. ಶೀಟುಗಳಲ್ಲಿ ಸ್ವತ್ತುಗಳನ್ನು ಗುರುತಿಸುವುದು" ಎಂದು ಹೇಳಿದ್ದೀರಿ, ಅದರಲ್ಲಿ ೧,೬೧,೬೫೧ ಬಾಕಿ ಇದ್ದರೆ ಗುರುತಿಸಿದ್ದು ೨,೮೨೮. ಅಂದರೆ ಒಂದು ವರ್ಷದಲ್ಲಿ ೧,೬೧,೬೫೧ರಲ್ಲಿ ಕೇವಲ ೨,೮೨೮ ಮಾತ್ರ ಗುರುತಿಸಲಾಗಿದೆ. ಇದು ವಿಷಾದದ ಸಂಗತಿ ಅಲ್ಲಿ ಬೇಗ ಕೆಲಸಕಾರ್ಯಗಳು ಆಗುವುದಕ್ಕೆ ಸಾಕಷ್ಟು ಅಧಿಕಾರಿಗಳನ್ನು ಕೊಡಬೇಕೆಂದು ಹೇಳುತ್ತೇನೆ. ಇನ್ನು ಸ್ಟಾಂಪ್ ಡ್ಯೂಟಿ ಬಗ್ಗೆ ಮಾತನಾಡಬೇಕಾಗಿತ್ತು, ಸಮಯದ ಅಭಾವ ಇರುವುದರಿಂದ ನಾನು ಅದರ ಬಗ್ಗೆ ಮಾತನಾಡದೆ, ಇಷ್ಟರವರೆಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಹೆಚ್. ಶ್ರೀನಿವಾಸ್ (ಶಿವಮೊಗ್ಗ).—ಸನ್ಮಾನ್ಯ ಉಪಾಧ್ಯಕ್ಷರೇ, ಈ ಸದನದ ಮುಂದೆ ಬಹಳ ಪ್ರಾಮುಖ್ಯವಾದಂತಹ ಬೇಡಿಕೆಗಳು ಚರ್ಚೆಗೆ ಇವೆ. ನಾವು ಈ ಬಾರಿ ಮಾನ್ಯ ಅಧ್ಯಕ್ಷರು ಹೇಳಿದರು, ಸರ್ಕಾರದ ಪರವಾಗಿ ಹೇಳಿದರುಈ ಸಾರಿ ಎಲ್ಲಾ ಬೇಡಿಕೆಗಳನ್ನು ಬಹಳ ವಿವರವಾಗಿ ನಾವು ಚರ್ಚೆ ಮಾಡಬಹುದು, ಅವುಗಳ ಸಮೀಕ್ಷೆ ಮಾಡಬಹುದು, ಅವುಗಳ ಕಾರ್ಯವೈಖರಿಯ ಬಗ್ಗೆ ಕ್ಷಕಿರಣ ಬಿಟ್ಟು ಅವುಗಳು ಇನ್ನಷ್ಟು ದಕ್ಷವಾಗುವುದಕ್ಕೆ ಪ್ರಯತ್ನಿಸಬಹುದು ಎನ್ನುವ ಮಾತುಗಳು ಬಂದವು. ನಾವು ಎರಡು ಅಥವಾ ಮೂರು ತಿಂಗಳುಗಳವರೆಗೆ ಈ ಬೇಡಿಕೆಗಳನ್ನು ಚರ್ಚೆ ಮಾಡಬಹುದೆಂದು ಭ್ರಮಿಸಿದ್ದೆವು. ಆದರೆ ಆ ಕಡೆ ಆದಂತಹ ಕೆಲವು ಸ್ಥಿತ್ಯಂತರ ಕಾರಣಗಳಿಂದ......

ಶ್ರೀ ಎ. ಲಕ್ಷ್ಮೀಸಾಗರ್.—ಏನೂ ಆಗಿಲ್ಲ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನಿಮಗೆ ಏನೂ ಆಗುವುದೇ ಇಲ್ಲ. "ಗೋರ್ಕಲ್ಲ ಮೇಲೆ ಮಳೆ ಗರೆದರೆ ಆ ಕಲ್ಲು ನೀರ ಕುಡಿಯುವುದೆ?" ಹೇಳುವುದಾದರೆ ಇನ್ನು ಬೇರೆ ಬೇರೆ ಇದೆ ಈಗ ಅದೆಲ್ಲಾ ಬೇಕಾಗಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಶ್ರೀನಿವಾಸ್‌ರವರು ಕಾಲ್ಪನಿಕ ಜಗತ್ತಿನಲ್ಲಿದ್ದಾರೆ. ಅದಕ್ಕೆ ನಾನೇನು ಮಾಡಲಿ ?

ಶ್ರೀ ಕೆ. ಹೆಚ್. ಶ್ರೀನಿವಾಸ್.—ಒಂದಕ್ಕೊಂದು ಸಂಬಂಧವಿಲ್ಲದೇ ಇರತಕ್ಕ ಖಾತೆಗಳನ್ನು ಇರಿಗೇಷನ್, ರೆವಿನ್ಯೂ ಈ ತರಹ ಎಲ್ಲಾ ಒಟ್ಟೊಟ್ಟಿಗೆ ಸೇರಿಸಿ ಮಾತನಾಡಿ ಅಂದರೆ ಏನು ಮಾತನಾಡುವುದು ?

ಶ್ರೀ ಎ. ಲಕ್ಷ್ಮೀಸಾಗರ್,—ಬದಲಾವಣೆಯ ಬಗ್ಗೆ ನಾನು ಹೇಳಲಿಲ್ಲ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಬೊಮ್ಮಾಯಿಯವರಿಗೆ ಇರಿಗೇಷನ್ ಖಾತೆ ಪ್ರುಗಸಟ್ಟೆ ಬಂತೇ ? ಬದಲಾವಣೆಯಾದದ್ದರಿಂದ ಬಂತೇ ? ಹೇಗೆ ಬಂತು ?

ಶ್ರೀ ಎ. ಲಕ್ಷ್ಮೀಸಾಗರ್.—ಕೇಂದ್ರಸರ್ಕಾರದಲ್ಲಿ ಎರಡು ತಿಂಗಳಿಗೊಂದಾವರ್ತಿ ಖಾತೆಗಳು ಬದಲಾವಣೆಗಳಾಗುತ್ತವೆ. ಆಗದೇ ಇರುವ ಮಾತುಗಳನ್ನು ಇಲ್ಲಿ ಆಡಿ ಏನೂ ಪ್ರಯೋಜನವಿಲ್ಲ.

ಶ್ರೀ ಬಿ. ಸ್ವಾಮಿರಾವ್.—ಮತ್ತೆ ಅದೇ ಇವರಿಗೆ, ಕೇಂದ್ರಸರ್ಕಾರದ ವಿಷಯವನ್ನು ಇಲ್ಲಿ ಏತಕ್ಕೆ ಹೇಳಬೇಕು ?

ಶ್ರೀ ಕೆ. ಹೆಚ್. ಶ್ರೀನಿವಾಸ್.—''ಕಂಡದ್ದನ್ನು ಕಂಡಹಾಗೆ ಹೇಳಿದರೆ ಕೆಂಡದಂತಹ ಕೋಪ'' ಸ್ಟೇಟ್‌ಮೆಂಟ್ ಆಫ್ ಫ್ಯಾಕ್ಟ್ಸ್ ಹೇಳುತ್ತಿದ್ದೇನೆ.

ಶ್ರೀ ಲಕ್ಷ್ಮೀಸಾಗರ್.—ನಾನು ಅದೇ ವಿಚಾರವನ್ನು ಹೇಳಿದ್ದೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಇವರು ಏತಕ್ಕೆ ಇಷ್ಟು ಸಿಟ್ಟಿನಿಂದ ಸೀಟಿನಲ್ಲಿ ಕುಣಿಯ ಬೇಕೋ ನನಗೆ ಗೊತ್ತಾಗಲಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಹೇಳಿದ್ದು ಫ್ಯಾಕ್ಟ್ಸ್, ಫ್ಯಾಕ್ಟ್ಸ್, ಫ್ಯಾಕ್ಟ್ಸ್.

ಉಪಾಧ್ಯಕ್ಷರು.—ಮಾನ್ಯ ಶ್ರೀನಿವಾಸ್‌ರವರು ತಮ್ಮ ಭಾಷಣ ಮುಂದುವರಿಸಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಈ ಸಾರಿ ಇಲಾಖೆಗಳ ಬಗ್ಗೆ ಬೇಡಿಕೆಗಳ ಸ್ವರೂಪವನ್ನು ನಿರೀಕ್ಷಿಸಿ. ಸ್ವರೂಪದ ಪೂರ್ಣ ವ್ಯತ್ಯಾಸ ಗೊತ್ತಿಲ್ಲದೆ ಇರುವ ಸಂದರ್ಭದಲ್ಲಿ ಸಂಪೂರ್ಣ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲವೆನ್ನುವ ಮಾತನ್ನು ಹೇಳುತ್ತಿದ್ದೇನೆ. ಇರಿಗೇಷನ್‌ಗೆ ಪ್ರತ್ಯೇಕ ಮಂತ್ರಿಗಳು ಇದ್ದರೆ ನಾವು ಇದನ್ನು ಚರ್ಚೆ ಮಾಡಬಹುದಾಗಿತ್ತು ಎಂದು ಹೇಳುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಒಂದು ನಿವೇದನೆ. ಸ್ವಾಮಿ ಮಂತ್ರಿಗಳ ಖಾತೆಗಳಿಗೆ ಸಂಬಂಧಪಟ್ಟಂತಹ ಬೇಡಿಕೆಗಳ ಮೇಲಿನ ಚರ್ಚೆಗೆ ಇಷ್ಟು ದಿನ ಎಂದು ನಿಗದಿ ಮಾಡಿದ್ದೇವೆ. ಆ ದಿನಗಳಿಗೆ ಕಡಿಮೆ ಇಲ್ಲದೆ ಈ ಸಭೆಯಲ್ಲಿ ಚರ್ಚೆಯಾಗುವುದಕ್ಕೆ ಅವಕಾಶವಿದೆ. ಅದನ್ನು ಹೊರತುಪಡಿಸಿಲ್ಲ. ಅದನ್ನು ಯಾವ ರೀತಿ ಉಪಯೋಗ ಮಾಡಿಕೊಳ್ಳಬೇಕು ಎನ್ನುವುದನ್ನು ಸನ್ಮಾನ್ಯ ಸದಸ್ಯರಿಗೆ ಸೇರಿದ್ದು, ಸನ್ಮಾನ್ಯ ಶ್ರೀನಿವಾಸ್‌ರವರು ದಯವಿಟ್ಟು ನೆನಪಿನಲ್ಲಿಟ್ಟುಕೊಂಡಿರುತ್ತಾರೆ ಎಂದು ನಾನು ಭಾವಿಸಿದ್ದೇನೆ. ಮೊದಲನೆ ದಿನ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ...

ಶ್ರೀ ಕೆ. ಹೆಚ್. ಶ್ರೀನಿವಾಸ್.—ಭಾಷಣವನ್ನು ಅವರೇ ಮಾಡಿಬಿಡಲಿ ಬಿಡಿ. ನಾವು ಏಕೆ ಮಾತನಾಡುವುದು?

ಶ್ರೀ ಎ. ಲಕ್ಷ್ಮೀಸಾಗರ್.—ನೀವು ಹೇಳಿದ್ದಕ್ಕೆ ಉತ್ತರ, ವಿಷಯಾಂತರ ಆಗಬಾರದು ಎಂದು.

ಶ್ರೀ ಕೆ. ಹೆಚ್. ಶ್ರೀನಿವಾಸ್.—ವಿಷಯಾಂತರ ಆದರೆ ತಾವು ಇದ್ದೀರಿ ಬೇಕಾದರೆ ಹೇಳಿ. ಕೆಲವು ವಿಷಯಗಳನ್ನು ಹೇಳಬೇಕಾಗುತ್ತದೆ ನಿಮ್ಮ ಅಂತರ್ಯಕ್ಕೆ ತೊಂದರೆ ಬರುತ್ತದೆ ಎಂದು ಹೇಳಿದೆ ಅಷ್ಟೇ ಹೊರತು ಇದರಲ್ಲಿ ವಿಷಯಾಂತರ ಏನೂ ಇಲ್ಲ. ವಿಷಯಾಂತರ ಏನಿದೆ? ಅದಕ್ಕೆ ತೊಂದರೆ ಬಂದರೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ನಾವು ಹೇಳುತ್ತಾ ಇರುವುದು ಏನೆಂದರೆ, ಯಾವ ಯಾವ ಬೇಡಿಕೆ ಎಲ್ಲೆಲ್ಲಿ ಜೋಡಿಯಾಗಿದೆ ಎಂದು ಅರ್ಥವಾಗದ ಸ್ಥಿತಿಯಲ್ಲಿ ನಾವಿದ್ದೇವೆ. ನಾವು ಬೇಡಿಕೆಗಳ ಬಗ್ಗೆ ಯಾವ ರೀತಿಯಲ್ಲಿ ಚರ್ಚೆ ಮಾಡಬೇಕು ಎಂದು ಅಭಿಪ್ರಾಯ ಇಟ್ಟುಕೊಂಡಿದ್ದೇವೊ ಆ ಸ್ವರೂಪ ಮೆಲ್ಲಾ ಕಲಗೆಟ್ಟು ಹೋಗಿ ಈಗ ಯಾವು ಯಾವುದೋ ಬೇಡಿಕೆಯೆಲ್ಲಾ ಒಟ್ಟಿಗೆ ಸೇರಿಸಿ ಮಾತನಾಡಿ ಅಂದರೆ ಅದಕ್ಕೆ ನಿಜವಾದ ಒಂದು ಸ್ವರೂಪ ಬರುವುದಿಲ್ಲ. ಸುಮ್ಮನೆ ನೀವು ಹೇಳಿಬಿಡಬಹುದು ಎಲ್ಲಾ ಚರ್ಚೆ ಮಾಡಿ ಬೇಕಾದಷ್ಟು ಟೈಂ ಇದೆ ಎಂದು ಹೇಳಿಬಿಟ್ಟರೆ ಆಯಿತೇ. ಒಂದು ಇಲಾಖೆ ಬಗ್ಗೆ ಕೇಂದ್ರೀಕೃತವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಇದ್ದರೆ ಮಾತ್ರ ಅದಕ್ಕೆ ಒಂದು ರೂಪ ಬರುತ್ತದೆ,

ಶಕ್ತಿ ಬರುತ್ತದೆ, ಒಂದು ಅರ್ಥ ಬರುತ್ತದೆ. ಸುಮ್ಮ ಸುಮ್ಮನೆ ಎಲ್ಲಾ ಸೇರಿಸಿ ಎಲ್ಲದರ ಮೇಲೂ ಮಾತನಾಡು ಅಂದರೆ, ಸೂರ್ಯನ ಕೆಳಗೆ ಎಲ್ಲಾ ಜಗತ್ತು ಇರುವುದು. ಎಲ್ಲಾ ಡಿಪಾರ್ಟ್‌ಮೆಂಟ್ ಅವನ ಕೆಳಗೆ ಇರುವುದು ಮಾತನಾಡು ಅಂದರೆ ಏನು ಮಾತನಾಡುವುದಕ್ಕೆ ಸಾಧ್ಯವಿದೆ. ಆ ವಿಷಯ ಪ್ರಸ್ತಾಪ ಮಾಡಿದರೆ ಇವರಿಗೆ ಏಕೆ ತಲೆ ಕೆಡಬೇಕು ಎಂದು ನನಗೆ ಅರ್ಥವಾಗುತ್ತಾ ಇಲ್ಲ, ಇವತ್ತು ಅಂತಹ ಒಂದು ಸ್ವರೂಪ ಇದೆ. ಈಗಂತೂ ಇಲ್ಲಿ ಯಾರೂ ಇಲ್ಲ. ಮುಂದುಗಡೆಯಂತೂ ಯಾರೂ ಕ್ಯಾಬಿನೆಟ್ ಮಂತ್ರಿಗಳಿಲ್ಲ. ಅವರು ಏನು ಹೇಳುವುದು, ನಾನು ಬರೆದುಕೊಳ್ಳುತ್ತೇನೆ ಎಂದು. ನಮಗೆ ಗೊತ್ತು ಇವರು ಸರ್ಕಾರಿ ಚಿತ್ರಗುಪ್ತರು. ಇವರು ಬರೆದುಕೊಳ್ಳುತ್ತಾರೆ ಎಂದು. ಇವರು ಬರೆದುಕೊಳ್ಳುತ್ತಾರೆ ಎನ್ನುವ ಸಂಕಟಕ್ಕೆ ನಾವು ಮಾತನಾಡಬೇಕು ಅಷ್ಟೇ, ನಮಗೆ ಏನೂ ಇಲ್ಲ. ಇನ್ನು ಯಾರೂ ಅದನ್ನು ಕೇಳುವವರಿಲ್ಲ. ನಾವು ಈ ಚರ್ಚೆ ಏಕೆ ಮಾಡಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಆ ವಿಚಿತ್ರ ಗುಪ್ತರು ಹೇಳಿದ್ದನ್ನು ಈ ಚಿತ್ರಗುಪ್ತರು ಬರೆದು ಕೊಳ್ಳುತ್ತಾರೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನೀವು ನಿಮ್ಮ ಚಿತ್ರಗುಪ್ತರು ಬರೆದುಕೊಂಡು ನಿಮ್ಮ ಯಮ ಧರ್ಮರಾಯನಿಗೆ ಹೋಗಿ ಹೇಳಿಕೊಳ್ಳಿ. ಆದರೆ ನಮಗೆ ಏನು ಬೇಕು ಅಂದರೆ ಇದೆಲ್ಲಾ ಸತ್ತಮೇಲೆ ನಿಮ್ಮದು ಲಾಭವಾಗುವುದು.

ಶ್ರೀ ಎ. ಲಕ್ಷ್ಮೀಸಾಗರ್.—ಧರ್ಮಕ್ಕೆ ಸ್ಥಿತಿ ಇರಬೇಕಾದರೆ, ಅದನ್ನು ಕಾಪಾಡಬೇಕಾದರೆ ಯಮಧರ್ಮ ಇರಲೇಬೇಕು. ಅವರಿಗೂ ಇರುತ್ತಾನೆ, ನಮಗೂ ಇರುತ್ತಾನೆ.

ಉಪಾಧ್ಯಕ್ಷರು.—ದಯವಿಟ್ಟು ವಿಷಯಕ್ಕೆ ಬನ್ನಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಏನೂ ಹೇಳಿದರೂ ಬರೆದುಕೊಳ್ಳುತ್ತೇನೆ ಎಂದು ಹೇಳುತ್ತಾರೆ, ನೀವು ಬರೆದುಕೊಂಡರೆ ಏನು ಬಂತು? ನಾವು ಇಲ್ಲಿ ಮಾತನಾಡುವುದು, ಅದಕ್ಕೆ ಸಂಬಂಧಪಟ್ಟವರು ಇದ್ದರೆ...

ಉಪಾಧ್ಯಕ್ಷರು.—ಸಂಬಂಧಪಟ್ಟ ಮಂತ್ರಿಗಳು ಬರುತ್ತಾರೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ನಾನು ಹೇಳುವುದು ಏನೆಂದರೆ, ಮಾನ್ಯ ಬೊಮ್ಮಾಯಿಯವರು ಇದ್ದರೂ ಕೂಡ ಏನೋ ವ್ಯತ್ಯಾಸ ಆಗಿಬಿಡುತ್ತದೆ ಎಂದು ಅಲ್ಲ. ಏಕೆಂದರೆ ಅವರು ಈಗ ತಾತ್ಕಾಲಿಕವಾಗಿ ಈ ಇಲಾಖೆಯನ್ನು ಹಿಡಿದುಕೊಂಡಿದ್ದಾರೆ. ಬಡ್ಜೆಟ್ ಸೆಷನ್ ಆದ ಮೇಲೆ ಈ ಇಲಾಖೆ ಯಾರಿಗೆ ಹೋಗುತ್ತದೋ ದೇವರಿಗೇ ಗೊತ್ತು. ದೇವೇಗೌಡರಿಗೆ ಮರಳಿ ಬರುತ್ತದೋ, ಚಂದ್ರೇಗೌಡರಿಗೆ ಬರುತ್ತದೋ ಯಾವ ಗೌಡರಿಗೆ ಬರುತ್ತದೋ ಗೊತ್ತಿಲ್ಲ. ಈಗ ಪ್ರಶ್ನೆ ಏನೆಂದರೆ, ಯಾರಿಗೆ ಹೇಳಬೇಕು ಎನ್ನುವುದು.

ಉಪಾಧ್ಯಕ್ಷರು.—ವಿಷಯಕ್ಕೆ ಬನ್ನಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಇದೇ ಮುಖ್ಯವಾದ ವಿಷಯ. ಬೇರೆ ವಿಷಯ ಮಾತನಾಡಿ ಏನು ಪ್ರಯೋಜನ. ಮಂತ್ರಿಗಳು ಇಲ್ಲದೇ ಹೋದರೆ, ಸರ್ಕಾರವೇ ಇಲ್ಲದೇ ಹೋದರೆ. ನಾವು ಬೇರೆ ವಿಷಯ ಎಷ್ಟು ಮಾತನಾಡಿದರೂ ಏನೂ ತಾತ್ಪರ್ಯ ಇಲ್ಲ. ಆದುದರಿಂದ ಅದನ್ನು ಹೇಳಲೇ ಬೇಕಾಗುತ್ತದೆ. ನಾವು ನಂಬಿಕೊಂಡಿದ್ದೆವು...

(ಶ್ರೀ ಡಿ. ಟಿ. ಜಯಕುಮಾರ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಎ. ಲಕ್ಷ್ಮೀಸಾಗರ್.—ಹಿಂದೆ ಮೊನ್ನೆ ಒಂದು ದಿನ ಸರ್ಕಾರ ಸತ್ತು ಹೋಯಿತು ಎಂದರೆ ಹೇಳಿದರು. ಸರ್ಕಾರ ಸತ್ತಿದ್ದರೆ ಈ ಸಭೆಯಲ್ಲಿ ಅವರು ಹೀಗೆ ಇರುತ್ತಾ ಇರಲಿಲ್ಲ, ಅದನ್ನು ಮರೆತು ಬಿಟ್ಟರು ಅವರು.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಎಲ್ಲರಿಗೂ ಒಂದು ದಿನ ಮುಗಿಯುತ್ತದೆ. ಅಲ್ಲಿಯವರೆಗೆ ಏನೂ ಯೋಚನೆ ಇಟ್ಟುಕೊಳ್ಳಬೇಡಿ ನೀವು.

ಶ್ರೀ ಎಸ್. ಜಿ. ನಂಜಯ್ಯನಮಠ್.—ಇನ್ನೂ ಹೂತಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಅದಕ್ಕೆ ಒಟ್ಟಿಗೆ ಸೇರೋಣ, ಅದನ್ನು ಒಟ್ಟಿಗೆ ಮಾಡೋಣ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಸಭಾಧ್ಯಕ್ಷರೆ, ನಾನು ಏಕೆ ಹೇಳುತ್ತಿದ್ದೇನೆ ಎಂದರೆ, ಸರ್ಕಾರದ ಪರವಾಗಿ ಸುಮ್ಮನೆ ಯಾವುದೋ ಒಂದು ಪೋಸ್ಟ್‌ನಿಂದ ಉತ್ತರ ಕೊಟ್ಟು ಬಿಟ್ಟರೆ ಆಗುವುದಿಲ್ಲ. ಅದರ ಬಗ್ಗೆ ಯಾರು ಜವಾಬ್ದಾರಿ ತೆಗೆದುಕೊಳ್ಳುತ್ತಾರೆ? ಏಕೆಂದರೆ ಅದರ ಬಗ್ಗೆ ನಮಗೆ ವಿಶ್ವಾಸ ಮೂಡಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಅವರು ನನಗೆ ಹೇಳಿ ಹೋಗಿದ್ದಾರೆ. ಇಲ್ಲಿಯವರೆಗೂ ಇಲ್ಲೇ ಇದ್ದರು, ನನಗೆ ಹೇಳಿ ಊಟಕ್ಕೆ ಹೋಗಿದ್ದಾರೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನಾನು ಹೇಳಿದೆನಲ್ಲಾ, ಬರೀ ಮಾನ್ಯ ಬೊಮ್ಮಾಯಿಯವರು ತಾತ್ಕಾಲಕ್ಕೆ ಊಟಕ್ಕೆ ಹೋಗಿದ್ದಾರೆ ಎನ್ನುವುದರ ಬಗ್ಗೆ ಅಲ್ಲ. ನಾನು ಕಂಪ್ಲೈಂಟ್ ಮಾಡುತ್ತಾ ಇರುವುದು. ಹಲವಾರು ಮುಖ್ಯ ಇಲಾಖೆಗಳು ಇವತ್ತು ಹಂಗಾಮಿಯಾಗಿ ಮಂತ್ರಿಗಳ ಕೈಯಲ್ಲಿದೆ. ಅವರು ಎಷ್ಟರ ಮಟ್ಟಿಗೆ ಜವಾಬ್ದಾರಿ ತೆಗೆದುಕೊಳ್ಳಬಹುದು, ಅವರು ಕೊಡುವ ಉತ್ತರವನ್ನು ನಾವು ಎಷ್ಟರ ಮಟ್ಟಿಗೆ ನಂಬಿಕೊಳ್ಳಬಹುದು ಎನ್ನುವುದಕ್ಕೆ ಹೇಳುತ್ತಾ ಇದ್ದೇನೆ. ನಾವು ಅಂದುಕೊಂಡಿದ್ದೆವು, ಸನ್ಮಾನ್ಯ ದೇವೇಗೌಡರಂಥವರ ಕೈಯಲ್ಲಿ ನೀರಾವರಿ ಮತ್ತು ರಾಜ್ಯದ ಹಿತಾಸಕ್ತಿ ಸುರಕ್ಷಿತವಾಗಿರುತ್ತದೆ. ಯಾವ ಸರ್ಕಾರವು ಅಧಿಕಾರದಲ್ಲಿರಲಿ ಅವರು ಮಾಡುತ್ತಾರೆ ಎಂದು ನಂಬಿಕೊಂಡಿದ್ದೆವು. ಅವರೂ ಕೂಡ ಕಾಲ ಕಾಲಕ್ಕೆ ಅನೇಕ ಪರಾಕ್ರಮಗಳನ್ನು ಪ್ರಸ್ತಾಪ ಮಾಡಿದರು, ಹಾಗೆ ಮಾಡುತ್ತೇವೆ, ಹೀಗೆ ಮಾಡುತ್ತೇವೆ, ಈ ವರ್ಷ ೩೦೦ ಕೋಟಿ ಖರ್ಚು ಮಾಡುತ್ತೇವೆ ಎಂದು ಹೇಳಿದರು. ಆದರೆ ಅವರ ಪರಾಕ್ರಮಗಳೆಲ್ಲಾ ಈ ರೀತಿ ವಿಫಲವಾಗಿ, ಇವತ್ತು ಅವರು ಅದನ್ನೆಲ್ಲಾ ಕೈಬಿಟ್ಟರು, ಇವತ್ತು ಕೈಬಿಟ್ಟು, ಸ್ವಲ್ಪಹೊತ್ತಿನಲ್ಲಿ ಹಿಂದುಗಡೆ ಕೂತಿದ್ದರು. ಈಗ ಅವರು ಇಲ್ಲ, ಯಾರಿಗೆ ಹೇಳುವುದು?

ವೈಸ್-ಛೇರ್‌ಮನ್.—ವಿಷಯಕ್ಕೆ ಬನ್ನಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಇದೇ ವಿಷಯ ನೀರಾವರಿಯ ಬಗ್ಗೆ ಯಾರಿಗೆ ಹೇಳಬೇಕು? ನೀರು ಹರಿದುಕೊಂಡು ಸಮುದ್ರಕ್ಕೆ ಹೋಗುತ್ತಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ನಿಮಗೆ ಗೊತ್ತಿಲ್ಲವೆಂದರೆ ಪ್ರಪಂಚದಲ್ಲಿ ಇನ್ನು ಯಾರಿಗೆ ಗೊತ್ತಿರುತ್ತದೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಈ ಇಲಾಖೆ ಅವರದೇ ಎನ್ನುವುದು ನನಗೆ ಗೊತ್ತಿಲ್ಲ. ಯಾವುದಾದರೂ ಪ್ರಶ್ನೆಗೆ ಉತ್ತರ ಹೇಳಿದ್ದರೆ, ಗೊತ್ತಾಗುತ್ತಿತ್ತು. ನೀವು ಹೇಳಿದರೆ ನಮಗೆ ಗೊತ್ತಾಗುವುದು ಹೇಗೆ?

ವೈಸ್-ಛೇರ್‌ಮನ್.—ಮಧ್ಯೆ ಮಧ್ಯೆ ಚರ್ಚೆ ಬೇಡ. ವಿಷಯಕ್ಕೆ ಬನ್ನಿ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ನಾವು ವಿಷಯಕ್ಕೆ ಬರುವುದಕ್ಕೆ ಬಿಡುತ್ತಿಲ್ಲ. ಮೊದಲು ಅವರು ಮಂತ್ರಿಗಳಿದ್ದಾರೆಂದು ಹೇಳಲಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಇವರು ಪ್ರಬುದ್ಧವಾಗಿರತಕ್ಕ ಮನುಷ್ಯರು. ಮಾನ್ಯ ಸದಸ್ಯರಿಗೆ ಮಂತ್ರಿಗಳು ಗೊತ್ತಿಲ್ಲವೆಂದರೆ ಏನು ಹೇಳುವುದು ನನಗೆ ಇದು ಅರ್ಥವಾಗುವುದಿಲ್ಲ. ಈ ರೀತಿ ವಿತಂಡ ವಾದಕ್ಕೆ ಹೋಗಬೇಡಿ.

ಶ್ರೀ ಯು. ಭೂಪತಿ.—ಸಂಬಂಧಪಟ್ಟ ಇನ್ನೊಬ್ಬ ಮಂತ್ರಿಗಳು ನೀರಾವರಿ ಇಲಾಖೆಗೆ ಇದ್ದರೂ ಅವರಿಗೆ ಬರೆದುಕೊಳ್ಳುವುದಕ್ಕೆ ತಿಳಿಸದೆ, ಬೇರೆ ಒಬ್ಬ ಮಂತ್ರಿಗಳಿಗೆ ಬರೆದುಕೊಳ್ಳುವುದಕ್ಕೆ ತಿಳಿಸಿದರೆ ನಾವು ಹೇಗೆ ತಿಳಿದುಕೊಳ್ಳಬೇಕು.

ಶ್ರೀ ಕೆ. ಹೆಚ್ ಶ್ರೀನಿವಾಸ್.—ಫ್ರೆಂಡ್‌ಲೀ ಅಪೋಜೀಷನ್ನಿಗೆ ಗೊತ್ತಾಗದೆ ಇದ್ದರೆ, ನಿಜವಾದ ಅಪೋಜೀಷನ್ನಿಗೆ ಹೇಗೆ ಗೊತ್ತಾಗಬೇಕು? ತಾವು ವಿಷಯಕ್ಕೆ ಬನ್ನಿ ಎಂದು ಹೇಳುತ್ತೀರಿ, ಮನೆಯೊಳಗೆ ಬನ್ನಿ ಎಂದು ಹೇಳಿ ಬಾಗಿಲನ್ನು ಹಾಕಿದರೆ ಹೇಗೆ? ನೀರಾವರಿ ವಿಚಾರಕ್ಕೆ ಸಂಬಂಧಪಟ್ಟಂತೆ ಮತ್ತು ನೀರಾವರಿ ಮಂತ್ರಿಗಳ ರಾಜೀನಾಮೆಗೆ ಸಂಬಂಧಪಟ್ಟಂತೆ ಹಲವಾರು ಸಾರಿ ಸದನದಲ್ಲಿ ಚರ್ಚೆಯಾಗಿದೆ. ನಾನು ಅದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಪ್ರಶ್ನೆ ಏನೆಂದರೆ ಇಂತಹ

ಪ್ರಾಮುಖ್ಯವಾದಂಥ ವಿಚಾರದಲ್ಲಿ ಸದನ ಧೃಡವಾದ ವಿಶ್ವಾಸವನ್ನು ಸರ್ಕಾರದ ಮೇಲೆ ಒಂದು ಪಾಲು ಇಟ್ಟಿದ್ದರೆ, ನೀರಾವರಿಯ ವಿಚಾರದಲ್ಲಿ ಸ್ವತಃ ದೇವೇಗೌಡರಿಗೆ ವಿಶೇಷವಾದಂತ ಆಸಕ್ತಿ ಇದ್ದುದರಿಂದ ಅವರ ಬಗ್ಗೆ ಒಂದು ಪಾಲನ್ನು ಇಡಲಾಗಿತ್ತು. ಆದರೆ ಇವತ್ತು ಅದು ಆಕಾಶದಿಂದ ದೊಪ್ಪನೆ ಕೆಳಗೆ ಬಿದ್ದಿದೆ. ಈ ಸದನಕ್ಕೆ ದೊಡ್ಡದಾದ ವಿಶ್ವಾಸ ದ್ರೋಹವನ್ನು ಮಾಡಿದ್ದಾರೆಂದು ನಾನು ಆಪಾದನೆ ಮಾಡಬೇಕಾಗಿದೆ. ಅದನ್ನು ಕೂಡ ಅವರು ಹೊತ್ತುಕೊಳ್ಳಬೇಕಾಗಿದೆ ಸುಮ್ಮನೆ ಹಿಂದುಗಡೆ ಕೂತುಕೊಂಡು, ನಾಳೆ ರಾಜಿಯಾದರೆ ಕಷ್ಟವಾಗುತ್ತದೆ. ಸರ್ಕಾರದ ಪರವಾಗಿ ನೀರಾವರಿ ವಿಚಾರದಲ್ಲಿ ಹಲವಾರು ಭರವಸೆ ಕೊಟ್ಟಿದ್ದರು. ಅವರು ಭರವಸೆ ಕೊಟ್ಟ ಮೇಲೆ ಕೈಬಿಟ್ಟಿರತಕ್ಕ ವಿಚಾರ ಉಂಟು. ಇವತ್ತು ಇದನ್ನು ಹೊಸದಾಗಿ ಆಲೋಚನೆ ಮಾಡಬೇಕಾದ ದುಸ್ಥಿತಿ ದಿಢೀರನೆ ಪ್ರಾಪ್ತವಾಗಿದೆ.

೩-೦೦ ಪಿ. ಎಂ.

ಮಾನ್ಯ ಅಧ್ಯಕ್ಷರೆ, ಇವತ್ತು ನೀರಾವರಿ ಪ್ರಾಮುಖ್ಯತೆಯ ಬಗ್ಗೆ ಹಲವಾರು ವಿಷಯಗಳು ನಮ್ಮ ಮುಂದಿವೆ. ಮೊದಲನೆಯದಾಗಿ ನಾವು ನೀರನ್ನು ಹೇಗೆ ಉಳಿಸಿಕೊಳ್ಳಬೇಕೆಂಬ ಬಗ್ಗೆ ಒಂದು ಪ್ರಶ್ನೆ ಇದೆ. ಇನ್ನೊಂದು ಕಡೆ ನಮಗಿರತಕ್ಕ ನೀರು ವ್ಯರ್ಥವಾಗಿ ಹರಿದು ಸಮುದ್ರಕ್ಕೆ ಹೋಗದಂತೆ ತಡೆ ಮಾಡಿ, ಅಣೆಕಟ್ಟುಗಳನ್ನು ಕಟ್ಟಿ ನೀರನ್ನು ಹಿಡಿದು ಇಡತಕ್ಕದು ಇದೆ. ಇವತ್ತು ಕೇವಲ ನೀರನ್ನು ಡ್ಯಾಂನಲ್ಲಿ ಹಿಡಿದು ನಿಲ್ಲಿಸಿದರೇ ಆಗಲಿಲ್ಲ, ಅಥವಾ ಡ್ಯಾಂನ್ನು ಕಟ್ಟಿದ ಮಾತ್ರಕ್ಕೇ ಆಗಲಿಲ್ಲ. ಈರೀತಿ ಡ್ಯಾಂನ್ನು ಕಟ್ಟಿದಮೇಲೆ ನಾವು ಮಾಡಬೇಕಾದ ಕೆಲಸಗಳು ಬಹಳಷ್ಟಿವೆ. ನಾವು, ನೀರನ್ನು ಏನು ಸಂಪಾದನೆ ಮಾಡಿದ್ದೇವೆ ಅದು ವ್ಯರ್ಥವಾಗದ ಹಾಗೆ ನೋಡಿಕೊಂಡು ಉಪಯೋಗಿಸಿಕೊಳ್ಳಬೇಕು. ನೀರಾವರಿ ಬಹಳ ವ್ಯಾಪಕವಾದ ವಿಷಯ ನೀರನ್ನು ಯಾವರೀತಿ ಉಪಯೋಗ ಮಾಡಿಕೊಳ್ಳಬೇಕು, ಮತ್ತು ಯಾವ ರೀತಿ ಉಳಿಸಿಕೊಳ್ಳಬೇಕು ಎನ್ನತಕ್ಕ ವಿಚಾರದಲ್ಲಿ ನಮ್ಮ ಮಾನ್ಯ ಸ್ನೇಹಿತರು ಮಾತನಾಡಿದ್ದಾರೆ. ನೀರಾವರಿ ಪೊಟೆನ್ಷಿಯಲ್ ಏನು ನಮ್ಮಲ್ಲಿ ನಿರ್ಮಾಣವಾಗಿದೆ ಅದನ್ನು ನಾವು ಸಂಪೂರ್ಣವಾಗಿದೆ ಉಪಯೋಗ ಮಾಡಿಕೊಳ್ಳಬೇಕು. ಈಗ ನಾವು ಇದನ್ನು ಸಂಪೂರ್ಣವಾಗಿ ಉಪಯೋಗ ಮಾಡಿಕೊಂಡಿದ್ದೇವೆಯೇ, ಇಲ್ಲವೇ ಎಂಬುದನ್ನು ನೋಡಬೇಕು. ನೀರು ಡ್ಯಾಂನಲ್ಲಿದ್ದರೆ ಸಾಕು, ಎಲ್ಲವೂ ಆಯಿತು ಎಂದು ತಿಳಿದುಕೊಂಡರೂ ಆಗಲಿಲ್ಲ. ಡ್ಯಾಂನಲ್ಲಿರತಕ್ಕ ನೀರನ್ನು ಎಷ್ಟು ಪ್ರಮಾಣದಲ್ಲಿ ಉಪಯೋಗ ಮಾಡಬೇಕೆಂಬ ನಿರೀಕ್ಷೆ ಇದೆಯೋ ಆ ನಿರೀಕ್ಷಿತ ಮಟ್ಟದಲ್ಲಿ ಆದನ್ನು ಬಳಕೆ ಮಾಡುತ್ತಿದ್ದೇವೆಯೇ, ಇಲ್ಲವೇ, ಎಂಬುದನ್ನು ನೋಡಬೇಕು. ಏಕೆಂದರೆ ಇವತ್ತು ಕೇವಲ ಡ್ಯಾಂನಲ್ಲಿ ನೀರನ್ನು ನಿಲ್ಲಿಸಿದರೇ ಆಗಲಿಲ್ಲ. ಅದಕ್ಕೆ ಮೇನ್ ಛಾನಲ್ಸ್ ಆಗಬೇಕು. ಮೇನ್ ಛಾನಲ್ಸ್ ಆದರೇ ಮುಗಿಯಲಿಲ್ಲ. ಅದಕ್ಕೆ ಡಿಸ್ಟ್ರಿಬ್ಯೂಟರೀಸ್ ಆಗಬೇಕು. ಕೇವ ಡಿಸ್ಟ್ರಿಬ್ಯೂಟರೀಸ್ ಆದರೇ ಆಗಲಿಲ್ಲ, ಅದಕ್ಕೆ ಫೀಲ್ಡ್ ಛಾನಲ್ಸ್ ಆಗಬೇಕು. ಇದಾದಮೇಲೆ ಎಲ್ಲೆಲ್ಲಿ ಯಾವ ಯಾವ ಬೆಳೆಯನ್ನು ಬೆಳೆಯಬೇಕೆಂಬ ಬಗ್ಗೆ ಕ್ರಾಪಿಂಗ್ ಪ್ಯಾಟ್ರನ್ಸ್ ಕೂಡ ಆಗಬೇಕು ಪ್ರತಿಯೊಂದು ಅಚ್ಚುಕಟ್ಟಿನಲ್ಲಿಯೂ ಇರತಕ್ಕ ನೀರನ್ನು ವೈಜ್ಞಾನಿಕವಾಗಿ ಬಳಕೆ ಮಾಡಬೇಕು, ಅದರ ಪ್ರತಿಫಲ ನಮಗೆ ದೊರೆಯಬೇಕು. ಇದನ್ನು ಗಮನದಲ್ಲಿಟ್ಟುಕೊಂಡು ಕೆಲವು ಕಾಲದ ಹಿಂದೆ ನಾವು ಕಮ್ಯಾಂಡ್ ಏರಿಯಾ ಡೆವಲಪ್‌ಮೆಂಟ್ ಅಂದರೆ ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರ ಎಂದು ಮಾಡಿದೆವು. ಈ ಪ್ರಾಧಿಕಾರಕ್ಕೆ ಸಂಬಂಧಪಟ್ಟಂತೆ ಹಲವಾರು ಕಾನೂನುಗಳನ್ನು ಮಾಡಿದೆವು. ಆ ಸಂದರ್ಭದಲ್ಲಿ ನಾನು ಯೋಜನಾ ಇಲಾಖೆಯನ್ನೂ ನೋಡಿಕೊಳ್ಳುತ್ತಿದ್ದೆ.

(ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಆ ಕಾನೂನುಗಳನ್ನು ಈ ಸಭೆಯಲ್ಲಿ ಮಂಡಿಸತಕ್ಕ ಒದು ಸದವಕಾಶ ನನಗೆ ದೊರೆತಿತ್ತು. ಮಾನ್ಯ ಬೊಮ್ಮಾಯಿಯವರೂ, ಮಾನ್ಯ ದೇವೇಗೌಡರೂ ಈ ಕಡೆ ಕೂತು ಆ ಕಾನೂನಿಗೆ ತಮ್ಮ ಬೆಂಬಲವನ್ನು ಕೊಟ್ಟಿದ್ದರು. ಇವತ್ತು ಏನಾಗಿದೆ ಎಂದರೆ ಈ ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರಕ್ಕೆ ಸರ್ಕಾರದವರು ಗ್ರ್ಯಾಂಟ್‌ನ್ನು ಕೊಟ್ಟರೆ ಅವರು ಅದನ್ನು ತೆಗೆದುಕೊಂಡುಹೋಗಿ ಬ್ಯಾಂಕ್‌ನಲ್ಲಿಟ್ಟುಕೊಂಡು ಸುಮ್ಮನೆ ಕುಳಿತುಕೊಳ್ಳುತ್ತಾರೆ. ತಮಗೂ ಗೊತ್ತಿರಬಹುದು, ಇವತ್ತು ಯಾವುದೇ ರೀತಿಯಲ್ಲೂ ಕೂಡ ಇದರ ಮೂಲಭೂತ ಉದ್ದೇಶ ಏನಿದೆ ಆ ಉದ್ದೇಶವನ್ನು ಅನುಸರಿಸಿ ಈ ಪ್ರಾಧಿಕಾರ ಕೆಲಸಮಾಡುತ್ತಿಲ್ಲ. ಇದಕ್ಕೆ ಕಾರಣಗಳು ಅನೇಕವಿವೆ. ಈ ಬಗ್ಗೆ ನಾವು ಸಾರ್ವಜನಿಕ

ಲೆಕ್ಕಪತ್ರ ಸಮಿತಿಯಲ್ಲಿ ಬಹಳ ವಿಶೇಷವಾದ ಅಧ್ಯಯನವನ್ನು ಮಾಡಿದ್ದೇವೆ. ಅಧ್ಯಯನ ಮಾಡಿ ವರದಿಯನ್ನು ಕೊಟ್ಟಿದ್ದೇವೆ. ಮಹಾರಾಷ್ಟ್ರಕ್ಕೆ ಹೋಗಿ ಅಧ್ಯಯನ ಮಾಡಿಕೊಂಡು ಬರಬೇಕೆಂದಿದ್ದೆವು. ಆದರೆ ಅದು ಸಾಧ್ಯವಾಗಲಿಲ್ಲ. ಆದ್ದರಿಂದ ಮುಂದಿನಸಾರಿ ಯಾದರೂ ಒಂದು ಎಕ್ಸ್‌ಪರ್ಟ್ ಕಮಿಟಿಯನ್ನು ನೇಮಕಮಾಡಿ ಮಹಾರಾಷ್ಟ್ರಕ್ಕೆ ಹೋಗಿಬರಲು ವ್ಯವಸ್ಥೆ ಮಾಡಬೇಕೆಂದು ನಾವು ತಿಳಿಸಿದ್ದೇವೆ. ಇದರಲ್ಲಿ ನಾವು ರಿವ್ಯೂ ಮಾಡಿದಾಗ ಹಲವಾರು ಲೋಪದೋಷಗಳು ನಮಗೆ ಕಂಡುಬಂದುವು. ಎಷ್ಟೋ ಕಡೆಗಳಲ್ಲಿ ಮೇನ್ ಛಾನಲ್ಸ್ ಆಗಿವೆ, ಆದರೆ ಫೀಲ್ಡ್ ಛಾನಲ್ಸ್ ಆಗಿಲ್ಲ. ನಾವು ಕೆಲವು ವಿಚಾರಗಳನ್ನು ವಿಮರ್ಶೆಮಾಡಿದಮೇಲೆ ಇದು ಯಾವ ರೀತಿ ಇರಬೇಕೆಂದು ನಾವು ಹೇಳಿದ್ದೇವೆ. ನಾವು ಮಾಡಿದ ಶಿಫಾರಸು ಎಂದರೆ.

> The Committee would like to suggest that the Department should plan the things properly and try to see that the work on the distributories, canals and that on the field channels are syncronised...

To avoid situation of type ಎಂದರೆ

"in which field channels are constructed do not get water for a long time."

ಒಂದುಕಡೆ ಫೀಲ್ಡ್ ಛಾನಲ್ಸ್ ಇದ್ದರೆ ಡಿಸ್ಟ್ರಿಬ್ಯೂಟರೀಸ್ ಇಲ್ಲ, ಡಿಸ್ಟ್ರಿಬ್ಯೂಟರೀಸ್ ಇದ್ದರೆ ಫೀಲ್ಡ್ ಛಾನಲ್ಸ್ ಇಲ್ಲ. ಈರೀತಿ ಇದ್ದರೆ ಅದರಿಂದ ಏನು ಪ್ರಯೋಜನ? One year gap from the date of creation of potential and its utility. ಅದನ್ನು ಒಪ್ಪಿಕೊಳ್ಳಬಹುದು. ೪ ವರ್ಷ, ೫ ವರ್ಷ, ೬ ವರ್ಷವಾದರೂ ಒಂದುಕಡೆ ನೀರು, ಇನ್ನೊಂದು ಕಡೆ ಡ್ಯಾಂ ಅಂತ ಇದ್ದರೆ ಅದರಿಂದ ಏನು ಪ್ರಯೋಜನ ಇಲ್ಲ. ನಮ್ಮ ವರದಿಯಲ್ಲಿ ಇದನ್ನು ನಾವು ವಿವರವಾಗಿ ಪ್ರಸ್ತಾಪ ಮಾಡಿದ್ದೇವೆ. ತಮಗೂ ಗೊತ್ತಿದೆ, ದುರದೃಷ್ಟವಶಾತ್ ನಮ್ಮ ಸಮಿತಿಗಳ ವರದಿಗಳೆಲ್ಲಾ ನಿಮ್ಮ ಗ್ರಂಥಾಲಯದಲ್ಲಿ ಶೃಂಗಾರಕ್ಕೋಸ್ಕರ ಇಡಲ್ಪಟ್ಟಿವೆ. ಯಾರೂ ಕೂಡ ಅವುಗಳನ್ನು ತೆಗೆದು ನೋಡುವುದಿಲ್ಲ. ಇತ್ತೀಚೆಗೆ ಆ್ಯಕ್ಷನ್ ಟೇಕನ್ ರಿಪೋರ್ಟ್ ಅಂತ ಏನೋ ಬರೆದು ಕಳುಹಿಸಿಕೊಡುತ್ತಾರೆ. ಇದು ಮಂತ್ರಿಗಳ ಗಮನಕ್ಕೆ ಮತ್ತು ಕ್ಯಾಬಿನೆಟ್‌ಗೆ ಬರಬೇಕು. ಆದರೆ ದುರದೃಷ್ಟವಶಾತ್ ಬರುತ್ತಿಲ್ಲ.

ಕನಿಷ್ಟಪಕ್ಷ ಮಾನ್ಯ ಬೊಮ್ಮಾಯಿಯವರು ಅದನ್ನು ತರಿಸಿ ನೋಡಬೇಕು, ಕಮಾಂಡ್ ಏರಿಯಾ ಡೆವಲಪ್‌ಮೆಂಟ್ ಬಗ್ಗೆ ಸಾಕಷ್ಟು ಆಲೋಚನೆ ಮಾಡಿ ಕಾನೂನನ್ನು ತಂದಿರುತ್ತಾರೆ. ಕಾನೂನಿನಲ್ಲಿ ಏನಾದರು ಲೋಪದೋಷಗಳು ಇದ್ದರೆ ತಾವು ಅದನ್ನು ತಿದ್ದುಪಡಿಮಾಡಿ, ನಮ್ಮದೇನೂ ಅಭ್ಯಂತರ ವಿಲ್ಲ. ಆದರೆ ನಾವು ಪರೀಕ್ಷೆ ಮಾಡಿದಾಗ ಹಲವಾರು ಕಮ್ಯಾಂಡ್ ಏರಿಯಾ ಅಥಾರಿಟಿಕಮಿಷನರ್ ಅಡ್ಮಿನಿಸ್ಟ್ರೇಟರ್ ಕಾನೂನನ್ನು ಓದಿಯೇ ಇಲ್ಲ. ಕಾನೂನನ್ನು ಓದಿಲ್ಲದೆ ಕಾನೂನು ಸರಿಯಿಲ್ಲವೆಂದು ಹೇಳುತ್ತಿದ್ದಾರೆ. ಕಾನೂನು ಓದಿಕೊಂಡು ಆಮೇಲೆ ಹೇಳಿ ಎಂದು ಹೇಳಿದ್ದೇವೆ. ಏನೇನು ಕೆಲಸ ಇದೆ ಎನ್ನುವುದನ್ನು ನೋಡಿಕೊಳ್ಳದೆ ಕಾನೂನು ಸರಿಯಿಲ್ಲವೆಂದು ಕುಳಿತುಕೊಂಡಿದ್ದಾರೆ. ಇನ್ನೊಂದು ತೊಂದರೆಯಾಗಿದೆ. ಕಾಡಾದಲ್ಲಿ ಎಲ್ಲಾ ಡಿಪಾರ್ಟ್‌ಮೆಂಟ್ ಅಧಿಕಾರಿಗಳು ಇರತಕ್ಕಂಥವರು. ಅವರೆಲ್ಲರೂ ಏನುಮಾಡುತ್ತಿದ್ದಾರೆಂದರೆ ಸೀನಿಯರ್ ಆಫೀಸರ್‌ಗಳು ಹೋಗದೆ ಜೂನಿಯರ್ ಆಫೀಸರ್‌ಗಳನ್ನು ಕಳುಹಿಸುತ್ತಿದ್ದಾರೆ. They send Junior Officers and they will only be depurting for their Senior without really involving themselves in the CADA work. ಇದು ತಪ್ಪು. ಕಾಡಕ್ಕೆ ಸೇರಿದ್ದೇವೆ ಎನ್ನುವ ಅಭಿಪ್ರಾಯ ಕೂಡ ಇರುವುದಿಲ್ಲ. ಅಧಿಕಾರಿಗಳೆಲ್ಲಾ ಸೇರಿ ಅಲ್ಲಿ ಮೀಟಿಂಗ್ ಮಾಡುತ್ತಾರೆ. ಅಟೆಂಡ್ ಮಾಡತಕ್ಕಂಥ ಸದಸ್ಯರುಗಳು ಅಲ್ಲಿ ಏನು ಚರ್ಚೆಯಾದರೂ ಗಂಭೀರವಾಗಿ ಕುಳಿತುಕೊಂಡಿದ್ದು ವಾಪಸ್ ಬಂದ ಮೇಲೆ ತಮ್ಮ ತಮ್ಮ ಡಿಪಾರ್ಟ್‌ಮೆಂಟ್‌ಗಳಿಗೆ ನೋಟ್ ಬರೆದು ಕಳುಹಿಸಿಕೊಡುತ್ತಾರೆ. ಹೀಗಾಗಿರುವುದ ರಿಂದ, Command Area Development Authority is by and large rendered useless. ಅಲ್ಲಿ ನಿಜವಾಗಿಯೂ ವಿವೇಚನೆ ಮಾಡತಕ್ಕಂಥ ಯಾವುದು ಕೆಲಸವಾಗುತ್ತಿಲ್ಲ. ಒಂದೇ

ಒಂದು ಕಡೆಯಲ್ಲಿ ಅಂದರೆ ಅಪ್ಪರ್ ಕೃಷ್ಣಾದಲ್ಲಿ ಏನಾಗಿದೆ ಎಂದರೆ because World Bank has been insisting on certain norms and standards. ಸ್ವಲ್ಪ ರೂಪರೇಷೆಗಳು ಉಳಿದಿವೆ. ಬೇರೆ ಕಡೆ ಯಾರು ಹೇಳುವವರು ಕೇಳುವವರೂ ಇಲ್ಲ. ಹಲವಾರು ಅಥಾರಿಟೀಸ್‌ಗಳು ಇವೆ. ಅವಕ್ಕೆ ಕಾರು. ಚೇರ್‌ಮನ್, ಜೀಪ್ ಎಲ್ಲಾ ಇರುತ್ತದೆ. The Officers said Cabinet will consider certain changes in the CADA set up ಹೇಳಿದಾಗ PWD Commissioner promised that before it is committed to the consideration of the Cabinet, PAC's views will be taken ಅಂಥ ಹೇಳಿದರು.

ಆದರೆ ಕೇಳಲಿಲ್ಲ. ಗೌರ್ನಮೆಂಟ್ ಆರ್ಡರ್ ಪಾಸ್ ಮಾಡಿಬಿಟ್ಟಿದ್ದಾರೆ. ಅವರ ಪ್ರಕಾರ ಅಮೆಂಡ್ ಮಾಡಿದರೂ ಕೂಡ ಕಾಡ ಎನ್ನುವುದು ಉಳಿಯುವುದಿಲ್ಲ. ಒಂದೇ ಒಂದು ಎಕ್ಸಾಂಪಲ್ ಹೇಳುತ್ತೇನೆ. The said "hereafterwards, all activities relating to agriculture Horticulture, Fisheries, Sericulture, Marketing in a command area have to be planned and carried out by the respective Zilla Parishads in consultation with the CADA ಅಲ್ಲಿಗೆ ಏನು ಉಳಿಯಿತು ? ಜಿಲ್ಲಾ ಪರಿಷತ್ತು ಇದಿಷ್ಟು ಮಾಡಬೇಕೆಂದು In consultation with CADA ಅಂದರೆ CADA is going to be just a consultation body whereas, we want the CADA should monitor every departmental activities inside the Command Area. ಕಮ್ಯಾಂಡ್ ಏರಿಯಾ ಅಂದರೆ ಒಂದು ವಿಶಿಷ್ಟವಾದ ಅಭಿವೃದ್ಧಿ ಯೋಜನೆ. ಇದರಲ್ಲಿ ಹಲವಾರು ಸೂಕ್ಷ್ಮತೆ ಇರುತ್ತದೆ. ಅದನ್ನೆಲ್ಲಾ ಒಟ್ಟುಗೂಡಿಸಿ ಕೋಆರ್ಡಿನೇಟ್ ಮಾಡಿ ಒಂದು ಬಾಡಿ ಬೇಕೆಂದು ತಯಾರು ಮಾಡಿದ್ದಾರೆ. ಈಗ ಜಿಲ್ಲಾ ಪರಿಷತ್ ಆಗಿ ಏನಾಗಿದೆ ಎಂದರೆ ಸರ್ಕಾರಕ್ಕೆ ಯಾವ ಜವಾಬ್ದಾರಿಯುಬೇಡ. ಯಾವುದಿದ್ದರೂ ಜಿಲ್ಲಾ ಪರಿಷತ್‌ಗೆ ತೆಗೆದು ಬಿಸಾಕಿದರೆ ಆಯಿತು. ಎಲ್ಲಾ ಬುಟ್ಟಿಗೆ ತುಂಬಿ ತುಂಬಿ ಹೊಸ ಕಸದ ಬುಟ್ಟಿ ಪರ್ಚೇಸ್ ಮಾಡತಕ್ಕಂಥ ಪರಿಸ್ಥಿತಿಗೆ ಬಂದಿದೆ. ಬರೇ ಕಸದ ಬುಟ್ಟಿಗೆ ಅವರ ಬಜೆಟ್ ಸಾಕಾಗುವುದಿಲ್ಲ. ಆ ರೀತಿ ಪರಿಸ್ಥಿತಿಯಾಗಿದೆ. ಈವತ್ತು ಕಮ್ಯಾಂಡ್ ಏರಿಯಾ ಡೆವಲಪ್‌ಮೆಂಟ್ ಅಥಾರಿಟಿ ಕಾನ್‌ಸೆಪ್ಟ್ ಸಂಪೂರ್ಣವಾಗಿ ನೆಗೆಟೀವ್ ಮಾಡತಕ್ಕಂಥ ರೆಕಮೆಂಡೇಷನ್ ಆಗಿ ಆದಮೇಲೆ ಗೌರ್ನಮೆಂಟ್ ಆರ್ಡರ್ ಇಷ್ಯೂ ಆಗಿಬಿಟ್ಟಿದೆ. ಅಂದರೆ ಸರ್ಕಾರದ ಚಿಂತನೆ ಏನು ಇದೆ ಎನ್ನುವುದನ್ನು ತಿಳಿದುಕೊಳ್ಳಬೇಕಾಗಿದೆ. ಈವತ್ತು ಮಹಾರಾಷ್ಟ್ರದಲ್ಲಿ ಏನು ಇದೆ ಅದಕ್ಕೆ ತಿರುಗುಮುರುಗು ಆಗಿದೆ. It is the Command Area Development Authority which carries on all these programmes in consultation with the Zilla Parishads. That is the same meaning. ನಮ್ಮಲ್ಲೂ ಕೂಡ ಜಿಲ್ಲಾ ಪರಿಷತ್ ಬಂದ ಕೂಡಲೇ ಜಿಲ್ಲಾ ಪರಿಷತ್ ಅಧ್ಯಕ್ಷರು ಚೀಫ್ ಸೆಕ್ರೆಟರಿಯವರನ್ನು ಈ ಕಾಡಕ್ಕೆ ಮೆಂಬರ್ ಆಗಿ ಮಾಡಿದ್ದಾರೆ. ಸದಸ್ಯರಾಗಿ ಅವರು ಇರಬೇಕೆಂದು ಒಪ್ಪಿಕೊಳ್ಳುತ್ತೇವೆ. ಆದರೆ All department activities to be planned, carried out by the respective Zilla Parishads in consultation with CADA. liquidation of the CADA. It amounts to liquidation of the CADA set up. ಆಮೇಲೆ ನಮ್ಮಲ್ಲಿ ಬರೇ ಡ್ಯಾಮ್ ಮಾಡತಕ್ಕಂಥದ್ದು ಮಾಡಿ ಚಾನಲ್ ಮಾಡದೆ ಯಾವ ಒಂದು ದೃಷ್ಟಿಯಿಂದ ಕಮ್ಯಾಂಡ್ ಏರಿಯಾ ಡೆವಲಪ್‌ಮೆಂಟ್ ಅಥಾರಿಟಿ ಎಂದು ಮಾಡಿ ಇರಿಗೇಷನ್ ಪೊಟೆನ್‌ಷಿಯಲ್ ಕ್ರಿಯೇಟ್ ಮಾಡುತ್ತೇವೆಂದು ಒಂದೊಂದು ಹನಿಯೂ ವ್ಯರ್ಥವಾಗದ ರೀತಿಯಲ್ಲಿ ಪ್ರಯೋಜನವಾಗಬೇಕೆಂದು ಮಾಡಿದಿರಲ್ಲಾ ಆ ಅಚ್ಚುಕಟ್ಟು ಅಥಾರಿಟಿ ಸಮರ್ಪಕವಾದ ರೀತಿಯಲ್ಲಿ ವಿಶಿಷ್ಟ ರೀತಿಯಲ್ಲಿ ಅಭಿವೃದ್ಧಿ ಮಾಡಬೇಕು. ಕಮ್ಯಾಂಡ್ ಏರಿಯಾ ಡೆವಲಪ್‌ಮೆಂಟ್ ಅಥಾರಿಟಿ ತಮ್ಮದೇ ಆದಂತಹ ಪ್ಲಾನಿಂಗ್ ಮಾಡಿ ತಮ್ಮದೇ ಆದಂಥ ರಿಸೋರ್ಸಸ್ ಮಾಡಬೇಕೆನ್ನುವ ಅಭಿಪ್ರಾಯವಿದೆಯೋ ಎಂದರೆ ಏನೂ ಇಲ್ಲ. ಗೌರ್ನಮೆಂಟ್ ಎಷ್ಟು ಗ್ರಾಂಟ್ ಕೊಟ್ಟಿತ್ತೋ ಅಷ್ಟು ಗ್ರಾಂಟನ್ನೂ ಕೂಡ ಖರ್ಚು ಮಾಡಿಲ್ಲ ತಮಗೆ ಬೇಕಾದ ಬ್ಯಾಂಕ್‌ನಲ್ಲಿ ಇಟ್ಟುಕೊಂಡಿರುತ್ತಾರೆ. ನೀವು ಟ್ರಜರಿಯಲ್ಲಿ ದುಡ್ಡಿಲ್ಲವೆಂದು ಒದ್ದಾಡುತ್ತಿದ್ದೀರಿ. ಅವರು ದುಡ್ಡನ್ನು ಖರ್ಚು ಮಾಡದೆ ಬೇರೆ ಬೇರೆ ಬ್ಯಾಂಕ್‌ಗಳಲ್ಲಿ ಹಾಕಿ ಕೊಳೆತುಕೊಂಡಿರುತ್ತಾರೆ. ಅಂಥ ಒಂದು ಪರಿಸ್ಥಿತಿಯನ್ನು ನಾವು ಗಮನಿಸಿದ್ದೇವೆ. ಅದಕೂ

ಬೇರೆ ಒಂದು ಶಿಫಾರಸ್ಸನ್ನು ಮಾಡಿದ್ದೇವೆ. ಆದ್ದರಿಂದ ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ, ಮೊದಲನೆಯ ದೊಡ್ಡ ತಪ್ಪು ಆಗಿರತಕ್ಕದ್ದು ಕಾಡಾ ಅನ್ನತಕ್ಕದ್ದು ಯೋಜನಾ ಇಲಾಖೆಯ ಕೆಳಗಡೆ ಇರಬೇಕಾಗಿತ್ತು. ಮೊದಲು ಕೂಡ ಇದು ಇದ್ದದ್ದು ಯೋಜನಾ ಇಲಾಖೆಯ ಕೆಳಗಡೆ. ಕಮ್ಯಾಂಡ್ ಏರಿಯಾ ಡೆವಲಪ್‌ಮೆಂಟ್ ಅಥಾರಿಟಿ ಅಂಥ ಕಾನೂನು ಮಂಡಿಸಿದ್ದು ಯೋಜನಾ ಇಲಾಖೆಯ ಪರವಾಗಿ. ಯೋಜನಾ ಇಲಾಖೆಯ ಕೆಳಗೆ ಇದು ಇತ್ತು. ಒಂದು ದಿವಸ ಇದನ್ನು ಬದಲಾವಣೆ ಮಾಡಿ ಇರಿಗೇಷನ್ ಡಿಪಾರ್ಟ್‌ಮೆಂಟಿಗೆ ಹಾಕಿದರು. ಈಗ ಇದು ಇರಿಗೇಷನ್ ಇಲಾಖೆಯ ಸಣ್ಣ ಬಾಲವಾಗಿದೆ. ಅದು ಏನು ಮಾಡುವುದಕ್ಕೂ ಆಗುವುದಿಲ್ಲ. ಇರಿಗೇಷನ್ ಇಲಾಖೆ ಏನು ಹೇಳುತ್ತದೆ ಅದನ್ನು ಕೇಳಿಕೊಂಡು ಇರಬೇಕು. ಅಲ್ಲಿರತಕ್ಕ ಸಿಬ್ಬಂದಿ ಕೂಡ ಅಷ್ಟೆ. ಯಾರು ಯಾರು ಮೆಯಿನ್ ಡಿಪಾರ್ಟ್‌ಮೆಂಟಿನಲ್ಲಿ ಬೇಡ ಅನ್ನುತ್ತಾರೆ ಅವರನ್ನು ಕಾಡಾಕ್ಕೆ ಒಗೆಯುತ್ತಾರೆ. ಆವರು ಅಲ್ಲಿಂದ ವರ್ಗ ಮಾಡಿಸಿಕೊಳ್ಳುವುದಕ್ಕೆ ಪ್ರಯತ್ನಿಸುತ್ತಾರೆ. ಇದಕ್ಕೆ ರೂಪ ಬಂದಿಲ್ಲ, ಕಾರೆಕ್ಟರ್ ಬಂದಿಲ್ಲ. ಇದರ ಬಗ್ಗೆ ತಾವು ದಯವಿಟ್ಟು ಗಮನಹರಿಸಬೇಕು. ವಿಶ್ವ ಬ್ಯಾಂಕು ಮತ್ತೊಂದು ಫೈನಾನ್ಸ್ ಮಾಡಬೇಕೆಂದರೆ ಕಾಡಾ ಸರಿಯಾದ ರೀತಿಯಲ್ಲಿ ಕಾರ್ಯ ನಿರ್ವಹಿಸಬೇಕಾಗುತ್ತದೆ. ಅದರ ಸ್ವರೂಪ ಮತ್ತು ಚಾಲನೆ ಆಗದೆ ಹೋದರೆ ನೀರಾವರಿಯನ್ನು ಸಾಕಷ್ಟು ಸಾಧಿಸಿದರೂ ನಿಜವಾದ ಗುರಿಯನ್ನು ತಲುಪುದಕ್ಕೆ ಸಾಧ್ಯವಾಗುವುದಿಲ್ಲವೆಂದು ಈ ಸಂದರ್ಭದಲ್ಲಿ ಒತ್ತಾಯಪೂರ್ವಕವಾಗಿ ಹೇಳಬಯಸುತ್ತೇನೆ. ನೀರಾವರಿ ಯೋಜನೆಗಳು ತಡವಾಗುವುದಕ್ಕೆ ಮತ್ತು ಇಂಪ್ಲಿಮೆಂಟ್ ಆಗದೆ ಇರುವುದಕ್ಕೆ ಹಾಗೂ ಲೋಕೋಪಯೋಗಿ ಕೆಲಸಗಳು ಏತಕ್ಕೆ ಆಗುವುದಿಲ್ಲ ಎಂಬುದಕ್ಕೆ ಹಲವಾರು ಕಾರಣಗಳು ಇವೆ. ನಾವು ಏನು ಗುತ್ತಿಗೆದಾರರ ಪದ್ಧತಿಯನ್ನು ಇಟ್ಟಿದ್ದೇವೆ ಅದರಲ್ಲಿ ಹಲವಾರು ಲೋಪದೋಷಗಳಿವೆ. ಕಾಂಟ್ರಾಕ್ಟ್ ಕೊಡಬೇಕಾದರೆ ಅದರ ತಿಥಿಯಾಗುವ ರೀತಿಯಲ್ಲಿ ಹಲವಾರು ಲೋಪದೋಷಗಳು ಸ್ಟ್ಯಾಂಡರ್ಡ್ ಕಾಂಟ್ರಾಕ್ಟ್ ಫಾರಂನಲ್ಲಿವೆ. ನಾವು ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಎದುರಿಗೆ ಲೋಕೋಪಯೋಗಿ ಕಮೀಷನರ್, ಲಾ ಕಮೀಷನರ್ ಮತ್ತು ಫೈನಾನ್ಸ್ ಕಮೀಷನರನ್ನು ಕೂರಿಸಿ ಸ್ಟ್ಯಾಂಡರ್ಡ್ ಕಾಂಟ್ರಾಕ್ಟ್ ಫಾರಂ ಅನ್ನು ಸಾಕಷ್ಟು ಪರಿಷ್ಕಾರ ಮಾಡಿದ್ದೇವೆ. ದಯವಿಟ್ಟು ಆ ಶಿಫಾರಸ್ಸುಗಳನ್ನು ಗಮನಿಸಬೇಕೆಂದು ಹೇಳುತ್ತೇನೆ. ಎಲ್ಲೆಲ್ಲಿ ಅನಾವಶ್ಯಕ ಡಿಲೇ ಆಗುತ್ತದೆ. ಎಲ್ಲೆಲ್ಲಿ ಭ್ರಷ್ಟಾಚಾರವಾಗುತ್ತದೆ ಅದಕ್ಕೆ ಯಾರನ್ನು ಕೇಳಬೇಕೆಂದು ಇಲ್ಲ. ನಮ್ಮ ರೂಲ್ಸ್ ರೆಗ್ಯುಲೇಷನ್ ಹೇಗಿದೆ ಎಂದರೆ ಹಿಟ್ಟು ದಪ್ಪವಾದರೆ ರೊಟ್ಟಿ ತಟ್ಟು, ತೆಳುವಾದರೆ ದೋಸೆ ಹುಯ್ಯಿ ಅನ್ನುವ ಹಾಗೆ ಇದೆ. ಫೈಲು ಮೇಲಿನಿಂದ ಕೆಳಕ್ಕೆ ಕೆಳಗಿನಿಂದ ಮೇಲಕ್ಕೆ ವಾಲಿಬಾಲ್ ಓಡಾಡಿದ ಹಾಗೆ ಓಡಾಡುತ್ತದೆ. ಎಕ್ಸಿಕ್ಯೂಟೀವ್ ಇಂಜಿನಿಯರಿಂದ ಮುಖ್ಯ ಇಂಜನಿಯರ್‌ಗೆ ಹೋಗುತ್ತದೆ. ಮತ್ತೆ ಅಲ್ಲಿಂದ ಅಸಿಸ್ಟೆಂಟ್ ಇಂಜನಿಯರಿಗೆ ಬರುತ್ತದೆ. ಹೀಗಾಗಿ ಎಷ್ಟೋ ಭ್ರಷ್ಟಾಚಾರದ ಪ್ರಕರಣಗಳು ಉಂಟಾಗಿವೆ. ಯಾರನ್ನೂ ಐಡೆಂಟಿಫೈ ಮಾಡುವುದಕ್ಕಾಗುವುದಿಲ್ಲ. ಯಾರನ್ನೂ ಪನಿಷ್ ಮಾಡುವುದಕ್ಕಾಗುವುದಿಲ್ಲ. ಎಷ್ಟೋ ಓಬಿರಾಯನ ಕಾಲದ್ದನ್ನು ಬದಲಾವಣೆ ಮಾಡಿ ತೀರ್ಮಾನ ತೆಗೆದುಕೊಳ್ಳಬೇಕಾದುದು ಇದೆ. ಎಷ್ಟೊ ಸಂದರ್ಭಗಳಲ್ಲಿ ಹೆದರಿಕೊಂಡು ಒಂದು ಲಕ್ಷಕ್ಕೆ ಆಗುವ ಕೆಲಸವನ್ನು ಒಂದು ಕೋಟಿ ರೂಪಾಯಿಗೆ ತೆಗೆದುಕೊಂಡು ಹೋಗುವ ಪರಿಸ್ಥಿತಿ ಇದೆ. ಕಂಟ್ರಾಕ್ಟರ್ ಬಿಟ್ಟು ಹೋಗುತ್ತಾನೆ. ಅಂಥ ಸಂದರ್ಭದಲ್ಲಿ ಎಚ್ಚರಿಕೆ ವಹಿಸಿ ಬೇರೆ ಕಂಟ್ರಾಕ್ಟರನ್ನು ಹಿಡಿದು ಅಥವಾ ಅದೇ ಕಂಟ್ರಾಕ್ಟರಿಗೆ ಸ್ವಲ್ಪ ಹೆಚ್ಚಿಗೆ ಹಣ ಕೊಟ್ಟು ಕೆಲಸ ಮಾಡಿಸಬೇಕು. ಇಲ್ಲದಿದ್ದರೆ ಕೋರ್ಟು ಕಛೇರಿ ಎಂದು ೫-೧೦ ವರ್ಷ ಕಳೆದನೆ ೫-೧೦ ಲಕ್ಷ ರೂಪಾಯಿನ ಕೆಲಸಕ್ಕೆ ೫೦ ಲಕ್ಷ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಈ ಬಗ್ಗೆ ಯಾರು ತೀರ್ಮಾನ ತೆಗೆದುಕೊಳ್ಳಬೇಕು ? ಯಾರಿಗೂ ಧೈರ್ಯ ಇಲ್ಲ. ಮಂತ್ರಿಗಳಿಗೂ ಇಲ್ಲ. ಅಧಿಕಾರಿಗಳಿಗೂ ಇಲ್ಲ. ನಾನೇನಾದರೂ ಜವಾಬ್ದಾರಿ ತೆಗೆದುಕೊಂಡರೆ ದುಡ್ಡು ಹೊಡೆದ ಎಂದು ಅನುಮಾನ ಬರುತ್ತದೆಂದು ಅಧಿಕಾರಿಗಳ ಮೇಲೆ ಹಾಕುತ್ತಾರೆ. ಅಧಿಕಾರಿಗಳಿಗೆ ಸಣ್ಣಪುಟ್ಟ ಕೆಲಸಗಳಲ್ಲಿ ಧೈರ್ಯ ಇರುತ್ತದೆ. ಆದರೆ ಇಂಥ ಕೆಲಸಗಳಲ್ಲಿ ಇರುವುದಿಲ್ಲ. ಅವರೂ ಕೂಡ ಹೆದರುತ್ತಾರೆ. ಇದಕ್ಕೆ ನಾವು ಪರಿಹಾರ ಕಂಡುಹಿಡಿಯಬೇಕು. ಇದನ್ನು ಒಳ್ಳೆಯ ರೀತಿಯಲ್ಲಿ ಪರಿಹರಿಸದಿದ್ದರೆ ಸುಮ್ಮನೆ ನಾವು ಶಂಖ ಹೊಡೆದು ಡಿಲೇ ಆಯಿತು ಅಂದರೆ ಪ್ರಯೋಜನವಾಗುವುದಿಲ್ಲ. ಆಗ ಶುರುವಾಯಿತು, ಇನ್ನೂ ಮುಗಿಯಲಿಲ್ಲವೆಂದರೆ ಏತಕ್ಕೆ ಡಿಲೇ ಆಗುತ್ತದೆ, ಏತಕ್ಕೋಸ್ಕರ ಕೆಲಸ ಕಾರ್ಯಗಳು ನಿಗದಿಯಾದ ಷೆಡ್ಯೂಲನ್ನು ಅನುಸರಿಸಿ ಕಾರ್ಯಗತವಾಗುವುದಿಲ್ಲ ಎಂಬ ಮೂಲಭೂತ ಪ್ರಶ್ನೆಯ ಬಗ್ಗೆ ಗಮನಹರಿಸದೆ ಡಿಲೇ ಆಗುತ್ತದೆಂದು ಬಯ್ಯುತ್ತಾ ಕಾಳಿತರ ೩-೪ ಜನ ಅಧಿಕಾರಿಗಳನ್ನು ಪನಿಷ್ ಮಾಡಿದರೆ ಫಲ ಸಾಧನೆ ಆಗುವುದಿಲ್ಲ. ಎರಡು ವಿಷಯಗಳನ್ನು ಮುಖ್ಯವಾಗಿ ನೀರಾವರಿ ಸಚಿವರಲ್ಲಿ ಒತ್ತಾಯಿಸುವುದೇ

ನೆಂದರೆ, ಮೊದಲನೆಯದಾಗಿ ಕಮ್ಯಾಂಡ್ ಏರಿಯಾ ಡೆವಲಪ್‌ಮೆಂಟ್ ಅಥಾರಿಟಿಯ ಬಗ್ಗೆ ಏನು ಸರ್ಕಾರಿ ಆಜ್ಞೆ ಮಾಡಿದ್ದೀರೋ ಅದನ್ನು ತಡೆಹಿಡಿಯಬೇಕು. ಮತ್ತು ಈಗಿರುವ ಸಾರ್ವಜನಿಕ ಲೆಕ್ಕಪತ್ರ ಸಮಿತಿಯನ್ನಾದರೂ ಕಳುಹಿಸಿ, ಇಲ್ಲದಿದ್ದರೆ ನಿಮಗೆ ತೋಚಿದ ಎಕ್ಸ್‌ಪರ್ಟ್ ಕಮಿಟಿಯನ್ನು ಕಳುಹಿಸಿ, ಮಹಾರಾಷ್ಟ್ರದಲ್ಲಿ ಏನು ಸೆಟ್‌ಅಪ್ ಇದೆ ಅದು ಚೆನ್ನಾಗಿ ನಡೆಯುತ್ತಿದೆ ಎಂದು ತಿಳಿದುಬಂದಿರುವುದರಿಂದ ಅದನ್ನು ನೋಡಿಬಂದು ಅದರ ಹಿನ್ನೆಲೆಯಲ್ಲಿ ನಾವು ಮಾಡಿರುವ ಶಿಫಾರಸ್ಸುಗಳನ್ನು ಪರಿಶೀಲಿಸಿ ಒಂದು ಕ್ರಮ ಕೈಗೊಳ್ಳಬೇಕೇ ಹೊರತು ಆತುರವಾಗಿ ಕಾಡಾ ವ್ಯವಸ್ಥೆಯನ್ನು ಹಾಳು ಮಾಡತಕ್ಕ ನಿರ್ಧಾರವನ್ನು ಕಾರ್ಯಗತ ಮಾಡಕೂಡದು. ಸರ್ಕಾರೀ ಆಜ್ಞೆಯನ್ನು ಮೊದಲು ತಡೆಹಿಡಿಯಬೇಕೆಂದು ಒತ್ತಾಯಿಸುತ್ತೇನೆ.

ಮಾನ್ಯ ಅಧ್ಯಕ್ಷರೆ, ಇನ್ನು ಲಿಫ್ಟ್ ಇರಿಗೇಷನ್ ವಿಷಯ. ಈ ಹೆಸರೇನೋ ಸಾಕಷ್ಟು ಪ್ರಚಾರ ದಲ್ಲಿದೆ. ಇವತ್ತು ನೆನೆಗುದಿಗೆ ಬಿದ್ದಿರತಕ್ಕ ಅಲ್ಲೊಂದು ಇಲ್ಲೊಂದು ಸಣ್ಣಪುಟ್ಟ ಲಿಫ್ಟ್ ಇರಿಗೇಷನ್ ಪ್ರಶ್ನೆಯಲ್ಲ. ಮೇಜರ್ ಆದಂಥ ಲಿಫ್ಟ್ ಇರಿಗೇಷನ್ ಯಾವುದನ್ನೂ ಲಿಫ್ಟ್ ಇರಿಗೇಷನ್ ಕಾರ್ಪೋರೇಷನ್ನಿನವರು ತೆಗೆದುಕೊಳ್ಳುವ ಮನಸ್ಸು ಮಾಡಿಲ್ಲ. ಮೂರು ನಾಲ್ಕು ಕಾರ್ಪೋರೇಷನ್ ಮಾಡಿದ್ದೀರಿಲ್ಲ. ಅದು ಎಲ್ಲಿದೆಯೋ ಏನು ಮಾಡುತ್ತಿದೆಯೋ ಎಂಬ ಪರಿಚಯ ನಮಗಾಗಿಲ್ಲ. ಅದಕ್ಕೆ ನಮ್ಮದು ತಪ್ಪೋ ಕಾರ್ಪೋರೇಷನ್‌ನವರದು ತಪ್ಪೋ ಹೇಳಿದರೆ ಕೇಳಿಕೊಳ್ಳುವುದಕ್ಕೆ ತಯಾರಿದ್ದೇನೆ. ಮುಖ್ಯವಾಗಿ ಅದರ ಬಗ್ಗೆ ಜನರಲ್ಲಾಗಿ ಮಾತನಾಡುವುದಕ್ಕೆ ನಾನು ತಯಾರಿಲ್ಲ. ನಮ್ಮ ತುಂಗಾ ಲಿಫ್ಟ್ ಇರಿಗೇಷನ್ ಬಗ್ಗೆ ಒಂದೆರಡು ಮಾತುಗಳನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ತುಂಗಾ ನದಿಯಲ್ಲಿ ಸಾಕಷ್ಟು ನೀರಿದೆ. ತಮಗೆ ಗೊತ್ತಿರುವಂತೆ ಇದು ಕೃಷ್ಣ ಬೇಸಿನ್‌ಗೆ ಒಳಪಟ್ಟಿರತಕ್ಕದ್ದು. ಆದರೂ ಅಲ್ಪಸ್ವಲ್ಪ ನೀರಿದೆ. ಸ್ವಲ್ಪಸ್ವಲ್ಪ ಕದಿಯುವುದಕ್ಕೂ ಕೂಡ ಸಾಧ್ಯವಿದೆ. ತುಂಗಾ ಅಣೆಕಟ್ಟನ್ನು ಸುಮಾರು ೧೫ ಅಡಿ ಎತ್ತರಿಸಬೇಕು ಎಂಬ ವಿಚಾರ ಅಣೆಕಟ್ಟು ಹುಟ್ಟಿದ ತಾರೀಖಿನಿಂದ ಇವತ್ತಿನವರೆಗೂ ಹಾಗೇ ಉಳಿದಿದೆ. ಅನಂತರ ತುಂಗಾ ನದಿಯ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಮೇಲೆ ಅಪ್ಪರ್ ತುಂಗಾ ಪ್ರಾಜೆಕ್ಟ್ ಮಾಡಬೇಕು ಎಂಬುದೂ ಇದೆ. ಅದನ್ನು ಮಾಡಿದರೂ ಕೂಡ ಈಗಿರುವ ಗಾಜನೂರು ಡ್ಯಾಮ್‌ನಿಂದ ಲಿಫ್ಟ್ ಇರಿಗೇಷನ್ ಮಾಡಬೇಕು. ಹೈ ಲೆವೆಲ್ ಇರಿಗೇಷನ್ ಮತ್ತೊಂದು ಲೋ ಲೆವೆಲ್ ಇರಿಗೇಷನ್ ಎಂದು ಎರಡು ಇದೆ. ಇದರ ಬಗ್ಗೆ ಇಲ್ಲಿ ಅರ್ಧ ಗಂಟೆಯ ಚರ್ಚೆ ಕೂಡ ಆಯಿತು. ಈ ಡಿಪಾರ್ಟ್‌ಮೆಂಟಿನಲ್ಲಿ ಫೈಲುಗಳು ಒಬ್ಬೊಬ್ಬರದು ಒಂದೊಂದು ಕಡೆ ಇದೆ. ಒಂದು ಫೈಲ್ ಇನ್‌ವೆಸ್ಟಿಗೇಷನ್ ಡಿಪಾರ್ಟ್‌ಮೆಂಟಿನಲ್ಲಿದ್ದರೆ ಇನ್ನೊಂದು ಮೇಜರ್ ಇರಿಗೇಷನ್ ಡಿಪಾರ್ಟ್‌ಮೆಂಟಿನಲ್ಲಿ, ಮೈನರ್ ಇರಿಗೇಷನ್ ಡಿಪಾರ್ಟ್‌ಮೆಂಟಿನಲ್ಲಿ ಇದೆ. ೫ ಸಾವಿರ ೬ ಸಾವಿರ ಎಕರೆ ನೀರಾವರಿ ಮಾಡತಕ್ಕ ಲೋ ಲೆವೆಲ್ ಲಿಫ್ಟ್ ಇರಿಗೇಷನ್‌ನಿಂದ ಹಿಡಿದು ಅನೇಕ ನೀರಾವರಿ ಯೋಜನೆಗಳು ಶಿವಮೊಗ್ಗ, ಹೊನ್ನಾಳಿ ಮತ್ತು ಮಾನ್ಯ ಅಧ್ಯಕ್ಷರ ಕ್ಷೇತ್ರವಾದ ಧಾರವಾಡದ ಕೆಲವು ತಾಲ್ಲೂಕುಗಳೂ ಇದರಲ್ಲಿ ಬರುತ್ತವೆ. ಇದಕ್ಕೆ ಸಂಬಂಧಪಟ್ಟಂತೆ ಎರಡು ಲಕ್ಷ ಎಕರೆಗೆ ನೀರಾವರಿಯಾಗತಕ್ಕ ಯೋಜನೆ ಇದೆ. ಇದಕ್ಕೆ ಹೊಸದಾಗಿ ಬಹಳ ದೊಡ್ಡ ಅಣೆಕಟ್ಟು ಕಟ್ಟಬೇಕಾದ ಅವಶ್ಯಕತೆ ಇಲ್ಲ. ಹೈ ಲೆವೆಲ್ ಲಿಫ್ಟ್ ಇರಿಗೇಷನ್ ಮಾಡಿದರೆ ಸಾಕು. ದೊಡ್ಡ ಕೆನಾಲ್ ತೆಗೆಯತಕ್ಕ ಕೆಲಸವನ್ನು ಅನಾವೃಷ್ಟಿ ಕಾಲದಲ್ಲಿ ಸುಖವಾಗಿ ಮಾಡಬಹುದು, ಇಂಥ ಸುಲಭವಾದ ಯೋಜನೆ ಬಗ್ಗೆ ಮಾನ್ಯ ದೇವೇಗೌಡರ ಹತ್ತಿರ ಪ್ರಸ್ತಾಪ ಮಾಡಿದಾಗ ೨ ಕೋಟಿ ೨೬ ಲಕ್ಷ ರೂಪಾಯಿಗಳನ್ನು ಲೋ ಲೆವೆಲ್ ಲಿಫ್ಟ್ ಇರಿಗೇಷನ್ ಸ್ಕೀಮಿಗೆ ಬಜೆಟ್ಟಿನಲ್ಲಿ ಇಟ್ಟಿದ್ದೇವೆ ಎಂದು ಹೇಳಿದ್ದರು, ಮತ್ತೆ ಅದು ರಿಪೀಟ್ ಆಯಿತೋ ಇಲ್ಲವೋ ನಾನು ನೋಡುವುದಕ್ಕೆ ಹೋಗಿಲ್ಲ. ಏಕೆಂದರೆ ನಿಮ್ಮ ಬಜೆಟ್ ಬಗ್ಗೆ ನನಗೆ ವಿಶ್ವಾಸವೇ ಇಲ್ಲ. ವೇಸ್ಟ್ ಪೇಪರ್‌ಗೆ ಕೊಟ್ಟರೆ ಸ್ವಲ್ಪ ದುಡ್ಡು ಬರುತ್ತದೆ ಎನ್ನುವುದನ್ನು ಬಿಟ್ಟರೆ ಬೇರೆ ಪಾವಿತ್ರ್ಯತೆಯೇ ಅದಕ್ಕಿಲ್ಲ. ನಿಮಗೆ ಅದರಲ್ಲಿ ಸೀರಿಯಸ್‌ನೆಸ್ ಇಲ್ಲ. ಮೂರು ವರ್ಷದಿಂದ ಬಜೆಟ್‌ನಲ್ಲಿದೆ, ನಾನು ಹತ್ತಾರು ಸಾರಿ ಹೇಳಿದ್ದೇನೆ. ಕೆಳಗಡೆಯಿಂದ ತಾಲ್ಲೂಕು ಪಂಚಾಯಿತಿ ಸಮಿತಿಯಿಂದ ಹಿಡಿದು ಮಂತ್ರಿಗಳವರೆಗೆ ಹತ್ತು ಸಾರಿ ಹೇಳಿದರೂ ಇದು ಆಗುತ್ತದೆ ಅಥವಾ ಆಗುವುದಿಲ್ಲ ಎಂಬ ಬಗ್ಗೆ ಒಂದು ಚಕಾರವೂ ಇಲ್ಲ. ಆದ್ದರಿಂದ ಈ ಸಾರಿ ಬಜೆಟ್ಟಿನಲ್ಲಿ ಹಾಕಿದ್ದಾರೋ ಬಿಟ್ಟಿದ್ದಾರೋ ಎಂಬುದನ್ನು ನೋಡುವುದಕ್ಕೆ ಹೋಗಲಿಲ್ಲ. ಅದೇನೇ ಆದರೂ ಇದು ಪ್ರಾಮುಖ್ಯವಾದ ವಿಚಾರವಾಗಿರುವುದರಿಂದ ತಾವಾದರೂ (ಮಾನ್ಯ ಅಧ್ಯಕ್ಷರಿಗೆ) ಶ್ರದ್ಧೆವಹಿಸಿ ನಿರ್ದಿಷ್ಟವಾದ ಉತ್ತರವನ್ನು ಸರ್ಕಾರದಿಂದ ಕೊಡಿಸುವ ಕೃಪೆ ಮಾಡಬೇಕು. ನಮ್ಮ ಹತ್ತಿರ ಹಣವಿಲ್ಲ.

ನೀವೇ ಬೇಕಾದರೆ ಜಾಸ್ತಿ ನೀರು ತೆಗೆದುಕೊಳ್ಳಿ. ನಮಗೆ ಅಲ್ಪಸ್ವಲ್ಪ ನೀರು ಕೊಡಿ. ತಾವು ಬೇಕಾದರೆ ಒಂದೂವರೆ ಲಕ್ಷ ಎಕರೆಗೆ ತೆಗೆದುಕೊಳ್ಳಿ, ನಮಗೆ ೪೦-೫೦ ಸಾವಿರ ಎಕರೆಗೆ ಕೊಡಿ. ಅಧಿಕಾರಿಗಳ ಸಭೆ ಕರೆಸಿ ಎಲ್ಲಾ ಫೈಲ್ ತರಿಸಿ. ಅದಕ್ಕೆ ಸಂಬಂಧಪಟ್ಟ ಫೈಲು ಯಾವುದು, ಯಾವುದಲ್ಲ ಎಂಬುದು ನಿಷ್ಕರ್ಷೆಯಾಗಲಿ. ಬಜೆಟ್ ಸೆಷನ್ ಅವಧಿಯಲ್ಲಿ ನೀರಾವರಿ ಸಚಿವರು ವಿಶೇಷವಾದ ಸಭೆಯನ್ನು ಕರೆದು ತೀರ್ಮಾನ ನಮಗೆ ಹೇಳಬೇಕು. ಆಗುವುದಿಲ್ಲ ಎಂದು ಹೇಳುವುದಾದರೆ ಅದನ್ನು ಹೇಳಿ. ಆಗುವುದಿಲ್ಲಪ್ಪ ತಲೆ ಕೆಡಿಸಿಕೊಳ್ಳಬೇಡಿ ಎಂದು ಹೇಳುತ್ತೇವೆ. ಅವರು ಈಗ ಒಂದು ಹೋರಾಟ ಸಮಿತಿಯನ್ನೂ ಕೂಡ ಮಾಡಿಕೊಂಡಿದ್ದಾರೆ. ನಿಮ್ಮಲ್ಲೂ ಕೂಡ ಆ ರೀತಿಯ ಹೋರಾಟ ಸಮಿತಿಯನ್ನು ಮಾಡಿಕೊಂಡಿದ್ದಾರೆ. ಆ ಬಗ್ಗೆ ನನಗೊಂದು ಪಾಂಪ್ಲೆಟ್ಸ್ ಬಂದಿತ್ತು.

ಅಧ್ಯಕ್ಷರು.—ಹೌದು ಮಾಡಿಕೊಂಡಿದ್ದಾರೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಆ ಹೋರಾಟ ಸಮಿತಿಯವರು ಮೊದಲು ನಮ್ಮ ತಲೆಯನ್ನು ಹೊಡೆಯುತ್ತಾರೆ, ಮೊದಲು ನಮ್ಮ ತಲೆಯನ್ನು ಹೊಡೆದು ಆಮೇಲೆ ನಿಮ್ಮ ಹತ್ತಿರ ಬರುತ್ತಾರೆ. ಏಕೆಂದರೆ ಅವರು ಬಂದಾಗ ರಕ್ಷಣೆಗೆ ನಮ್ಮಲ್ಲಿ ಏನೂ ಇಲ್ಲವಲ್ಲಾ, ಆದ್ದರಿಂದ ರಸ್ತೆಯ ಮೇಲೆ ಅವರಿಂದ ಹೊಡೆತ ತಿನ್ನುವಂತಹ ಸ್ಥಿತಿಗೆ ನಮ್ಮನ್ನು ತರದೆ ಇದಕ್ಕೆ ಏನಾದರೊಂದು ಮಾರ್ಗದರ್ಶನ ಸರ್ಕಾರದಿಂದ ಬರಲಿ ಎಂದು ಈ ಸಂದರ್ಭದಲ್ಲಿ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಇದೇ ರೀತಿ ನನ್ನ ಕ್ಷೇತ್ರದ ಬಗ್ಗೆ ಹೇಳುವುದಾದರೆ, ಲಕ್ಕನಕೊಪ್ಪ ಹಾಗೂ ಹುಂಬೈಬೈಲು ಎಂಬ ಗ್ರಾಮಗಳಲ್ಲಿ ಹಿಂದೆ ಭದ್ರಾ ಯೋಜನೆ ಆದಂತಹ ಕಾಲದಲ್ಲಿ ಯಾರು ಮುಳುಗಡೆಯಾದಂತಹ ಜನರು ಇದ್ದಾರೋ ಅವರನ್ನು ೩೦ ವರ್ಷಗಳ ಹಿಂದೆಯೇ ಆ ಜನಗಳನ್ನು ಅಲ್ಲಿಂದ ತಂದು ಈ ಹಳ್ಳಿಗಳಲ್ಲಿ ಸ್ಥಾಪನೆ ಮಾಡಿದರು. ಆಗ ಈ ಹಳ್ಳಿಗಳಲ್ಲಿ ಇವರನ್ನು ಸ್ಥಾಪನೆ ಮಾಡುವಂತಹ ಕಾಲದಲ್ಲಿ ಇಂತಿಂತಹ ಲ್ಯಾಂಡ್ಸ್ ನಿಮ್ಮದು, ಇದನ್ನು ಅಭಿವೃದ್ಧಿ ಮಾಡುವುದಕ್ಕಾಗಿ ಇಂತಿಂತಹ ಯೋಜನೆಗಳನ್ನು ಮಾಡಿದ್ದೇವೆಂದು ೩-೪ ಯೋಜನೆಗಳನ್ನು ಅಧಿಕಾರಿಗಳು ಆಗ ತೋರಿಸಿದರು ಆದರೆ ಇವತ್ತಿನವರೆಗೂ ಆ ಯೋಜನೆಯಲ್ಲಿ ಯಾವುದೊಂದನ್ನೂ ಕಾರ್ಯಗತ ಮಾಡಿಲ್ಲ. ಈ ಜನ ಪ್ರತಿ ವರ್ಷ ಬರಗಾಲಕ್ಕೆ ತುತ್ತಾಗುತ್ತಿದ್ದಾರೆ, ಮಾನ್ಯ ಧರ್ಮಪ್ಪನವರನ್ನು ಅವರು ಬಂದು ಕಾಡಿರಬಹುದು. ಅವರೊಂದು ಪ್ರಶ್ನೆಯನ್ನೂ ಆ ಬಗ್ಗೆ ಕೇಳಿದ್ದಾರೆ. ಅದರಲ್ಲಿ ಸರ್ಕಾರ ಏನು ಉತ್ತರ ಕೊಟ್ಟಿದೆ ಎಂದರೆ ''ಭದ್ರ ಲಿಫ್ಟ್ ಬ್ಯಾಂಕ್ ಕೆನಾಲ್‌ನಿಂದ ಲೂಪ್ ಕೆನಾಲ್ ಕನ್ಸಿಡರೇಷನ್'' ಅಂತ ಹೇಳಿದ್ದಾರೆ. ಕನ್ಸಿಡರೇಷನ್ ಅಂದರೆ ಏನಾಗಬಹುದು ? One fine day, they may say, 'it was considered and rejected' ಕನ್ಸಿಡರೇಷನ್‌ನಲ್ಲಿದೆ ಅಂತ ಹೇಳುವುದಕ್ಕೆ ಶುರು ಮಾಡಿ ೩೦ ವರ್ಷಗಳಾಯಿತು. ಕನ್ಸಿಡರೇಷನ್, ಕನ್ಸಿಡರೇಷನ್ ಅಂದರೆ you must have consideration or those people who are suffering without benefit of irrigation having lost all their property for the sake of the project. ಆದ್ದರಿಂದ ಇದರ ಬಗ್ಗೆ ಕೂಡ ಗಂಭೀರವಾಗಿ ಪರಿಶೀಲನೆಯನ್ನಾದರೂ ಮಾಡಿ ಏನಾದರೊಂದು ಅನುಕೂಲವನ್ನು ಮಾಡಿಕೊಡಬೇಕು. ಆ ಜನರು ಬದುಕುವಂತಹ ಅವಕಾಶವನ್ನು ಮಾಡಿಕೊಡಬೇಕೆಂದು ನಾನು ಸರ್ಕಾರವನ್ನು ಈ ಸಂದರ್ಭದಲ್ಲಿ ಒತ್ತಾಯಪಡಿಸುತ್ತಿದ್ದೇನೆ.

ಇನ್ನು ಮಲೆನಾಡಿನ ಟ್ಯಾಂಕ್ಸ್‌ಗಳ ಬಗ್ಗೆ ಹೇಳುವುದಾದರೆ, ಹಿಂದೆ ಮಲೆನಾಡಿನ ಭಾಗವನ್ನು ನಾನು ಪ್ರತಿನಿಧಿಸುತ್ತಿದ್ದಂತಹ ಕಾಲದಲ್ಲಿ ಸಾಕಷ್ಟು ಸಾರಿ ಈ ಮಾತನ್ನು ಹೇಳಿದ್ದೇನೆ. ಬಜೆಟ್‌ನಲ್ಲಿ ಪ್ರತ್ಯೇಕವಾಗಿ Head for Desilting. ಎಂಬುದಾಗಿ ಇರಬೇಕೆಂದು ಅನೇಕ ಸಲ ಹೇಳಿದ್ದೇನೆ. ಆಗ ಮಾನ್ಯ ಶ್ರೀ ಚನ್ನಬಸಪ್ಪನವರು ಲೋಕೋಪಯೋಗಿ ಹಾಗೂ ನೀರಾವರಿ ಸಚಿವರಾಗಿದ್ದರು, ಅನೇಕ ವರ್ಷಗಳಿಂದ ಇದಕ್ಕಾಗಿ ಯಾವ ಹಣವನ್ನು ಬಜೆಟ್ಟಿನಲ್ಲಿ ಇಡುತ್ತಿರಲಿಲ್ಲ, ೧೯೬೭ರಲ್ಲಿ ನಾನು ಶಾಸಕನಾಗಿದ್ದಾಗ ಇಂದಿನ ಮಾನ್ಯ ಮುಖ್ಯಮಂತ್ರಿಗಳು ಅಂದು ಅರ್ಥ ಸಚಿವರಾಗಿದ್ದರು. ಆಗ for the first time, on an experimental basis, an amount of Rs. 5 lakhs was kept apart exclusively under the Head of Desilting ಆ ಕ್ಷೇತ್ರದ ಶಾಸಕನಾಗಿ ಆ ಬಗ್ಗೆ ಒತ್ತಾಯ ಮಾಡಿದಾಗ, ಶ್ರೀಮಾನ್ ಚನ್ನಬಸಪ್ಪನವರು ಮಲೆನಾಡಿನ ಏರಿಯಾದಲ್ಲಿ ಡೀಸಿಲ್ಟಿಂಗ್ ಮಾಡುವುದಕ್ಕಿಂತ ಹೊಸದಾಗಿ ಕೆರೆಗಳನ್ನೇ ಕಟ್ಟಿಸಬಹುದು ಎಂಬುದಾಗಿ ಹೇಳಿದರು.

ಏಕೆಂದರೆ ಮಲೆನಾಡಿನ ಟ್ಯಾಂಕಿನ ಸ್ವರೂಪ ಅವರಿಗೆ ಚೆನ್ನಾಗಿ ಗೊತ್ತಿತ್ತು. ಏನೇ ಮಾಡಿದರೂ ಅದರಿಂದ ಪ್ರಯೋಜನವಾಗುವುದಿಲ್ಲ, ಕಾರಣ either they are diversion work or percolation tanks. ಬಯಲು ಸೀಮೆಯಲ್ಲಿ ಮಳೆಗಾಲದಲ್ಲಿ ಬರುವಂತಹ ನೀರನ್ನು ನಿಲ್ಲಿಸುವುದಕ್ಕೋಸ್ಕರ ಡೀಸಿಲ್ಟಿಂಗ್ ಮಾಡಿದರೆ ಅನುಕೂಲವಾಗುತ್ತದೆ. ಆಗ ಮಳೆಗಾಲದಲ್ಲಿ ಕೆರೆಯಲ್ಲಿ ನಿಲ್ಲುವಂತಹ ನೀರಿನ ಕೆಪಾಸಿಟಿ ಹೆಚ್ಚಾಗುತ್ತದೆ, ಆದರೆ ಮಲೆನಾಡಿನಲ್ಲಿರತಕ್ಕ ಟ್ಯಾಂಕ್‌ಗಳು ಸ್ಪ್ರಿಂಗ್ ಟ್ಯಾಂಕುಗಳು. ಮಳೆ ನೀರು ಕೆರೆಯಲ್ಲಿ ಹೋಗದಂತೆ ತಡೆಯುವಂತಹ ಡೀಸಿಲ್ಟಿಂಗ್ ಕೆಲಸ ಮಾಡಬೇಕು. ಬಯಲು ಸೀಮೆಯಲ್ಲಿರುವಂತಹ ಕೆರೆಗಳಲ್ಲಿ ಡೀಸಿಲ್ಟಿಂಗ್ ಮಾಡುವ ರೀತಿಯಲ್ಲಿ ಮಲೆನಾಡಿನಲ್ಲಿರುವಂತಹ ಕೆರೆಗಳ ಡೀಸಿಲ್ಟಿಂಗ್ ಮಾಡಿ ಅದರ ಮಣ್ಣನ್ನು ತೆಗೆದು ಏರಿಯ ಮೇಲೆ ಏರಿಸಿಬಿಟ್ಟರೆ, ಮಳೆಗಾಲದಲ್ಲಿರುವಂತಹ ಕೆರೆಯ ಏರಿ ಒಡೆದು ಹೋಗುತ್ತದೆ. ಬೇಸಿಗೆಯ ಕಾಲದಲ್ಲಿ ಕೆರೆಯ ಅಂಗಳ ಸ್ಟೇಡಿಯಂ ಇದ್ದ ಹಾಗೆ ಆಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಲೆನಾಡಿನಲ್ಲಿ ಡೀಸಿಲ್ಟಿಂಗ್ ಮಾಡುವುದು ಪ್ರಯೋಜನ ಇಲ್ಲವೆಂಬ ಅಭಿಪ್ರಾಯ ಹಿಂದೆ ಇತ್ತು. ಆದರೆ ಆ ಅಭಿಪ್ರಾಯ ಈಗ ಬದಲಾವಣೆಯಾಗಿದೆ. ಕಳೆದ ೨-೩ ವರ್ಷಗಳಲ್ಲಿ ಅನೇಕ ಕಡೆ ಬರಗಾಲ ಕಾಮಗಾರಿಗಳಲ್ಲಿ ಡೀಸಿಲ್ಟಿಂಗನ್ನು ಇರಿಗೇಷನ್ ಟ್ಯಾಂಕ್‌ಗಳಲ್ಲೂ ಮಾಡಿದ್ದೇವೆ. ಅದೇ ರೀತಿ ಡ್ರಿಂಕಿಂಗ್ ಟ್ಯಾಂಕ್‌ಗಳಲ್ಲೂ ಮಾಡಿದ್ದೇವೆ. ಅದರಿಂದ ಲಾಭವಾಗಿದೆ. ಮಲೆನಾಡಿನ ಏರಿಯಾದಲ್ಲೂ ಮಾಡಿದ್ದೇವೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಡೀಸಿಲ್ಟಿಂಗನ್ನು ಮೈದಾನ ಪ್ರದೇಶಗಳಲ್ಲಿ ಜನರೇ ಮಾಡಿಕೊಳ್ಳುತ್ತಾರೆ ಕಾರಣ ಕೆರೆಯಲ್ಲಿರುವಂತಹ ಮಣ್ಣು ಬೆಳೆಗೆ ಸಹಾಯಕವಾಗುತ್ತದೆ. ಆದರೆ ನಮ್ಮಲ್ಲಿ ಆ ರೀತಿ ಆಗುವುದಿಲ್ಲ. ಕೆರೆಯಲ್ಲಿರುವಂತಹ ಮಣ್ಣನ್ನು ತೆಗೆದುಕೊಂಡು ಅವರ ಜಮೀನಿನಲ್ಲಿ ಹಾಕಿದರೆ ಅದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಅದರಿಂದ ಇನ್ನು ಹೆಚ್ಚು ಕಳೆ ಬೆಳೆಯುತ್ತದೆ ಅಷ್ಟೇ. ಅದರ ಬಗ್ಗೆ ಮಾನ್ಯ ಶ್ರೀ ಚನ್ನಬಸಪ್ಪನವರು ಏನು ಹೇಳುತ್ತಿದ್ದರು ಎಂದರೆ, ಡೀಸಿಲ್ಟಿಂಗ್ ಮಾಡುವುದಕ್ಕೆ ಬದಲಾಗಿ we can construct new tank ಅಂತ ಹೇಳುತ್ತಿದ್ದರು. ಅದಕ್ಕೆ Alright, you construct a new tank ಅಂತ ಹೇಳಿದ್ದೆ. ಆ ಟ್ಯಾಂಕನ್ನು ಅದೇ ಜಾಗದಲ್ಲಿ ಕಟ್ಟಬೇಕು. ಅದೂ ನ್ಯೂ ಟ್ಯಾಂಕನ್ನು ಕಟ್ಟಬೇಕು ಅಂತ ಹೇಳಿದ್ದೆ. ಬೇರೆ ಜಾಗವೇ ಇಲ್ಲ ಅಲ್ಲಿ. In those places, you construct a new tank. ಅದರ ಡೆಫನಿಷನನ್ನು ಏನು ಬೇಕಾದರೂ ಕರೆದುಕೊಳ್ಳಿ. You call it a new tank but construct it on the same location. ಇದಕ್ಕೆ ಬೇಕಾದಂತಹ ತಾಂತ್ರಿಕ ಜ್ಞಾನವನ್ನು ತರಿಸಿಕೊಳ್ಳಬೇಕಾಗಿದೆ. ಈಗ ನಮ್ಮಲ್ಲಿ ಆ ಬಗ್ಗೆ ಇರುವ ರೀತಿಯಲ್ಲಿ ಪ್ರಯೋಜನವಾಗುವುದಿಲ್ಲ. I understand that there are certain machineries which can be employed for desilting operations ಅಂತಹವುಗಳು ಒಂದೆರಡನ್ನಾದರೂ ತರಿಸಿ. ನಾವು ಫಾಸ್ಟ್ ರಿಗ್‌ಗಳನ್ನು ತರಿಸಲಿಲ್ಲವೇ? ಅದೇ ರೀತಿ ಡೀಸಿಲ್ಟಿಂಗ್‌ಗೆ ಬೇಕಾದ ತಾಂತ್ರಿಕ ಜ್ಞಾನವನ್ನು ಪಡೆದುಕೊಳ್ಳುವುದು ಒಳ್ಳೆಯದು. ನನಗೆ ಅದರ ಪರಿಚಯ ಅಷ್ಟಾಗಿ ಇಲ್ಲ. ಆದರೆ ಮಾನ್ಯ ಮಂತ್ರಿಗಳು ಮನಸ್ಸು ಮಾಡಿದರೆ ಅದರ ವಿವರಗಳನ್ನು ತರಿಸಬಹುದು. ಅಂತಹ ಯಂತ್ರೋಪಕರಣಗಳನ್ನು ದಯಮಾಡಿ ತರಿಸಿ, ಅದಿಲ್ಲದಿದ್ದರೆ, ಬರಗಾಲದಲ್ಲಿ ಯಾವುದೋ ಕೆರೆಯ ಡೀಸಿಲ್ಟಿಂಗ್ ಮಾಡಿ ಅಂತ ಹೇಳಿ ಕೆರೆಯಲ್ಲಿದ್ದಂತಹ ಮಣ್ಣನ್ನು ತೆಗೆದು ಏರಿಯ ಮೇಲೆ ಹಾಕುವುದು, ಮಳೆ ಬಂದಾಗ ಪುನಃ ಆ ಮಣ್ಣು ಕೆರೆಯ ಒಳಗಡೆ ಹೋಗುವುದು ಈ ರೀತಿ ಮಾಡುವುದರಿಂದ ಯಾವುದೇ ಪ್ರಯೋಜನವಾಗುವುದಿಲ್ಲ. ವ್ಯವಸ್ಥಿತವಾದ ಡೀಸಿಲ್ಟಿಂಗ್‌ಗಾಗಿಯೇ ಒಂದು ಯೋಜನೆಯನ್ನು ತಯಾರು ಮಾಡಬೇಕೆಂದು ನಾನು ಸರ್ಕಾರದಲ್ಲಿ ಒತ್ತಾಯ ಮಾಡುತ್ತೇನೆ. ಇನ್ನೊಂದು, ಈ ಪ್ರವಾಹ ನಿಯಂತ್ರಣದ ವಿಚಾರ. ಮಾನ್ಯ ಅಧ್ಯಕ್ಷರೇ. ನನಗೆ ತಿಳಿದ ಮಟ್ಟಿಗೆ ಕೇಂದ್ರ ಸರ್ಕಾರದಲ್ಲಿ ಸಾಕಷ್ಟು ಪ್ರವಾಹ ನಿಯಂತ್ರಣಕ್ಕೆ ಅನುದಾನಗಳು ಇದ್ದಾವೆ. ಇವನ್ನು ನಮ್ಮ ರಾಜ್ಯಕ್ಕೆ ತಂದು ಎಷ್ಟು ಬಳಕೆ ಮಾಡಿದ್ದೀರಿ? ಅದರ ಬಗ್ಗೆ ಚಿತ್ರವನ್ನು ಕೊಟ್ಟರೆ ಬಹಳ ಉಪಕಾರವಾಗುತ್ತದೆ. ನನಗೆ ತಿಳಿದ ಮಟ್ಟಿಗೆ ನಮ್ಮ ರಾಜ್ಯದಲ್ಲಿ ಇದರ ಬಗ್ಗೆ ಗ್ರಾಂಟನ್ನು ನೀವು ಎಲ್ಲೂ ಬಳಕೆ ಮಾಡಿಕೊಂಡಿಲ್ಲ. ಪ್ರವಾಹ ಬಂದಾಗ ರಿಲೀಫ್ ಕೊಡುವುದು ಅಲ್ಲ, ಪ್ರವಾಹವನ್ನು ಕೆಲವು ಕಡೆಯಲ್ಲಿ ಮುಂಚೆಯೇ ಕಾಮಗಾರಿ ಕೆಲಸ ಮಾಡಿದರೆ ತಡೆಯುವುದಕ್ಕೆ ಸಾಧ್ಯವಿದೆ. ಆ ಕೆಲಸವನ್ನು ಮಾಡಿಲ್ಲ. ಮಾನ್ಯ ಉದಾಸಿ ಅವರು ವರದಾ ನದಿಯ ಬಗ್ಗೆ ಹೇಳಿದರು. ಸಾಗರದ ಹತ್ತಿರ

ಹುಟ್ಟುವ ಈ ನದಿ ಅತ್ಯಲ್ಪ ದಾರಿಯಲ್ಲಿ ಇದು ಮಾಡುವ ಅನಾಹುತ ಅಷ್ಟಿಷ್ಟಲ್ಲ. ಒಂದೊಂದು ಸಾರಿ ಬಂದಾಗ ನಮ್ಮ ತಾಲ್ಲೂಕು, ಸೊರಬ ತಾಲ್ಲೂಕು ಎಲ್ಲಾ ತಾಲ್ಲೂಕುಗಳಲ್ಲಿ ಇದರ ಹಾವಳಿ ಇದೆ. Nearly 14 Flood-cum-Irrigation projects have been investigated but none of them have been taken up. ಒಂದು ಕಾಲದಲ್ಲಿ ಎಲ್ಲಾ ಕಡೆ ಇನ್ವೆಸ್ಟಿಗೇಷನ್ ಬೋರ್ಡುಗಳು ಇದ್ದುವು. ಈಗ ಆ ಬೋರ್ಡುಗಳೂ ಕೂಡಾ ಅಲ್ಲಿ ಕಾಣುತ್ತಿಲ್ಲ. ಅವು ಒಂದನ್ನೂ ಕೂಡಾ ಇವತ್ತು ಮಾಡಿಲ್ಲ. ಈ ನದಿಯ ಉಪಯೋಗ ಆಗಿಲ್ಲ. ಪ್ರವಾಹದ ನಿಯಂತ್ರಣ ಆಗಿಲ್ಲ. ಶಿವಮೊಗ್ಗದಲ್ಲಿ ತುಂಗಾ ನದಿಯ ಪ್ರವಾಹಕ್ಕೆ ನಗರದ ಲೆಯಿಂಗ್ ಏರಿಯಾದ ಸಾವಿರಾರು ಜನರು ತುತ್ತಾಗಿ ನಿರ್ಗತಿಕರಾಗುತ್ತಾರೆ. ನಾಲ್ಕೈದು ವರ್ಷಗಳ ಕೆಳಗೆ ಇದು ಆಗಿತ್ತು. ಮತ್ತೆ ಒಂದು ಸಾರಿ ಈ ಪರಿಸ್ಥಿತಿ ಬರುವುದಿದ್ದು ಸಧ್ಯಕ್ಕೆ ಅದು ತಪ್ಪಿಹೋಯಿತು. ಏಕೆಂದರೆ, ನದಿಯು ಶಿವಮೊಗ್ಗ ಪಕ್ಕದಲ್ಲೇ ಹರಿದು ಕಾಲ ಉರುಳಿದಂತೆ ನದಿಯು ದಂಡೆಯನ್ನೆಲ್ಲಾ ಕೊರೆದು ಬಿಟ್ಟಿದೆ. ಆದ್ದರಿಂದ ನದಿಗೆ ದಂಡೆಯೇ ಇಲ್ಲ. ಇದರಿಂದಾಗಿ ಸ್ವಲ್ಪ ನೀರು ಬಂದರೂ ಕೂಡಾ ನೀರು ಊರಿಗೆ ಹರಿಯುತ್ತದೆ. ಇದನ್ನು ತಪ್ಪಿಸಲು it would be a very befitting work under the flood control scheme. ಈ ಬಗ್ಗೆ ನಾವು ಹಲವಾರು ಬಾರಿ ಪ್ರಸ್ತಾಪ ಮಾಡಿದ್ದೇವೆ, ಶಿವಮೊಗ್ಗ ನಗರದ ಒಳಗೆ ತುಂಗಾ ನದಿ ಏನು ಹರಿಯುತ್ತಿದೆ ಅದರ ಎರಡೂ ಕಡೆ ರಿವಿಟ್‌ಮೆಂಟ್ ಮಾಡಿ ಸಾವಿರಾರು ಎಕರೆ ಜಮೀನು ಉಳಿಸಬಹುದು, ಶಿವಮೊಗ್ಗ ನಗರದಲ್ಲಿ ಪ್ರವಾಹ ಕಾಲದಲ್ಲಿ ಆಗತಕ್ಕ ಅನಾಹುತವನ್ನು ತಪ್ಪಿಸಬಹುದು. ಅದಕ್ಕೆ ಸೂಕ್ತವಾದ ಪ್ರಪೋಸಲ್ ಮಾಡಿದರೆ ಕೇಂದ್ರ ಸರ್ಕಾರದಿಂದ ಕೂಡಾ ನೆರವು ಸಿಕ್ಕುತ್ತದೆನ್ನುವ ಭಾವನೆ ಇದೆ. ಆದುದರಿಂದ ಇದರ ಬಗ್ಗೆ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಈ ಬಗ್ಗೆ ಮಾನ್ಯ ಸಚಿವರಲ್ಲಿ ಯಾವ ಕಡತದಲ್ಲೂ ಇದ್ದ ಹಾಗೆ ಕಾಣುತ್ತಾ ಇಲ್ಲ. ಈ ಬಗ್ಗೆ ನೀವು ಮಾಹಿತಿ ಕೇಳಿದರೆ ಸಿಕ್ಕಬಹುದು, ನಾನು ಕೇಳಿದರೆ ಮಾಹಿತಿ ಸಿಗಲಿಲ್ಲ. ಆದ್ದರಿಂದ ಹಿಂದಿನ ಪ್ರಪೋಸಲ್ ಏನಿದೆ ಅದರ ಬಗ್ಗೆ ಗಮನಹರಿಸಬೇಕೆಂದು ನಾನು ಒತ್ತಾಯಿಸುತ್ತೇನೆ. ಇನ್ನು ನೀರಾವರಿ ವಿಷಯ ಬಿಟ್ಟು ರೆವಿನ್ಯೂ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿ ನನ್ನ ಮಾತುಗಳನು ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ರೆವಿನ್ಯೂ ಬಗ್ಗೆ ನನಗೆ ತಿಳಿದಿರುವ ಹಾಗೆ, ಬೇರೆ ಎಲ್ಲವೂ ಸರ್ಕಾರದಲ್ಲಿ ಡಿಪಾರ್ಟ್‌ಮೆಂಟ್‌ಗಳು, ರೆವಿನ್ಯೂ ಎಂದರೆ ಸರ್ಕಾರ ಎನ್ನುವ ಭಾವನೆ ಮೊದಲಿನಿಂದಲೂ ಇತ್ತು. ಬೇರೆಯವೆಲ್ಲಾ ''ಇಲಾಖೆಗಳಾದರೆ'',ರೆವಿನ್ಯೂ ಎಂದರೆ ಅದೇ ''ಸರ್ಕಾರ'' ಎನ್ನತಕ್ಕ ಭಾವನೆ ಹಿಂದಿನಕಾಲದಲ್ಲಿತ್ತು. ಈಗ ಏನಾಗಿದೆ ? ಬರೀ ಇಲಾಖೆಗಳೇ ಇವೆ. ಸರ್ಕಾರ ಎಲ್ಲೂ ಇಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಎಲ್ಲಾ ಹಂಚಿಹೋಗಿವೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಯಾವುದು ಸರ್ಕಾರ ? The Deputy Commissioner feels that he is not the Government. Similarly, the Thasildar also feels that he is not the Government. ಉಳಿದಿರುವವರಂತೂ ಅಲ್ಲವೇ ಅಲ್ಲ. ಅವರವರು ಅವರವರದ್ದೇ ಸಾಮ್ರಾಜ್ಯದಲ್ಲಿದ್ದಾರೆ, ಪೋಲೀಸಿನವರದ್ದೇ ಒಂದು ಸಾಮ್ರಾಜ್ಯ, ಇರಿಗೇಷನ್‌ದೇ ಒಂದು ಸಾಮ್ರಾಜ್ಯ. ಎಲ್ಲವೂ ಇಲಾಖೆಗಳಲಾದವೇ ಹೊರತು ಸರ್ಕಾರ ಇಲ್ಲ ಎನ್ನುವ, ಎಲ್ಲಿದೆ ಎನ್ನುವ ಪರಿಸ್ಥಿತಿ ಆಗಿದೆ. ಹೀಗೆ ರೆವಿನ್ಯೂ ಇಲಾಖೆಯ ಅಥಾರಿಟಿ ಇನ್ನೂ deplete ಆಗುತ್ತಾ ಹೋಗಿದೆ. ಎಲ್ಲಿಯವರೆಗೆ ಸರ್ಕಾರ ಎನ್ನುವ ವ್ಯವಸ್ಥೆ ತಾಲ್ಲೂಕು ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಇರುತ್ತದೆಯೋ ಅಲ್ಲಿಯವರೆಗೆ ಸರ್ಕಾರವನ್ನು ಪ್ರತಿನಿಧಿಸತಕ್ಕ ಒಂದು ಇಲಾಖೆ ಇರಬೇಕು. ಏನಾದರೂ ಸಂದರ್ಭ ಬಂದರೆ ಬೇರೆ ಡಿಪಾರ್ಟ್‌ಮೆಂಟಿನವರಿಗೆ ಸ್ವಲ್ಪ ಸುಮ್ಮನೆ ಇರ್ರೀ ಎನ್ನುವ ಹಾಗೆ ಇರಬೇಕು. ಒಂದು ರೀತಿಯ ಕೋ ಆರ್ಡಿನೇಷನ್ ಇರಬೇಕು. ಜಿಲ್ಲಾಪರಿಷತ್ತುಗಳು ಆಗುವವರೆಗೆ ಡೆಪ್ಯುಟಿ ಕಮೀಷನರ್‌ರವರಿಗೆ ಒಂದು ಸ್ಥೈರ್ಯ ಇತ್ತು. ಆದರೆ ಇವತ್ತು ಅವರಲ್ಲೂ ಕೂಡಾ ಧೈರ್ಯ ಹೋಗಿದೆ, ಸರ್ಕಾರವನ್ನು ಪ್ರತಿನಿಧಿಸುವ ಈ ಒಂದು ಇಲಾಖೆಗೇ ದುಃಸ್ಥಿತಿ ಬಂದಿದೆ. ಕಂದಾಯ ಇಲಾಖೆಯ ಬಗ್ಗೆ ತಾವು ಸ್ವಲ್ಪ ಹೆಚ್ಚು ಗಮನಹರಿಸಬೇಕು.

೩-೩೦ ಪಿ. ಎಂ.

ಅಂದಾಜು ಸಮಿತಿಯವರು ಕಂದಾಯ ಇಲಾಖೆಯ ಬಗ್ಗೆ ಅಭ್ಯಾಸ ಮಾಡಿ ಕೆಲವು ಶಿಫಾರಸ್ಸುಗಳನ್ನು ಮಾಡಿದ್ದಾರೆ. ಅದರಲ್ಲಿ ಒಂದು ಶಿಫಾರಸ್ಸು ಈ ರೀತಿ ಇದೆ.

"Considering all the factors the Committee recommend for restructruing of Revenue Department. The Committee opine that there is need for a change in the basic role of the Revenue Department. The nomenclature of the Department requires a change from Revenue Department to "Revenue Department and District Administration". After the formation of Zilla Parishads and Mandal Panchayats, Revenue Administration at the district level and Taluk level is changing due to the decentralisation of power. In this context co-ordination and implementation of the activities both administrative and developmental activities become imperative. In such cases there is necessity to change the functions of the various functionaries of the Revenue Department."

ಅಂತ ಹೇಳಿದ್ದಾರೆ. ಹಾಗೆಯೇ ಅವರು ಸ್ಟ್ರಕ್ಚರ್‌ನಲ್ಲಿ ಚೇಂಜ್ ಮಾಡುವುದಕ್ಕೆ ಹಲವಾರು ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಈಗ ಅಸಿಸ್ಟೆಂಟ್ ಕಮಿಷನ್‌ರವರುಗಳಿಗೆ ಯಾವುದೂ ಉಳಿದಿಲ್ಲ. ಸುಮ್ಮನೆ ಪೋಷ್ಟ್ ಆಫೀಸಲ್ಲಿನಂತಿದ್ದರೆ ಅವರನ್ನು ತೆಗೆದುಹಾಕಿ ತಹಶೀಲ್ದಾರರನ್ನು ಅಸಿಸ್ಟೆಂಟ್ ಕಮೀಷನ್ನರನ್ನಾಗಿ ಮಾಡಿ ಅವರಿಗೆ ಒಂದು ಸ್ಟ್ರಕಚರ್‌ಲ್ ಪವರ್ ಕೊಟ್ಟರೆ ಅನುಕೂಲವಾಗುತ್ತದೆಂದು ಹೇಳಿದ್ದಾರೆ. ಇನ್ನು ಹಲವಾರು ಬಹಳ ಅಮೂಲ್ಯವಾದ ಸಲಹೆಗಳನ್ನು ಮಾಡಿದ್ದಾರೆ. I cmpliment the Chairman and Members of the Estimates Committee for the indepth study they have made on these aspects. ಅದನ್ನು ಗಮನಕ್ಕೆ ತೆಗೆದುಕೊಂಡು ರೇವಿನ್ಯೂ, ಡಿಪಾರ್ಟ್‌ಮೆಂಟಿಗೆ ಬಂದು ಹೊಸ ಚಾಲನೆಯನ್ನು ರೂಪವನ್ನು ಸ್ಟ್ರಕ್ಚರ್ ಅನ್ನು ನೀವು ಕ್ರಿಯೇಟ್ ಮಾಡಬೇಕೆಂದು ಈ ಸಂದರ್ಭದಲ್ಲಿ ಸರ್ಕಾರವನ್ನು ಒತ್ತಾಯಿಸುತ್ತೇನೆ. ಭೂ ಸುಧಾರಣೆಯ ವಿಷಯದಲ್ಲಿ ಹಲವಾರು ವಿಷಯಗಳನ್ನು ಎತ್ತಿದ್ದೇನೆ. ತಾಂತ್ರಿಕ ದೋಷದಿಂದ ಭೂ ನ್ಯಾಯ ಮಂಡಳಿಗಳಲ್ಲಿ ಅನ್ಯಾಯದಿಂದ ಗೇಣಿದಾರರ ಅರ್ಜಿಯನ್ನು ವಜಾ ಮಾಡಿದ ಪ್ರಕರಣಗಳಲ್ಲಿ ಸರ್ಕಾರದವರು ಗೇಣೀದಾರರ ಪರವಾಗಿ ರಿಟ್ ಅರ್ಜಿಯನ್ನು ಸಲ್ಲಿಸಲು ಸರ್ಕಾರೀ ಆದೇಶವನ್ನು ದಿನಾಂಕ ೨೯-೪-೧೯೮೫ ರಲ್ಲಿ ಹೊರಡಿಸಿರುವುದು ನಿಜ. ಈ ಪ್ರಕಾರವಾಗಿ ಡೆಪ್ಯೂಟಿ ಕಮಿಷನರ್‌ವರ ಮಟ್ಟದಿಂದ ಶಿಫಾರಸ್ಸು ಆಗಿ ಬಂದಂಥ ೩೨೦೦೦ ಪ್ರಕರಣಗಳು ಜಿಲ್ಲಾಧಿಕಾರಿಗಳ ಮಟ್ಟದಿಂದ ಗೇಣಿದಾರನು ರಿಟ್ ಅರ್ಜಿಯನ್ನು ಹಾಕುವುದು ಸೂಕ್ತವೆಂದು ತೀರ್ಮಾನಕ್ಕೆ ಸರ್ಕಾರ ಬಂತು. ಅದು ಬಂದಾಗಿನಿಂದ ಸರ್ಕಾರದಲ್ಲಿ ಕೊಳೆಯುತ್ತಿದೆಯೇ ಹೊರತು ಅದರಲ್ಲಿ ೨೫೦ ಪ್ರಕರಣಗಳಲ್ಲಿ ಮಾತ್ರ ಸರ್ಕಾರದವರು ರಿಟ್ ಅರ್ಜಿಯನ್ನು ಹಾಕಿದ್ದಾರೆ. ಇನ್ನು ಉಳಿದಿರತಕ್ಕದರಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಿಲ್ಲ. ಈ ಬಗ್ಗೆ ನಾನು ಸರ್ಕಾರವನ್ನು ಒತ್ತಾಯ ಮಾಡಿದಾಗ ಕಂದಾಯ ಸಚಿವರು ಇದು ಹೌದು ಇದರಿಂದ ನನಗೆ ಬೇಸರವಾಗಿದೆ. ನಾನು ಇದರ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದರು. ಕ್ರಮ ತೆಗೆದುಕೊಂಡಿದ್ದರೆ, ಇವರಿಂದ ನನಗೂ ಸಂತೋಷ. ಅದನ್ನು ತಾವು ಹೇಳಿದರೆ ಜಗತ್ತಿಗೂ ಗೊತ್ತಾಗುತ್ತದೆ. ಇಲ್ಲದಿದ್ದರೆ ನೀವು ಏನು ಮಾಡಿಲ್ಲವೆಂದು ತಿಳುವಳಿಕೆಗೆ ಬರಬೇಕಾಗಿರುವುದು ಈ ಸಂದರ್ಭದಲ್ಲಿ ಅನಿವಾರ್ಯವೆಂದು ಹೇಳಬಯಸುತ್ತೇನೆ. ಇನ್ನು ಅಪಿಲೇಟ್ ಟ್ರಿಬ್ಯೂನಲ್ ಮಾಡುವಾಗ ನಮ್ಮ ಭಾವನೆನ್ನೆಲ್ಲಾ ಹೇಳಿದ್ದೆವು ನ್ಯಾಯ ಆಗುತ್ತದೋ ಅನ್ಯಾಯವಾಗುತ್ತದೋ ಹೇಳುವುದಕಷ್ಟ. ನಾವು ಮಾಡಿರುವ ಸ್ಕೀಮಿಗೆ ತದ್ವಿರುದ್ಧವಾಗಿ ತೀರ್ಮಾನ ಆಗಬಹುದು. ಆಗ ಸರ್ಕಾರದ ಪರವಾಗಿ ಮಾನ್ಯ ಕಂದಾಯ ಸಚಿವರು ಒಪ್ಪಿಕೊಂಡಿರು. ಇದು ರಚನೆಯಾದಮೇಲೆ ಇದರ ಕಾರ್ಯ ವೈಖರಿಗಳು ಹೇಗೆ ನಡೆಯುತ್ತದೆಂದು ನೋಡಿಕೊಳ್ಳೋಣ, ಆನಂತರ ಯಾವುದಾದರೂ

ಬದಲಾವಣೆ ಇದ್ದರೆ ಮಾಡುತ್ತೇವೆಂದು ಹೇಳಿದರು. ನಾನು ಇತ್ತೀಚೆಗೆ ಒಂದು ಪ್ರಶ್ನೆಯನ್ನು ಎಷ್ಟು ಪ್ರಕರಣಗಳು ಅಪಿಲೇಟ್ ಟ್ರಿಬ್ಯೂನಲ್ ಮುಂದೆ ದಾಖಲಾತಿಯಾಗಿದೆ. ಅದರಲ್ಲಿ ಎಷ್ಟು ತೀರ್ಮಾನವಾಗಿದೆ. ಎಷ್ಟು ಗೇಣಿದಾರರ ಪರವಾಗಿ ಆಗಿದೆ. ಎಷ್ಟು ಗೇಣಿದಾರರ ವಿರೋಧವಾಗಿದೆ ಎಂದು ಕೇಳಿದ್ದೆ. ತಾವು ಇದರ ಬಗ್ಗೆ ಅಂಕಿ ಅಂಶಗಳನ್ನು ಕೊಟ್ಟಿದ್ದೀರಿ. ಒಟ್ಟು ೨೪೭೭೭ ಪ್ರಕರಣಗಳು ದಾಖಲಾತಿಯಾಗಿದೆ. ಇದರಲ್ಲಿ ೫೫೭೩ ತೀರ್ಮಾನವಾಗಿದೆ. ೧೪೯೭ ಪ್ರಕರಣಗಳು ಗೇಣಿದಾರರ ಪರವಾಗಿ ಆಗಿದೆ. ೧೩.೨೦ ಗೇಣಿದಾರರ ವಿರೋಧವಾಗಿದೆ. ಹೆಚ್ಚು ಕಡಿಮೆ ೫೦/೫೦ ಆಗಿದೆಯೆಂದು ಅಭಿಪ್ರಾಯ ಕೊಟ್ಟಿದ್ದೀರಿ, ಇದು ಒಂದು ಸಮರ್ಪಕವಾದ ಸ್ಥಿತಿಯನ್ನು ತೋರಿಸುತ್ತದೆ. ತಾವು ತಾಲ್ಲೂಕಿನಲ್ಲಿ ಲ್ಯಾಂಡ್ ಟ್ರಿಬ್ಯೂನಲ್ ಮಾಡಿದಾಗ ಮಾಸ್ತ್ರಾವಾಂಶಗಳನ್ನು ಅವರು ಮನಗಂಡು ನಾವು We trusted them. ನೀವು ಎವಿಡೆನ್ಸ್ ಯಾವ ತರ ಇದೆ ಎಂಬುದರ ಬಗ್ಗೆ ತಲೆಕೆಡಿಸಿಕೊಳ್ಳದೆ, ನಿಮ್ಮ ಆತ್ಮದಲ್ಲಿ ಯಾವ ರೀತಿ ಸತ್ಯವೆನ್ನುತ್ತದೆ, ಆ ರೀತಿ ತೀರ್ಮಾನ ಮಾಡಿಕೊಂಡಿದ್ದೀರಿ. ಆಗ ಅಲ್ಲಿ ಲಾಯರ್‌ಗಳು ಬರುತ್ತಾರೆ, ವಾದವಿವಾದಗಳು ಆಗುತ್ತದೆ. ಎವಿಡೆನ್ಸ್ ಆಕ್ಟ್ ಬರುತ್ತದೆ. ಸಿವಿಲ್ ಪ್ರೊಸೀಜರ್ ಕೋಡ್ ಬರುತ್ತದೆ. ಸಹಜವಾಗಿ ನಿಮ್ಮ ಟ್ರಿಬ್ಯೂನಲ್ಲಿ ಆಗಿರತಕ್ಕ ತೀರ್ಮಾನಗಳು ಯಾವ ರೀತಿ ಉರ್ಜಿತವಾಗುವುದಕ್ಕೆ ಸಾಧ್ಯವೆಂದು ನನಗೆ ಅರ್ಥವಾಗುವುದಿಲ್ಲ. ಇದು ನಿಮ್ಮ ದರ್ಬಾರು.

ಶ್ರೀ ಎಸ್. ಆರ್. ಬೊಮ್ಮಾಯಿ. ನಮ್ಮ ದರ್ಬಾರು ಅಲ್ಲ. ಟ್ರಿಬ್ಯೂನಲ್‌ಗಳಿಗೆ ನ್ಯಾಯಕ್ಕೋಸ್ಕರ ಹೋಗುತ್ತಾರೆ. ಮೊದಲಿನಿಂದಲೂ ಅಂಕಿಅಂಶಗಳನ್ನು ತೆಗೆದು ನೋಡಿದರೆ ನಮಗೆ ಗೊತ್ತಾಗುತ್ತದೆ. ಲ್ಯಾಂಡ್ ಟ್ರಿಬ್ಯೂನಲ್ ಬಂದಮೇಲೆ ಸುಮಾರು ೯ ಲಕ್ಷ ಅರ್ಜಿಗಳು ತೀರ್ಮಾನವಾಗಿವೆ. ಇತ್ತೀಚೆಗೆ ಬಹಳ ಕಡಿಮೆ ಕೇಸುಗಳು ಉಳಿದಿವೆ. 45% of the applications of the tenants have been rejected by the Tribunals.

ಶ್ರೀ ಬಿ. ಬಸವಲಿಂಗಪ್ಪ.—ಗೇಣಿದಾರರ ಅರ್ಜಿಗಳನ್ನು ರಿಜೆಕ್ಟ್ ಮಾಡಿದ್ದಾರೆ. ಅವುಗಳು ಮಾತ್ರ ಅಪಿಲೇಟ್ ಅಥಾರಿಟಿಗೆ ಹೋಗುವಂತೆ ಮಾಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಹೇಳುವುದು ಟ್ರಿಬ್ಯೂನಲ್‌ನಲ್ಲಿ ಕೂಡ ಗೇಣಿದಾರರ ಪರವಾಗಿ ಆದದ್ದು ಇದೆ. 55% of the total applications have been decided in favour of the tenants and 45% of the applications have been decided against the tenants. This is the postion from inception.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಪ್ರಪೋರ್ಷನ್ ಮೈಂಟೇನ್ ಮಾಡುತ್ತಿದ್ದೇವೆಂದರೆ. I am not bothered about the Bill. 1 only quoted it for information.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಪಿಲೇಟ್ ಟ್ರಿಬ್ಯೂನಲ್‌ನಲ್ಲಿ ಕೂಡ ಗೇಣಿದಾರರ ಪರವಾಗಿ ಆದಂತಹ ನಿದರ್ಶನಗಳು ಇವೆ. It depends on the Land Tribunal, its composition, members and their commitment.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನನಗನಿಸುತ್ತದೆ ಸುಮಾರು ೮ ಲಕ್ಷದ ೨೭ ಸಾವಿರ ಒಟ್ಟು ಅರ್ಜಿಗಳು. ಅವುಗಳಲ್ಲಿ ಕೆಲವು ಅರ್ಜಿಗಳು ರಿಜೆಕ್ಟ್ ಆಗಿವೆ. ಡೂಪ್ಲಿಕೇಟ್ ಅರ್ಜಿಗಳು ರಿಜೆಕ್ಟ್ ಆಗಿವೆ. ಶೇಕಡ ೪೫ ಅಥವಾ ೫೦ ರಷ್ಟು ಗೇಣಿದಾರರ ಪರವಾಗಿ ಆಗಿವೆ. ಡೂಪ್ಲಿಕೇಟ್ ಅಂದರೆ ಅಣ್ಣ ತಮ್ಮಂದಿರು ಒಂದೇ ಭೂಮಿಗೆ ಅರ್ಜಿ ಹಾಕಿರುವುದು ಮೂರ್ನಾಲ್ಕು ಮಂದಿ ಅರ್ಜಿ ಹಾಕಿರುವುದು ಭೂ ಮಾಲೀಕರ ಗೇಣಿದಾರರ ಸಂಬಂಧಿಕರು ಅರ್ಜಿ ಹಾಕಿರುವುದು ಇಂತಹವು ಸುಮಾರು ೨೦-೩೦ ಸಾವಿರ ಅರ್ಜಿಗಳು ರಿಜೆಕ್ಟ್ ಆಗಿರಬಹುದು. ತಾವು ಹೇಳಿದ ಪ್ರಕಾರ ಶೇಕಡ ೬೦ ರಷ್ಟು ಗೇಣಿದಾರರ ವಿರುದ್ಧವಾಗಿ ಆಗಿಲ್ಲ.

ಶ್ರೀ ಎಸ್.ಆರ್. ಬೊಮ್ಮಾಯಿ.—ನಾನು ಉತ್ತರ ಕೊಡುವಾಗ ಹೇಳುತ್ತೇನೆ. ಟ್ರಿಬ್ಯೂನಲ್‌ಗಳಲ್ಲೂ ಕೂಡ ಯಾವ್ಯಾವ ರೀತಿ ತೀರ್ಮಾನಗಳು ಆಗಿವೆ, ಅಲ್ಲಿ ಯಾವ್ಯಾವ ಜನರಿದ್ದಾರೆ ಅದರ ಮೇಲೆ ಹೋಗಿದೆ. ಅನೇಕ ಸಲ ಆ ತರಹ ಆಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ದಕ್ಷಿಣ ಕನ್ನಡ, ಉತ್ತರ ಕನ್ನಡ ಹಾಗೂ ಶಿವಮೊಗ್ಗ ಈ ಮೂರು ಜಿಲ್ಲೆಗಳನ್ನು ಬಿಟ್ಟರೆ ಬೇರೆ ಜಿಲ್ಲೆಗಳಲ್ಲಿ ಗೇಣಿದಾರರ ಸಂಖ್ಯೆ ಬಹಳ ಕಡಿಮೆಯಿದೆ. ಮೂರು

ಜಿಲ್ಲೆಗಳಲ್ಲಿ ಶೇಕಡ ೫೦ರಷ್ಟು ಗೇಣಿದಾರರು ಇದ್ದಾರೆ. ಉಳಿದ ಜಿಲ್ಲೆಗಳಲ್ಲಿ ಶೇಕಡ ೫೦ರಷ್ಟು ಗೇಣಿದಾರರು ಬರಬಹುದು.

ಶ್ರೀ ಕೆ.ಹೆಚ್. ಶ್ರೀನಿವಾಸ್.—ನಾನು ಹೇಳಲಿಕ್ಕೆ ಬಯಸುವುದು ಇಷ್ಟೆ, ತಾವೇನು ಅಂಕಿಸಂಖ್ಯೆಗಳನ್ನು ಕೊಟ್ಟಿದ್ದೀರಿ ಇದನ್ನು ನೀವು ಸರ್ಕಾರದಿಂದ ಕೊಟ್ಟಿದ್ದೀರಿ. ನಾನು ತಕ್ಷಣ ಇದು ಸರಿಯಿಲ್ಲವೆಂದು ಹೇಳುವುದಕ್ಕೆ ನನ್ನ ಹತ್ತಿರ ಆಧಾರವಿಲ್ಲ,

ಶ್ರೀ ಎಸ್ ಆರ್. ಬೊಮ್ಮಾಯಿ.—ಜಡ್ಜ್‌ಮೆಂಟ್‌ಗಳನ್ನು ತರಿಸಿ ಇದು ಏತಕ್ಕೆ ಆಗಿದೆ ಏನಾಗಿದೆ ಎಂಬುದನ್ನು ರಿವ್ಯೂ ಮಾಡುತ್ತಿದ್ದೇವೆ,

ಶ್ರೀ ಕೆ.ಹೆಚ್. ಶ್ರೀನಿವಾಸ್.—ಆ ರೀತಿ ಮಾಡುತ್ತೇವೆಂದು ತಾವು ಹೇಳುತ್ತೀರಿ, ಒಂದು ಮಾತನ್ನು ಹೇಳುತ್ತೇನೆ ಇನ್ನು ಕೆಲವು ತೀರ್ಮಾನವಾಗಬೇಕಾದ ಕೇಸುಗಳು ಇವೆ, ತೀರ್ಮಾನವಾಗಬೇಕಾದ ಕೇಸುಗಳು ೨೪ ಸಾವಿರದಲ್ಲಿ ಕೇವಲ ೫ ಸಾವಿರ ಮಾತ್ರ ತೀರ್ಮಾನವಾಗಿವೆ. ಒಂದು ಕಾಲು ಮಾಡಿದ್ದೀರಿ, ಎರಡು ಜಡ್ಜ್‌ಮೆಂಟ್‌ಗಳ ಡಿಸ್‌ಪ್ಯೂಟ್ ಪಾಯಿಂಟ್ ಆದರಲ್ಲೂ ಅನೇಕ ಕೇಸುಗಳು ಈ ತರಹ ಕುಳಿತಿದ್ದಾವೆಂದು ನನ್ನ ಭಾವನೆ. ಇನ್ನು ಕೆಲವು ತಾಲ್ಲೂಕುಗಳಲ್ಲಿ ಮಾನ್ಯ ಖರ್ಗೆಯವರು ಹೇಳಿದಹಾಗೆ ಅವರ ತಾಲ್ಲೂಕಿನಲ್ಲಿಯೇ ಅಪಲೇಟ್ ಟ್ರಿಬ್ಯೂನಲ್‌ಗೆ ಹೋದ ಕೇಸುಗಳಲ್ಲಿ ಶೇಕಡ ೯೦ರಷ್ಟು ಕೇಸುಗಳು ಗೇಣಿದಾರರ ವಿರುದ್ಧವಾಗಿವೆ ಎಂದು ಹೇಳುತ್ತಿದ್ದರು, ಅಲ್ಲಿಯೂ ಕೂಡ ಶೇಕಡ ೯೦ರಷ್ಟು ಕೇಸುಗಳು ಗೇಣಿದಾರರ ವಿರುದ್ಧವಾಗಿವೆ ಎನ್ನುವ ಭಾವನೆಯಿದೆ. ಅಂಕಿಸಂಖ್ಯೆಗಳು ಸರಿಯಾಗಿಲ್ಲವೆಂದರೆ ಬಹಳ ಸಂತೋಷ. ಅದರ ಮೇಲೆ ಕಣ್ಣಿಟ್ಟು ನೋಡುತ್ತೇವೆ ಅದನ್ನು ಬಿಟ್ಟು ಬಿಡುವುದಿಲ್ಲವೆನ್ನುವ ಭರವಸೆಯನ್ನು ಕೊಟ್ಟಿದ್ದೀರಿ. ಸರ್ಕಾರ ಅದರ ಪ್ರಕಾರ ಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಒತ್ತಾಯಿಸುತ್ತೇನೆ. ಅದೇರೀತಿ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರ ಭೂಮಿ ಪರಭಾರೆಯಾಗಿದ್ದರೆ ಆ ಭೂಮಿಯನ್ನು ವಾಪಸ್ಸು ಕೊಡಿಸುವ ವಿಚಾರದಲ್ಲಿ ಒಟ್ಟು ಎಷ್ಟು ಅರ್ಜಿಗಳು ಬಂದಿವೆ ಎಂದು ನಾನು ಪ್ರಶ್ನೆಯನ್ನು ಕೇಳಿದ್ದಕ್ಕೆ ಉತ್ತರವಾಗಿ ೧೧,೩೫೦ ಅರ್ಜಿಗಳನ್ನು ಹಾಕಿದ್ದರು ಅದರಲ್ಲಿ ಒಟ್ಟು ೩೩,೯೯೭ ಎಕರೆ ೧೦ ಗುಂಟೆ ಪರಭಾರೆಯಾಗಿದೆಯೆಂದು ತಿಳಿಸಿದ್ದಾರೆ ಇದರಲ್ಲಿ ನಾವು ಯಾರಿಗೆ ಸಹಾಯ ಮಾಡಬೇಕೆಂದಿದ್ದೇವೆ ಅವರು ತುಂಬಾ ನಿಸ್ಸಹಾಯಕ ಸ್ಥಿತಿಯಲ್ಲಿದ್ದಾರೆ ಅವರ ಹತ್ತಿರ ಆಡಳಿತ ಯಂತ್ರ ಹೋಗಿ ಕೆಲಸಮಾಡಬೇಕು. ಅವರು ಬಂದು ನಿಮ್ಮ ಹತ್ತಿರ ಹೇಳತಕ್ಕ ಶಕ್ತಿಯಿಲ್ಲ. ಇವತ್ತು ಏನಾಗಿದೆ ಅಂದರೆ ಋಣ ವಿಮೋಚನೆ ಮಾಡಲಿಕ್ಕೆ ಅಸಿಸ್ಟೆಂಟ್ ಕಮಿಷನರ್‌ಗಳಿಗೆ ಜವಾಬ್ದಾರಿಯನ್ನು ವಹಿಸಿದ್ದೀರಿ ಋಣ ವಿಮೋಚನೆ ಮಾಡತಕ್ಕ ಕಾನೂನನ್ನು ಅವರು ಜಾರಿಗೆ ಕೊಡುತ್ತಿಲ್ಲ, ಅದರ ಬಗ್ಗೆ ಅವರು ಆಸಕ್ತಿ ವಹಿಸುತ್ತಿಲ್ಲ ಆ ಕಾನೂನು ಜಾರಿಗೆ ಬರಲಿಲ್ಲ. ಎಲ್ಲಿ ವಹಿಸಲಿಲ್ಲವೋ ಅಲ್ಲಿ ಆಗಲಿಲ್ಲ ಯಾವುದೇ ಸಾಮಾಜಿಕ ನ್ಯಾಯದ ಪರವಾಗಿ ಇರತಕ್ಕಂಥ ಮಸೂದೆ ತನ್ನಷ್ಟಕ್ಕೇ ತಾನೇ ಪಾಸ್ ಮಾಡಿದ ಕೂಡಲೇ ಅದಕ್ಕೆ ಜೀವ ಬರುವುದಿಲ್ಲ. ಅದಕ್ಕೆ ಸರ್ಕಾರದ ಆಡಳಿತ ಯಂತ್ರವೇ ಜೀವವನ್ನು ಕೊಡಬೇಕು. ನನಗೆ ತಿಳಿದ ಮಟ್ಟಿಗೆ ಇದಕ್ಕೆ ಕಾರಣ ಏನು ? ಸರ್ಕಾರ ಮನಸ್ಸಿಲ್ಲವೆಂದು ಅವರು ತಿಳಿದುಕೊಂಡಿದ್ದಾರೋ ನನಗೆ ಗೊತ್ತಿಲ್ಲ, ಅವರು ಹೀಗೆ ತಿಳಿದುಕೊಂಡಿದ್ದರೆ ಹಾಗೆ ತಿಳಿದುಕೊಳ್ಳಬೇಡಿ ಎಂದು ಸ್ಪಷ್ಟವಾಗಿ ನಾವು ಹೇಳಬೇಕಾಗುತ್ತದೆ. ಅಸಿಸ್ಟೆಂಟ್ ಕಮೀಶನರ್, ಡೆಪ್ಯುಟಿ ಕಮೀಶನರ್ ಇದರ ಬಗ್ಗೆ ಆಸಕ್ತಿಯನ್ನೇ ತೆಗೆದುಕೊಳ್ಳುವುದಿಲ್ಲ. ಇದರ ಬದಲಿಗೆ ಏನಾಗುತ್ತಿದೆ ಎಂದರೆ. ಸ್ಟೇ ಆರ್ಡರ್ ಕೊಡಲಿಕ್ಕೆ ಸುಪ್ರೀಂ ಕೋರ್ಟಿನವರು ಒಪ್ಪಿಗೆಯನ್ನು ಕೊಟ್ಟುಬಿಟ್ಟಿದ್ದಾರೆ. ಪ್ರತಿಯೊಂದಕ್ಕೂ ಸ್ಟೇ ಆರ್ಡರ್‌ನ್ನು ಕೊಟ್ಟುಬಿಡುವುದು. ಯಾವನು ಮೊದಲು ಜಮೀನನ್ನು ಖರೀದಿ ಮಾಡುತ್ತಾನೋ ಅವನಿಗೆ ಪೋಲೀಸ್ ಪ್ರೊಟೆಕ್ಷನ್ ಕೊಟ್ಟು ರಿಸ್ಟೋರ್ ಮಾಡುತ್ತಿದ್ದಾರೆ, ಇದು ಹಲವಾರು ಕೇಸುಗಳಲ್ಲಿ ನಡೆದಿದೆ. ಏಕೆಂದರೆ ಸ್ಟೇ ಆರ್ಡರ್ ಬಂದಿದೆ ಆದ್ದರಿಂದ ನಾವು ಅದನ್ನು ಕೊಡಬೇಕು ಎಂದು ರೆಸ್ಟೋರೇಷನ್ ಮಾಡುತ್ತಿದ್ದಾರೆ. ಇಷ್ಟೇ ಅಲ್ಲದೆ ಮೊನ್ನೆ ಕೆಲವು ಪ್ರಕರಣಗಳು ನನ್ನ ಗಮನಕ್ಕೆ ಬಂದಿರುವುದು ಏನು ಎಂದರೆ ರಿಜೆಕ್ಟ್ ಮಾಡಿದವನಿಗೇ ಮತ್ತೆ ರಿಗ್ರಾಂಟ್ ಮಾಡಿಬಿಟ್ಟಿದ್ದಾರೆ ಇದು ಅಲ್ಲಿಯವರೆಗೆ ಹೋಗಿ ಮುಟ್ಟಿದೆ ಅದರ ಪರ್ಟಿಕ್ಯುಲರ್ಸ್ ನನ್ನ ಹತ್ತಿರ ಇಲ್ಲ. ಅದನ್ನು ನಾನು ತಮ್ಮ ಕಡೆಗೆ ತರಿಸಿಕೊಡುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.— ಈ ವಿಚಾರದಲ್ಲಿ ಹೇಳಬೇಕೆಂದರೆ ಹಿಂದೆ ಶ್ರೀ ಬಸವಲಿಂಗಪ್ಪನವರು ಕಂದಾಯ ಇಲಾಖೆಯ ಮಂತ್ರಿಯಾಗಿದ್ದರು. ನಾನು ವಿರೋಧ ಪಕ್ಷದ ನಾಯಕನಾಗಿದ್ದೆ. ಆಗ ಒಂದು ಕಮಿಟಿಯನ್ನು ನೇಮಿಸಲಾಗಿತ್ತು. ಚೇರ್ಮನ್ ಆಗಿ ಆಗ ಡೆಪ್ಯುಟಿಕಮೀಷನರುಗಳಿಂದ

ಇನ್‌ಫಾರ್ಮೇಷನ್ ಕೇಳಿದ್ದೆ ಬಹುತೇಕ ಜಿಲ್ಲೆಗಳಿಂದ ಅಪ್ಲಿಕೇಷನ್ಸ್ 'ನಿಲ್' ಇತ್ತು ಕೆಲವುದರಲ್ಲಿ ೫೦–೬೦ ಬಂದಿತ್ತು. ಆಗ ಹಳ್ಳಿಗಳಲ್ಲಿ ಡಂಗೂರ ಹೊಡಿಸತಕ್ಕದ್ದು, ದಲಿತ ಸಂಘದ ಸಮಿತಿಗಳಿಗೆ ಇದರ ಬಗ್ಗೆ ಮಾಹಿತಿ ಕೊಡತಕ್ಕದ್ದು ಮಾಡಿ ಒಂದೂವರೆ ವರ್ಷ ಸತತವಾಗಿ ನಾವು ಪ್ರಯತ್ನ ಮಾಡಿದ ಮೇಲೆ ಬೇರೆಬೇರೆ ಜಿಲ್ಲೆಗಳಿಂದ ಅಪ್ಲಿಕೇಷನ್ಸ್ ಬಂದವು. ಆಮೇಲೆ ನಾನು ಸರ್ಕಾರಕ್ಕೆ ಒತ್ತಾಯ ಮಾಡಿ ಮುಖ್ಯ ಕಾರ್ಯದರ್ಶಿಯವರು ಡಿ.ಸಿ.ಗಳಿಗೆ ಒಂದು ಸರ್ಕ್ಯುಲರ್ ಅನ್ನು ಮಂತ್ಲಿ ರಿಪೋರ್ಟ್ ಕಳಿಸಲಿಕ್ಕೆ ಎಂದು ಹೊರಡಿಸಿದೆ ಈಗ ತೆಗೆದುಕೊಳ್ಳುತ್ತಿದ್ದೇವೆ. ಸ್ಟೇ ಆರ್ಡರ್ ಬಗ್ಗೆ ತಾವು ಹೇಳಿದ್ದು ನಿಜ. ಇದರ ಬಗ್ಗೆ ಸುಪ್ರೀಂಕೋರ್ಟಿಗೆ ಕ್ಲಾರಿಫಿಕೇಷನ್ ಕೊಟ್ಟಿದ್ದೇವೆ.

ಶ್ರೀ ಕೆ.ಎಚ್. ಪಾಟೀಲ್.—ತಾವು ಈ ಕಡೆಗೆ ಇದ್ದಾಗ ರೈತರ ಪರವಾಗಿ ಬಹಳ ಕಷ್ಟಪಟ್ಟು ಕೆಲಸ ಮಾಡಿದ್ದೀರಿ ಆದರೆ ಅಲ್ಲಿ ಹೋದ ನಂತರ ಮರೆತುಬಿಟ್ಟಿರಿ ಅದನ್ನು ಮರೆಯಬಾರದು ಎನ್ನುವುದೇ ಶ್ರೀ ಶ್ರೀನಿವಾಸ್ ಅವರ ಹೇಳಿಕೆ.

ಶ್ರೀ ಕೆ.ಎಚ್. ಶ್ರೀನಿವಾಸ್.—ಸಂತೋಷ ನಾನು ಹೇಳುವುದೇನೆಂದರೆ, ಯಾರು ಇಂತಹ ಕೆಲಸ ಮಾಡುತ್ತಾರೆ, ಸಮಾಜದಲ್ಲಿರತಕ್ಕಂಥ ಸ್ವಾರ್ಥಶಕ್ತಿಗಳು ಏನಿವೆ ಅವರು ಅವರ ಮೇಲೆ ದಬ್ಬಾಳಿಕೆ ಮಾಡಿ ಕೊಟ್ಟಿದ್ದನ್ನು ಹರಿದು ಕಚ್ಚಿಕೊಂಡು ಹೋಗಿ ಅವರನ್ನು ವಂಚಿಸಬಾರದು ಎನ್ನುವುದು ಇಲ್ಲಿಯ ಮುಖ್ಯ ಅಂಶ ನನಗೆ ಬೇಕಾದಷ್ಟು ಜನ ಬಂದು ಕೇಳಿದರು. ಬೇರೆ ಯಾವುದೇ ಸಹಾಯ ಮಾಡುತ್ತೇನೆ ಇದರಲ್ಲಿ ಮಾಡುವುದಿಲ್ಲ ಎಂದು ಹೇಳಿದೆ. ಇದು ಆಗಬೇಕು. ಎಲ್ಲಾ ಜನರಿಗೂ ಅರ್ಥ ಆಗಬೇಕು ಎನ್ನುವುದು ಈ ಕಾನೂನಿನ ಮೂಲಭೂತವಾದ ಉದ್ದೇಶ. ನೂರು, ಸಾವಿರ ಜನರಿಗೆ ಬರೇ ಜಮೀನು ಕೊಡುವುದು ಅಷ್ಟೇ ಅಲ್ಲ. ಈ ಒಂದು ಭಾವನೆ ಬರುವ ರೀತಿಯಲ್ಲಿ ಸರ್ಕಾರ ಕೆಲಸ ಮಾಡಬೇಕೆಂದು ನಾನು ಒತ್ತಾಯಿಸುತ್ತೇನೆ ಇನ್ನು ನ್ಯಾಚುರಲ್ ಕೆಲಾಮಿಟೀಸ್ ಬಗ್ಗೆ ಇರತಕ್ಕಂಥ ಪರಿಹಾರದ ವ್ಯವಸ್ಥೆ ಬಗ್ಗೆ ಹೇಳಬೇಕೆಂದರೆ ಏನೂ ವ್ಯವಸ್ಥೆ ಇಲ್ಲ. ಇದಕ್ಕೆ ಹೊಸ ಕೋಡ್ ಅನ್ನು ತಯಾರು ಮಾಡಬೇಕು. ಈಗ ತಲೆಯೇ ಇಲ್ಲ, ಕೋಡ್‌ನ್ನು ಎಲ್ಲಿಂದ ಹಾಕಿ ಮಾಡುತ್ತೀರೋ ಗೊತ್ತಿಲ್ಲ. ಇವತ್ತು ಒಂದು ಮನೆ ಸುಟ್ಟು ಹೋಗಿಬಿಡುತ್ತದೆ ಆದರೆ ಏನೂ ಕೊಡುವುದಕ್ಕೆ ಆಗುವುದಿಲ್ಲ. ಭದ್ರಾವತಿ ತಾಲ್ಲೂಕಿನಲ್ಲಿ ಬಹಳ ದೊಡ್ಡ ದುರ್ಘಟನೆ ಆಗಿದೆ ಮೂರು ಕೋಟಿಯಷ್ಟು ನಷ್ಟವಾಗಿದೆ ಬರೇ ಚಿತ್ರಗಳನ್ನು ನೋಡಿದರೇ ಭಯಂಕರವಾಗಿದೆ. ಇದರ ಬಗ್ಗೆ ಶ್ರೀ ಬಸವಣ್ಣಪ್ಪನವರ ಹೇಳಿಕೆ ನೋಡಿದೆ. ಅಲ್ಲಿ ಜನರಿಗೆ ಸರ್ಕಾರದ ಪರವಾಗಿ ಒಬ್ಬರೂ ಬರಲಿಲ್ಲ ಎನ್ನುವ ಭಾವನೆ ಇದೆ. ಇಲ್ಲಿ ನಾನು ಒತ್ತಾಯ ಮಾಡುವುದೇನೆಂದರೆ, ಇವೇನೂ ಆರ್ಡಿನರಿ ಪ್ರಕರಣ ಅಲ್ಲ. ನಾವು ಆಲಿಕಲ್ಲು ಮಳೆ ಎಂದರೆ ಹುಡುಗರು ಸಂತೋಷವಾಗಿ ಆಲಿಕಲ್ಲನ್ನು ಎತ್ತಿಕೊಂಡು ಹೋಗುವುದನ್ನು ನಾನು ನೋಡಿದ್ದೇನೆ ಆದರೆ ಇಲ್ಲಿ ಹಾಗೆ ಆಗಲಿಲ್ಲ. ಆದ್ದರಿಂದ ಈಗಲಾದರೂ ಕಾಲ ಮಿಂಚಿಲ್ಲ. ಸರ್ಕಾರದ ಪರವಾಗಿ ಈ ಸದನದ ಪರವಾಗಿ ಒಂದು ಟೀಮ್ ಅನ್ನು ಕಳಿಸಿದರೆ ಕೊನೆಪಕ್ಷ ಜನರಿಗೆ ಸ್ವಲ್ಪ ಸಮಾಧಾನ ಆಗುತ್ತದೆ ತತ್‌ಕ್ಷಣಕ್ಕೆ ನಿಮ್ಮ ಸರ್ಕಾರ ಏನು ಮಾಡಬಹುದೋ ಅದನ್ನು ಮಾಡಿ. ನಂತರ ನಾವು ಬೇಕಾದರೆ ಕೇಂದ್ರ ಸರ್ಕಾರಕ್ಕೆ ಕೇಳೋಣ, ಒತ್ತಡ ತರೋಣ. ನೀವು ಇಲ್ಲಿಂದ ಒಂದು ಸಮಿತಿಯನ್ನು ಮಾಡಿ, ಅದರಲ್ಲಿ ಮಂತ್ರಿಗಳೂ ಇರಲಿ. ಅಲ್ಲಿ ಒಂದು ರೌಂಡ್ ಹೋಗಿ ಜನರನ್ನು ನೋಡಿ ನಾವು ಇದ್ದೇವೆ, ಸಹಾಯ ಮಾಡುತ್ತೇವೆ ಎಂದು ಹೇಳದೇ ಇರತಕ್ಕದ್ದು ಸರ್ಕಾರಕ್ಕೆ ಭೂಷಣ ಅಲ್ಲ. ಈಗಲಾದರೂ ಇದನ್ನು ಮಾಡಬೇಕೆಂದು ಒತ್ತಾಯಿಸುತ್ತಾ ಈ ನ್ಯಾಚುರಲ್ ಕಾಲಮಿಟೀಸ್‌ಗೆ ಸಂಬಂಧಪಟ್ಟ ಕೋಡ್ ಮತ್ತು ಫ್ಯಾಮಿನ್‌ಗೆ ಸಂಬಂಧಿಸಿದ ಕೋಡ್‌ನ್ನೂ ಕೂಡ ಪರಿಷ್ಕರಣ ಮಾಡಬೇಕೆಂದು ಇದ್ದೀರಿ. ಅದರ ಜೊತೆಗೆ ಇದನ್ನೂ ಕೂಡ ತಕ್ಷಣ ಮಾಡಬೇಕೆಂದು ಒತ್ತಾಯಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಹೆಚ್. ವಿಶ್ವನಾಥ ಪಾಟೀಲ್ (ಚಿತ್ತಾಪುರ).—ಸನ್ಮಾನ್ಯ ಅಧ್ಯಕ್ಷರೇ, ಇಂದು ಕಂದಾಯ, ಯೋಜನೆ ಹಾಗೂ ನೀರಾವರಿ ಸಚಿವರು ಮಂಡಿಸಿರುವಂಥ ಬೇಡಿಕೆಗಳನ್ನು ಸಮರ್ಥಿಸುತ್ತಾ ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಅಧ್ಯಕ್ಷರೇ, ಗುಲ್ಬರ್ಗಾ ಜಿಲ್ಲೆ ತುಂಬಾ ಹಿಂದುಳಿದ ಜಿಲ್ಲೆ ಸರ್ವಾಂಗೀಣ ಅಭಿವೃದ್ಧಿಯಲ್ಲಿ, ರಾಜ್ಯದಲ್ಲಿಯೇ ಕೊನೆಯ ಜಿಲೆ ಆಗಿದ್ದು ಇದು ಅಭಿವೃದ್ಧಿಯಲ್ಲಿ ೨೦ನೆಯ ಸ್ಥಾನದಲ್ಲಿದೆ. ಇದೇ ರೀತಿ ನೀರಾವರಿಗೆ ಬಂದಾಗ. ನೀರಾವರಿಯಲ್ಲಿಯೂ ಕೂಡ ಈ ಜಿಲ್ಲೆ ಕೊನೆಯ ಜಿಲ್ಲೆಯಾಗಿದೆ. ರಾಜ್ಯದಲ್ಲಿ ಎಲ್ಲಿಯಾದರೂ ಅತಿ ಕಡಿಮೆ ನೀರಾವರಿ ಇರುವ ಪ್ರದೇಶ ಎಂದರೆ, ಅದು ಗುಲ್ಬರ್ಗಾ ಜಿಲ್ಲೆ. ಇದರ ಬಗ್ಗೆ ಪುನಃ ಪುನಃ ಈ ಮನೆಯಲ್ಲಿ ಹೇಳಿದ್ದೇನೆ. ಮಾನ್ಯ ಸಚಿವರು ಗುಲ್ಬರ್ಗಾಕ್ಕೆ ಬಂದಾಗ, ನೀರಾವರಿಯ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು, ಹೆಚ್ಚಿನ ಹಣ

ಕೊಡಬೇಕು. ಈ ಭಾಗದಲ್ಲಿರುವ ನೀರಾವರಿ ಯೋಜನೆಗಳನ್ನು ತೀವ್ರ ಗತಿಯಲ್ಲಿ ಮುಗಿಸುವುದಕ್ಕೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ಒತ್ತಾಯ ಮಾಡಿದ್ದೇವೆ. ಆದರೆ ದುರ್ದೈವವಶಾತ್ ಹೇಳಬೇಕಾದರೆ, ಗುಲ್ಬರ್ಗಾ ಜಿಲ್ಲೆ ಇರುವಂಥ ನೀರಾವರಿ ಯೋಜನೆಗಳು ೧೯೭೨–೭೩ರಲ್ಲಿ ಪ್ರಾರಂಭವಾದರೂ ಇನ್ನೂ ಪೂರ್ಣವಾಗಿಲ್ಲ. ಪ್ರಮುಖವಾಗಿ ಬೆಣ್ಣೆತೊರೆ, ಅಮರ್ಜಾ ಯೋಜನೆಗಳು ೧೯೭೨–೭೩ರಿಂದ ಇಲ್ಲಿಯವರೆಗೂ ಕೇವಲ ಇವೆಲ್ಲಾ ಬರಗಾಲ ಪರಿಹಾರ ಕಾಮಗಾರಿಗಳಾಗಿ ಉಳಿದಿವೆಯೇ ಹೊರತು, ನೀರು ಕೊಡುವ ದೃಷ್ಟಿಯಿಂದ ಈ ಯೋಜನೆಗಳು ಪೂರ್ಣ ಮಾಡಿಲ್ಲ. ನೀರು ಕೊಡುವ ದೃಷ್ಟಿಯನ್ನು ಇಟ್ಟುಕೊಂಡು ಈ ಯೋಜನೆಗಳಿಗೆ ಹಣವನ್ನು ಬಿಡುಗಡೆ ಮಾಡಿಲ್ಲವೆಂದು ನನ್ನ ಸ್ಪಷ್ಟ ಅನಿಸಿಕೆ. ಮಾನ್ಯ ಅಧ್ಯಕ್ಷರೇ, ಈ ಬೆಣ್ಣೆತೊರೆ ಯೋಜನೆ ಬಗ್ಗೆ ಹೇಳಬೇಕಾದರೆ, ಇದು ಪ್ರಾರಂಭ ಮಾಡುವಾಗ, ೧೯೭೨–೭೩ರಲ್ಲಿ ಇದರ ಅಂದಾಜು ಬೆಲೆ ೮ ಕೋಟಿ ರೂಪಾಯಿಗಳಾಗಿತ್ತು. ಇವತ್ತು ೧೦–೧೨ ವರ್ಷಗಳಲ್ಲಿ ಇದರ ಅಂದಾಜುಪಟ್ಟಿ ೭೪ ಕೋಟಿ ರೂಪಾಯಿಗಳಿಗೆ ಏರಿದೆ. ೧೯೭೨–೭೩ರಿಂದ ಇಲ್ಲಿಯವರೆಗೆ ೮ ಕೋಟಿ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಿದ್ದಾರೆ. ೧೯೮೪ರಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು, ಅಂದಿನ ನೀರಾವರಿ ಸಚಿವರು ಮಾನ್ಯ ಬೊಮ್ಮಾಯಿಯವರು ಈ ಬೆಣ್ಣೆತೊರೆ ಯೋಜನೆಗೆ ಭೇಟಿ ಕೊಟ್ಟು, ಅಲ್ಲಿನ ಸ್ಪಿಲ್‌ವೇಗೆ ಫೌಂಡೇಷನ್ ಹಾಕಿದ್ದರೂ ಅಲ್ಲಿನ ಕೆಲಸ ಮಾತ್ರ ತೀವ್ರ ಗತಿಯಲ್ಲಿ ಆಗದೇ ಅರ್ಧಮಟ್ಟಕ್ಕೆ ಮಾತ್ರ ನಡೆಯುತ್ತಿದೆ. ಈಗ್ಗೆ ೩–೪ ವರ್ಷಗಳಿಂದ ಸಾಧಾರಣವಾಗಿ ಸ್ಪಿಲ್‌ವೇ ಕೆಲಸ ನಡೆಯುತ್ತಿದೆ. ಇದೇ ರೀತಿ ಕೆಲಸ ಮುಂದುವರಿಸಿಕೊಂಡು ಹೋದರೆ, ಇನ್ನು ೨೦ ವರ್ಷಗಳಾದರೂ ಈ ಯೋಜನೆ ಮುಗಿಯುವುದಿಲ್ಲ. ಈಗ ೭೪ ಕೋಟಿ ರೂಪಾಯಿಗಳಿಗೆ, ಈ ಯೋಜನೆ ಏರು ಹೋಗಿದೆ ಇನ್ನು ೨೦ ವರ್ಷಗಳಲ್ಲಿ ಎಷ್ಟು ನೂರು ಕೋಟಿ ರೂಪಾಯಿಗಳಿಗೆ ಹೋಗುತ್ತದೆ ಎಂದು ಹೇಳುವುದು ಕಷ್ಟವಾಗುತ್ತದೆ. ಇದೇರೀತಿಯಾಗಿ, ಇನ್ನಿತರ ಗುಲ್ಬರ್ಗಾ ಜಿಲ್ಲೆಯ ಯೋಜನೆಗಳನ್ನು ತೀವ್ರಗತಿಯಲ್ಲಿ ಮುಗಿಸಬೇಕೆಂದು ಹಿಂದಿನ ನೀರಾವರಿ ಸಚಿವರು ಇಲ್ಲಿ ಒಂದು ಚೀಫ್ ಇಂಜಿನಿಯರ್ ಆಫೀಸನ್ನು ಪ್ರಾರಂಭ ಮಾಡಿದರು. ಅಲ್ಲಿಯ ಅಧಿಕಾರಿಗಳಿಗೆ ಅಲ್ಲಿರುವಂಥ ೮ ಮಧ್ಯಮ ನೀರಾವರಿ ಯೋಜನೆಗಳನ್ನು ಒಪ್ಪಿಸಿದರು. ಈ ೮ ನೀರಾವರಿ ಯೋಜನೆಗಳಿಗೆ ೨೨ ಕೋಟಿ ರೂಪಾಯಿಗಳನ್ನು ೧೯೮೭–೮೮ರ ಆಯವ್ಯಯದಲ್ಲಿ ನಿಗದಿಪಡಿಸಿದರು. ಆದರೆ ದುರಾದೃಷ್ಟವಶಾತ್, ಈ ೨೨ ಕೋಟಿ ರೂಪಾಯಿಗಳಲ್ಲಿ, ಕೇವಲ ೮–೧೦ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿರುವುದರಿಂದ, ಅವರೇನು ಮುಖ್ಯ ಅಭಿಯಂತರ ಕಛೇರಿಯನ್ನು ಪ್ರಾರಂಭ ಮಾಡಿದರೂ ಕೂಡ, ಅದು ಅಷ್ಟು ಸಮರ್ಥವಾಗಿ ಕೆಲಸ ಮಾಡದೇ, ಕೇವಲ ಅಲ್ಲಿನ ಅಧಿಕಾರಿಗಳು ಬರಗಾಲ ಕಾಮಗಾರಿಗಳನ್ನು ಮಾತ್ರ ನಿರ್ವಹಿಸಿದ್ದು, ಈ ನೀರಾವರಿ ಯೋಜನೆಗಳ ಕೆಲಸಕಾರ್ಯಗಳು ಮಾತ್ರ ಅಷ್ಟು ಪ್ರಗತಿ ಆಗಿಲ್ಲವೆಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಇದೇ ರೀತಿ ಕಂಟೂರು ನಾಲಾ ಯೋಜನೆಯನ್ನು ಆಯವ್ಯಯದಲ್ಲಿ ಸೇರಿಸಿ ೨೫ ಲಕ್ಷ ರೂಪಾಯಿಗಳನ್ನು ಆಯವ್ಯಯದಲ್ಲಿ ಇಟ್ಟಿದ್ದರು. ೨೫ ಲಕ್ಷ ರೂಪಾಯಿಯ ಹಣವನ್ನು ಇಟ್ಟಿದ್ದರೂ ಈ ಯೋಜನೆ ಯಾವ ಹಂತವನ್ನು ಇನ್ನು ತಲುಪಿಲ್ಲ. ಮಾನ್ಯ ಸಚಿವರು ಈ ಯೋಜನೆಗಳ ಬಗ್ಗೆ ವಿಶೇಷ ಕಾಳಜಿಯನ್ನು ವಹಿಸಬೇಕೆಂದು ಕೇಳಿಕೊಳ್ಳುತ್ತೇನೆ. ಹೋದವರ್ಷ ಬೆಣ್ಣೆತೊರೆ ಯೋಜನೆಗೆ ೫ ಕೋಟಿ ರೂಪಾಯಿಗಳನ್ನು ೮೭–೮೮ರಲ್ಲಿ ಇಟ್ಟಿದ್ದರೂ ಬಿಡುಗಡೆ ಮಾಡಿದ ಹಣ ಬರೀ ೧ ಕೋಟಿ ರೂಪಾಯಿ ಮಾತ್ರ. ಆಯವ್ಯಯದಲ್ಲಿ ಹೆಚ್ಚಿಗೆ ಹಣವನ್ನು ತೋರಿಸಿ ೧ ಕೋಟಿ ರೂಪಾಯಿಯನ್ನು ಮಾತ್ರ ಬಿಡುಗಡೆ ಮಾಡಿದ್ದು ಇದರಿಂದ ಈ ಭಾಗದ ಜನರಿಗೆ ತುಂಬ ಅನ್ಯಾಯ ಮಾಡಿದಂತಾಗಿದೆ. ಈ ವರ್ಷ ೪ ಕೋಟಿ ೨೫ ಲಕ್ಷ ರೂಪಾಯಿಗಳನ್ನು ಆಯವ್ಯಯದಲ್ಲಿ ಒದಗಿಸಿದ್ದೀರಿ. ಹೋದವರ್ಷ ಮಾಡಿದಂತೆ ಈ ವರ್ಷ ಮಾಡಬೇಡಿ. ಪ್ರಭಾವಿ ಮಂತ್ರಿಗಳಿಗೆ ಪ್ರಭಾವಿ ರಾಜಕೀಯ ಧುರೀಣರ ಕ್ಷೇತ್ರಗಳಿಗೆ ಮಾತ್ರ ಹಣ ಬಿಡುಗಡೆ ಮಾಡುವುದರಿಂದ ತೊಂದರೆಗೆ ಒಳಗಾಗಿರುವ ನಮ್ಮ ಭಾಗದ ಜನರು ಸಹನೆಯನ್ನು ಕಳೆದುಕೊಳ್ಳುತ್ತಾರೆ. ನೀರಾವರಿ ಸಚಿವರು ಮತ್ತು ಕಂದಾಯ ಸಚಿವರು ಗುಲ್ಬರ್ಗಕ್ಕೆ ಭೇಟಿ ನೀಡಿದಾಗ ಇದನ್ನು ಅನುಭವಿಸಿದ್ದಾರೆ. ಅವರು ಗುಲ್ಬರ್ಗಕ್ಕೆ ಬಂದಾಗ ಕಪ್ಪು ಬಾವುಟವನ್ನು ಪ್ರದರ್ಶಿಸಿ ನಮಗೆ ಪ್ರತ್ಯೇಕ ರಾಜ್ಯಬೇಕೆಂದು ಕೇಳಿದ್ದರು. ನಾವು ಅದನ್ನು ಸಮರ್ಥಿಸುವುದಿಲ್ಲ. ಇವತ್ತು ಜನ ಜಾಗೃತರಾಗಿದ್ದು, ತಮ್ಮ ಹಕ್ಕುಗಳಿಗಾಗಿ ಹೋರಾಟ ಮಾಡುವಂತ ಪರಿಸ್ಥಿತಿಯಲ್ಲಿದ್ದಾರೆ ಈ ಸಂದರ್ಭದಲ್ಲಿ ಈ ಅಂಶವನ್ನು ಮಾನ್ಯ ಕಂದಾಯ ಸಚಿವರ ಗಮನಕ್ಕೆ ತರುತ್ತೇನೆ. ನಮ್ಮ ಜಿಲ್ಲೆಯಲ್ಲಿ ವಿಶ್ವಬ್ಯಾಂಕಿನ ನೆರವಿನಿಂದ ಕೆಲವು ಕೆರೆಗಳನ್ನು ಕಟ್ಟಲು ಆಯವ್ಯಯದಲ್ಲಿ ಸೇರಿಸಿದ್ದರು. ಆದರೆ ಅದು ವಿಶ್ವಬ್ಯಾಂಕ್ ನೆರವಿನಿಂದ ಕಟ್ಟಬೇಕಾದ ಕಾಜಿ, ಕಟ್ಟನೂರು, ಹಲ್ಲಿಪುರ ಕೆರೆಗಳನ್ನು ಎಂ. ಐ. ಬ್ಯಾಂಕ್‌ಗಳಿಗೆ ಸೇರಿಸಿದ್ದಾರೆ. ಇದಕ್ಕೆ ಕಾರಣ ಗೊತ್ತಿಲ್ಲ. ನಮ್ಮ ಜನರು ನಮ್ಮ ಬಗ್ಗೆ ಸರ್ಕಾರ

ಮಲತಾಯಿ ಧೋರಣೆಯನ್ನು ತೋರಿಸುತ್ತಿದೆಯೆಂದು ಹೇಳುತ್ತಿದ್ದಾರೆ. ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ. ಮಲತಾಯಿ ಧೋರಣೆಯನ್ನು ತೋರಿಸಲಿ ಆದರೆ ಆ ಧೋರಣೆಯನ್ನು ಸಹ ತೋರಿಸುವುದಿಲ್ಲ ಎನ್ನುವ ದುಃಖ ನಮಗಾಗುತ್ತದೆ ಸಣ್ಣ ನೀರಾವರಿಯ ಯೋಜನೆಯ ವಿಚಾರದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ನಮ್ಮ ಜಿಲ್ಲೆಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ಸಣ್ಣ ನೀರಾವರಿ ಯೋಜನೆಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಇದ್ದರೂ ಕೂಡ, ಕಡಿಮೆ ಪ್ರಮಾಣದಲ್ಲಿ ತೆಗೆದುಕೊಂಡಿದ್ದಾರೆ. ದಯವಿಟ್ಟು ಸರ್ಕಾರದವರು ಹೆಚ್ಚಿನ ಪ್ರಮಾಣದಲ್ಲಿ ಸಣ್ಣ ನೀರಾವರಿ ಯೋಜನೆಯನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಜೊತೆಗೆ ಭಾವಿಗಳ ಮೂಲಕ ನೀರಾವರಿ ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕು ನಮ್ಮ ಭಾಗದಲ್ಲಿ ಮಳೆ ಕಡಿಮೆ ಇರುವುದರಿಂದ ಭಾವಿಯಲ್ಲಿರತಕ್ಕ ನೀರಿನ ಮಟ್ಟ ಕಡಿಮೆಯಾಗುತ್ತಿದೆ, ಇದರಿಂದ ಇತ್ತೀಚಿಗೆ ನೀರಾವರಿ ಮಾಡುವುದು ಕಷ್ಟವಾಗಿದೆ. ತಜ್ಞರ ಸಹಾಯವನ್ನು ಪಡೆದು ಪರ್ಕ್ಯುಲೇಷನ್ ಟ್ಯಾಂಕ್‌ಗಳನ್ನು ನಿರ್ಮಾಣ ಮಾಡಬೇಕಾಗಿದೆ. ಪರ್ಕ್ಯುಲೇಷನ್ ಟ್ಯಾಂಕುಗಳಿಗೆ ಹೆಚ್ಚಿನ ಹಣವನ್ನು ಒದಗಿಸಿ ನೀರಾವರಿಗೆ ಅನುಕೂಲ ಮಾಡಿಕೊಡಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಮಾನ್ಯ ಬೊಮ್ಮಾಯಿಯವರ. ಹೈದರಾಬಾದ್ ಕರ್ನಾಟಕಕ್ಕೆ ಸಮೀಪದವರಾಗಿರುವುದರಿಂದ ಈ ಯೋಜನೆಗಳ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು, ನನ್ನ ಕ್ಷೇತ್ರದ ಬಾಗೋಡಿ ಹತ್ತಿರ ಕಾಗಿಣೆ ನದಿ ಹರಿಯುತ್ತಿದೆ, ಈ ನದಿಯಿಂದ ಅರ್ಧ ಊರು ಕೊಚ್ಚಿಕೊಂಡು ಹೋಗಿದೆ. ಇದಕ್ಕೆ ಪ್ರೊಟೆಕ್ಷನ್ ವಾಲ್ ಕಟ್ಟಬೇಕೆಂದು ಒತ್ತಾಯ ಮಾಡಿದಾಗ ಅದನ್ನು ಆಯವ್ಯಯದಲ್ಲಿ ಸೇರಿಸಿದ್ದರು. ಆದರೆ ಇದುವರೆಗೂ ಆ ಕೆಲಸವನ್ನು ಕೈಗೆತ್ತಿಕೊಂಡಿಲ್ಲ. ಫ್ಲಡ್ ಪ್ರೊಟೆಕ್ಷನ್ ವಾಲ್‌ನ್ನು ಮಂಜೂರು ಮಾಡಿ ತೀವ್ರಗತಿಯಲ್ಲಿ ಕೆಲಸ ಪ್ರಾರಂಭ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಕಾಚ ಕಟ್ಟಿ ನೂರು ಯೋಜನೆಯನ್ನು ವಿಶ್ವಬ್ಯಾಂಕ್ ಯೋಜನೆಯಲ್ಲಿ ಸೇರಿಸದೆ ಅದನ್ನು ಮೈನರ್ ಇರಿಗೇಷನ್‌ಗೆ ಸೇರಿಸಿದ್ದಾರೆ. ಇದಕ್ಕೆ ಕಾರಣ ಗೊತ್ತಿಲ್ಲ. ಕೊನೆಯ ಪಕ್ಷ ಮೈನರ್ ಇರಿಗೇಷನ್‌ನಲ್ಲಿಯಾದರೂ ಮಂಜೂರಾತಿ ಮಾಡಿ ಅಲ್ಲಿನ ಜನರಿಗೆ, ಬಡಜನರಿಗೆ, ತೊಂದರೆಯಲ್ಲಿರತಕ್ಕಂಥ ಜನರಿಗೆ ಆ ಭಾಗದ ಜನರಿಗೆ ಅನುಕೂಲವಾಗುವಂತೆ ತೀವ್ರಗತಿಯಲ್ಲಿ ಮಂಜೂರಾತಿ ಮಾಡಿ ಅನುಕೂಲ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇದರ ಜೊತೆಗೆ ಯೋಜನಾ ಇಲಾಖೆಗೆ ಸಂಬಂಧಪಟ್ಟಂತೆ ಹೇಳಬೇಕಾದರೆ ನಮ್ಮ ಜಿಲ್ಲೆಯ ಯೋಜನೆಗಳಿಗೆ ಹಣ ಒದಗಿಸುತ್ತಾ ಬಂದಿದ್ದಾರೆ. ಯೋಜನೆಯಲ್ಲಿರತಕ್ಕಂಥ ಕೆಲಸಗಳಿಗೆ ನಮ್ಮ ಬಡ್ಜೆಟ್ ಮಂಡನೆ ಮಾಡುವಾಗ ಈ ಯೋಜನೆಗಳಿಗೆಂದು ದುಡ್ಡು ಒದಗಿಸಿರುತ್ತಾರೆ ಒದಗಿಸಿದಂತಹ ದುಡ್ಡಿನಲ್ಲಿ ಮಾರ್ಚಿ ಕೊನೆಯಲ್ಲಿ ಹಣ ಬಿಡುಗಡೆ ಮಾಡುತ್ತಾರೆ. ಈ ಯೋಜನೆಗೆ ಬಿಡುಗಡೆ ಮಾಡಿ ಉಳಿದಂತಹ ಹಣವನ್ನು ಬೇರೆ ಬೇರೆ ಜಿಲ್ಲೆಗಳ ಬೇರೆ ಬೇರೆ ಯೋಜನೆಗಳಿಗೆ ಉಪಯೋಗಿಸಿಕೊಳ್ಳುತ್ತಾರೆ. ಇದರಿಂದ ನಮ್ಮ ಭಾಗದ ಯೋಜನೆಗಳಾಗದೆ ಬಹಳ ಅನ್ಯಾಯವಾಗಿದೆ, ಆದ್ದರಿಂದ ನಮ್ಮ ಭಾಗದ ಜನ ಹೈದ್ರಾಬಾದ್ ಕರ್ನಾಟಕ ಬೋರ್ಡ್ ರಚನೆ ಮಾಡಿ ಎಂದು ಕೇಳುತ್ತಿರುವುದು. ಇದಕ್ಕೆ ಹೆಚ್ಚಿನ ಹಣವನ್ನು ಒದಗಿಸಿಕೊಡಿ ಎಂದು ಸಹ ನಾನು ಒತ್ತಾಯ ಮಾಡುತ್ತೇನೆ, ನಾನು ಈ ಸಂಬಂಧವಾಗಿ ಒಂದು ಪ್ರಶ್ನೆಯನ್ನು ಕೇಳಿದ್ದೆ ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾ ಹೇಳಿದ್ದರು ಹೈದ್ರಾಬಾದ್ ಕರ್ನಾಟಕ ಭಾಗದ ಶಾಸಕರನ್ನು ಕರೆದು ನಾನು ಮಾತನಾಡಿ ಮುಂದಿನ ಕಾರ್ಯಕ್ರಮ ಕೈಗೊಳ್ಳುವ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆಂದು ಹೇಳಿದ್ದರು. ಇವರು ಕಳೆದ ಅಧಿವೇಶನದಲ್ಲಿ ಹೇಳಿದ್ದರು. ಆದರೆ ಇವತ್ತಿನವರೆವಿಗೆ ಮಾನ್ಯ ಸಚಿವರು ಸಭೆ ಕರೆಯಲಿಲ್ಲ. ಈ ಅಧಿವೇಶನ ಮುಗಿಯುವಷ್ಟರಲ್ಲಿಯಾದರೂ ನಮ್ಮ ಹೈದ್ರಾಬಾದ್ ಕರ್ನಾಟಕದ ಎಲ್ಲಾ ಶಾಸಕರನ್ನು ಕರೆದು ಚರ್ಚೆ ಮಾಡುತ್ತೀರೆನ್ನುವ ನಂಬಿಕೆಯನ್ನು ನಾನು ಇಟ್ಟುಕೊಂಡಿದ್ದೇನೆ. ಮತ್ತು ಹಿಂದುಳಿದ ಭಾಗವಾದ ಹೈದ್ರಾಬಾದ್ ಕರ್ನಾಟಕ ಈ ಭಾಗದ ಜಿಲ್ಲೆಗಳ ಪ್ರಗತಿಗೆ ಯಾವ ರೀತಿ ಕಾರ್ಯಕ್ರಮ ಕೈಗೊಳ್ಳುತ್ತೀರೆನ್ನುವ ಬಗ್ಗೆ ಸ್ಪಷ್ಟವಾದ ನಿಲುವನ್ನು ಮಾನ್ಯ ಮಂತ್ರಿಗಳು ಹೇಳಬೇಕು. ಮತ್ತು ಹೈದ್ರಾಬಾದ್ ಕರ್ನಾಟಕ ಬೋರ್ಡ್ ರಚನೆ ಮಾಡಿ ಎಂದು ಕೇಳಿದರೆ ಮಾನ್ಯ ಮಂತ್ರಿಗಳು ಹೇಳುತ್ತಾರೆ ಗುಲ್ಬರ್ಗ ಜಿಲ್ಲೆಯಲ್ಲಿ ಮತ್ತು ರಾಜ್ಯದ ಇತರ ಕಡೆಗಳಲ್ಲಿ ಡ್ರೈ ಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡ್ ಮಾಡಿದ್ದೇವೆ, ಅದು ಮಾಡಿದ್ದೇವೆ, ಇದು ಮಾಡಿದ್ದೇವೆ ಎಂದು ಹೇಳಿದ್ದಾರೆ. ಆದರೆ ಬೋರ್ಡ್ ವಿಷಯ ಬಂದಾಗ ಮಾನ್ಯ ಮಂತ್ರಿಗಳು ಏಕೋ ಸೈಲೆಂಟ್ ಆಗುತ್ತಾರೆ. ಸರ್ಕಾರ ಈ ವಿಷಯದಲ್ಲಿ ಮೊಂಡುತನ ಮಾಡುತ್ತಿದೆ. ಏಕೋ ನಮಗೆ ಗೊತ್ತಾಗುತ್ತಿಲ್ಲ. ಈ ವಿಷಯದಲ್ಲಿ ಸರ್ಕಾರ ಸ್ವಲ್ಪ ಲಿಬರಲ್ ಆಗಿ ಹಿಂದುಳಿದ ಭಾಗಗಳ ಬಗ್ಗೆ ಕಳಕಳಿ ಇಟ್ಟುಕೊಂಡು ಸ್ವಲ್ಪ ದೊಡ್ಡ

ಮಾನಸ್ಸು ಮಾಡಿ ಬೋರ್ಡ್ ಮಾಡುವಂತಹ ಒಂದು ತೀರ್ಮಾನವನ್ನು ಕೈಗೊಳ್ಳಬೇಕು. ಈ ಬೋರ್ಡ್ ಮಾಡಿ ಎಂದು ನಾವು ಏತಕ್ಕೆ ಒತ್ತಾಯ ಮಾಡುತ್ತಿದ್ದೇವೆಂದರೆ ಹೋದ ಸಲ ಅಂದರೆ ೧೯೮೭-೮೮ನೇ ಇಸವಿಯಲ್ಲಿ ಬಿಣ್ಣತೊರೆ ಯೋಜನೆಗೆ ಬಜೆಟ್‌ನಲ್ಲಿ ೫ ಕೋಟಿ ರೂಪಾಯಿಗಳನ್ನು ಒದಗಿಸಿದ್ದರು. ಆದರೆ ಮಾರ್ಚ್ ಕೊನೆಯಲ್ಲಿ ಕೇವಲ ಒಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದರು. ಎಷ್ಟೋ ಸಲ ಬಜೆಟ್‌ನಲ್ಲಿ ಒದಗಿಸಿದಂತಹ ಹಣ ಸಂಪೂರ್ಣವಾಗಿ ಬಿಡುಗಡೆ ಮಾಡದೆ ಮತ್ತೆ ಆ ಹಣವನ್ನು ಬೇರೆ ಬೇರೆ ಯೋಜನೆಗಳಿಗೆ ಉಪಯೋಗಿಸತಕ್ಕಂಥ ಸಾಧ್ಯತೆಗಳು ಇವೆ. ಒಂದು ವೇಳೆ ನಾವು ಬೋರ್ಡ್ ಮಾಡಿದರೆ ಆ ಬೋರ್ಡ್‌ಗೆ ದುಡ್ಡು ಕೊಟ್ಟ ಮೇಲೆ ಪುನಹ ಆ ಬೋರ್ಡ್‌ನಿಂದ ದುಡ್ಡು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಬೋರ್ಡ್‌ಗೆ ಕೊಟ್ಟ ದುಡ್ಡು ಸಂಪೂರ್ಣವಾಗಿ ಅವರ ವ್ಯಾಪ್ತಿಯಲ್ಲಿರುತ್ತದೆ. ಆ ಭಾಗದ ಅಭಿವೃದ್ಧಿ ಯೋಜನೆಗಳಿಗೆ ಖರ್ಚು ಮಾಡಬಹುದು. ಇದನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡು ಬೋರ್ಡ್ ರಚನೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇದರ ಜೊತೆಗೆ ಈಗ ಎಂಟನೆ ಯೋಜನೆ ಪ್ರಾರಂಭವಾಗುತ್ತಿದೆ. ನಾವೀಗ ಏಳು ವರ್ಷಗಳಲ್ಲಿ ಎಷ್ಟು ಪ್ರಗತಿ ಸಾಧಿಸಿದ್ದೇವೆ ? ಏನು ಮಾಡಿದ್ದೇವೆ ಅದನ್ನು ನೋಡಬೇಕು. ಪ್ರತಿ ವರ್ಷ ಯೋಜನೆಯಲ್ಲಿ ಒಂದು ನೂರು ಕೋಟಿ ರೂಪಾಯಿಗಳನ್ನು ಹಿಂದುಳಿದ ಭಾಗದ ಪ್ರಗತಿಗೆ ಒದಗಿಸಿದರೆ ಅದೇ ವರ್ಷದಲ್ಲಿ ಆ ಒಂದು ನೂರು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇವೆನ್ನುವ ಒಂದು ಸ್ಪಷ್ಟ ನಿಲುವು ತೆಗೆದುಕೊಳ್ಳುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಬೇಕು. ಹಿಂದುಳಿದ ಜಿಲ್ಲೆಗಳ ಬಗ್ಗೆ ವಿಶೇಷ ಕಾಳಜಿಯನ್ನು ವಹಿಸಿ ಹಣವನ್ನು ಬಿಡುಗಡೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಜಿಲ್ಲೆಗಳಿಗೆ ಗಾಡ್ಗೀಲ್ ಫಾರ್ಮುಲಾ ಪ್ರಕಾರ ಹಣ ಬಿಡುಗಡೆ ಮಾಡುತ್ತಿದ್ದೀರಿ. ಆದರೆ ಅದರಲ್ಲೂ ಕೂಡ ನಮ್ಮ ಜಿಲ್ಲೆಗೆ ಅನ್ಯಾಯವಾಗುತ್ತದೆ. ಗಾಡ್ಗೀಲ್ ಫಾರ್ಮುಲಾ ಪ್ರಕಾರ ೫೦ ಪರ್ಸೆಂಟ್ ಜನಸಂಖ್ಯೆ ಇರುವಂತಹ ಕಡೆ ವೈಟೇಜ್ ಕೊಡುವಂತಹ ಒಂದು ಗೈಡ್‌ಲೈನ್ಸ್ ಇದೆ. ಜನಸಂಖ್ಯಾ ಆಧಾರದ ಮೇಲೆ ಕೊಡುವುದೇ ಆದರೆ ನಮ್ಮ ರಾಜ್ಯದಲ್ಲಿ ನಮ್ಮ ಜಿಲ್ಲೆ ಎರಡನೇ ಸ್ಥಾನದಲ್ಲಿ ಬರುತ್ತದೆ. ಆದರೆ ಈಗ ನಮ್ಮ ಜಿಲ್ಲೆ ನಂಬರು ೫ ರಲ್ಲಿ ಇದೆ. ಇಲ್ಲೂ ಸಹ ಹಿಂದುಳಿದ ಜಿಲ್ಲೆಗೆ ಅನ್ಯಾಯವಾಗುತ್ತಿದೆ. ಇದೇ ಒಂದು ಫಾರ್ಮುಲಾ ಇಟ್ಟುಕೊಂಡು ನೀವು ಹಣವನ್ನು ಜಿಲ್ಲೆಗಳಿಗೆ ಬಿಡುಗಡೆ ಮಾಡುವಾಗ ಆಯಾಯಾ ಜಿಲ್ಲೆಗಳಿಗೆ ಅವಶ್ಯಕತೆಯ ಆಧಾರದ ಮೇಲೆ ಬಿಡುಗಡೆ ಮಾಡಬೇಕು. ನಮಗೆ ಸಮಾನ ಹಂಚಿಕೆಯಲ್ಲಿ ವಿಶ್ವಾಸವಿಲ್ಲ. ನಮಗೆ ನ್ಯಾಯ ಸಿಗಬೇಕಾದರೆ ಅವಶ್ಯಕತೆಯ ಆಧಾರದ ಮೇಲೆ ಸಂಪನ್ಮೂಲಗಳನ್ನು ಹಿಂದುಳಿದ ಜಿಲ್ಲೆಗಳಿಗೆ ಕೊಡಬೇಕೆಂದು ಹೇಳುತ್ತೇನೆ ಮತ್ತು ಈಗ ಇರತಕ್ಕಂಥ ಗಾಡ್ಗೀಲ್ ಫಾರ್ಮುಲಾವನ್ನು ಬದಲಾವಣೆ ಮಾಡಬೇಕಾಗುತ್ತದೆ ಈ ಬಗ್ಗೆ ಸನ್ಮಾನ್ಯ ಮುಖ್ಯ ಮಂತ್ರಿಗಳು ಗುಲ್ಬರ್ಗಕ್ಕೆ ಬಂದಾಗ ಈ ವಿಷಯವನ್ನು ಅವರ ಗಮನಕ್ಕೆ ತಂದಾಗ ಅವರು ಹೇಳಿದರು ನಾವು ಒಂದು ಸ್ಕೇಲನ್ನು ಗಮನದಲ್ಲಿಟ್ಟುಕೊಂಡು ಹಣ ಬಿಡುಗಡೆ ಮಾಡುತ್ತೇವೆಂದು ಹೇಳಿದ್ದರು. ಆದರೆ ಇಲ್ಲಿಯವರೆವಿಗೆ ನಮಗೆ ಯಾವ ಪ್ರಯೋಜನವಾಗಿಲ್ಲವೆಂದು ಹೇಳಬಯಸುತ್ತೇನೆ.

೪-೦೦ ಪಿ. ಎಂ.

ಸನ್ಮಾನ್ಯ ಸಚಿವರು ನಮ್ಮ ಗುಲ್ಬರ್ಗಾ ಜಿಲ್ಲೆಗೆ ಒಂದು ಸಾರಿ ಬಂದಿದ್ದಾಗ ಒಂದು ಯೋಜನೆಗೆ ೨ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿ ಅದರಲ್ಲಿ ೫೦ ಲಕ್ಷ ರೂಪಾಯಿಗಳನ್ನು ಸರ್ಕಾರ ವಿತ್‌ಡ್ರಾ ಮಾಡಿಕೊಂಡ ಬಗ್ಗೆ ಸರ್ಕಾರ ಹೊರಡಿಸಿದ್ದ ಒಂದು ಆದೇಶವನ್ನು ಮಾನ್ಯ ಮಂತ್ರಿಯವರಿಗೆ ತೋರಿಸಿದ್ದೆ. ಯಾವ ರೀತಿಯಾಗಿ ನಮ್ಮ ಗುಲ್ಬರ್ಗಾ ಜಿಲ್ಲೆಗೆ ಸರ್ಕಾರ ಅನ್ಯಾಯ ಮಾಡುತ್ತಿದೆ ಎಂಬ ಬಗ್ಗೆ ಅವರಿಗೆ ಆದೇಶವನ್ನು ತೋರಿಸುವುದರ ಮೂಲಕ ಹೇಳಿದ್ದೆ. ಮಾನ್ಯ ಮಂತ್ರಿಗಳು ಗುಲ್ಬರ್ಗಾದಿಂದ ಇಲ್ಲಿಗೆ ಬರುವುದರೊಳಗೆ ಅದನ್ನು ಮರೆತಿರಬಹುದು.

ಶ್ರೀ ಎಸ್. ಆರ್. ಬೊಮ್ಮಾಯಿ.— ಮಾನ್ಯ ಸದಸ್ಯರು ಗುಲ್ಬರ್ಗಾ ಜಿಲ್ಲೆಗೆ ಹಣವನ್ನು ಕಡಿಮೆ ಕೊಡಲಾಗುತ್ತಿದೆ ಎಂದು ಹೇಳಿದ್ದಾರೆ. ಜಿಲ್ಲಾಪರಿಷತ್ತು ಆದ ಮೇಲೆ ಯೋಜನಾ ಇಲಾಖೆಯಿಂದ ಹಣವನ್ನು ಕೊಡತಕ್ಕಂಥ ನಿಯಮವನ್ನು ಮಾಡಿದ್ದೇವೆ. ಜನಸಂಖ್ಯೆಯ ಆಧಾರದ ಮೇಲೆ ಮತ್ತು ಬ್ಯಾಕ್‌ವರ್ಡ್ ಏರಿಯಾ ಆಧಾರದ ಮೇಲೆ ಹಣವನ್ನು ಬಿಡುಗಡೆ ಮಾಡುವ ಹಿಂದು ಹೊಸ ನಿಯಮ-

ವನ್ನು ಮಾಡಲಾಗಿದೆ. ಆ ನಿಯಮದಂತೆ ಹಿಂದಿನ ವರ್ಷಗಳಿಗಿಂತ ಈ ಸಾರಿ ೩ ಕೋಟಿ ರೂಪಾಯಿಗಳು ಗುಲ್ಬರ್ಗಾ ಜಿಲ್ಲೆಗೆ ಹೆಚ್ಚಿಗೆ ಸಿಗುತ್ತವೆ, ಅದೇ ಬೆಂಗಳೂರು, ಮಂಗಳೂರಿಗೆ ಕಡಿಮೆಯಾಗುತ್ತದೆ. ಹೊಸ ನೀತಿಯಿಂದ ಗುಲ್ಬರ್ಗಾ ಜಿಲ್ಲೆಗೆ ಹೆಚ್ಚು ಹಣ ಸಿಗುತ್ತದೆ.

ಶ್ರೀ ಹೆಚ್. ವಿಶ್ವನಾಥ ಪಾಟೀಲ್.—ಗಾಡ್ಗಿಲ್ ಫಾರ್ಮುಲಾ ಪ್ರಕಾರ ಹಣವನ್ನು ಬಿಡುಗಡೆ ಮಾಡಿದರೆ ನಮ್ಮ ಗುಲ್ಬರ್ಗಾ ಜಿಲ್ಲೆಗೆ ಅನ್ಯಾಯವಾಗುತ್ತದೆ.

ಶ್ರೀ ಡಿ. ಎ. ಚಿನ್ನಪ್ಪ.—ಹೌದು, ಆ ಫಾರ್ಮುಲಾ ಪ್ರಕಾರ ಹಣವನ್ನು ಬಿಡುಗಡೆ ಮಾಡಿದರೆ ನಮ್ಮ ಮಲೆನಾಡು ಪ್ರದೇಶಕ್ಕೂ ಅನ್ಯಾಯವಾಗುತ್ತದೆ. ಕಡಿಮೆ ಹಣವನ್ನು ಕೊಟ್ಟರೆ ಏನೂ ಪ್ರಯೋಜನವಾಗುವುದಿಲ್ಲ. ನಮ್ಮ ಏರಿಯಾಕ್ಕೆ ಹೆಚ್ಚು ಹಣ ಕೊಟ್ಟರೆ ಅನುಕೂಲವಾಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇನ್ನು ಮುಂದೆ ಹಣವನ್ನು ಬಿಡುಗಡೆ ಮಾಡುವುದಕ್ಕೆ ಹೊಸ ನಿಯಮವನ್ನು ಅನುಸರಿಸಲಾಗುತ್ತದೆ. ಆಮೇಲೆ ಮಾನ್ಯ ಸದಸ್ಯರು ಗುಲ್ಬರ್ಗಾದಲ್ಲಿ ಹೈದರಾಬಾದ್ ಕರ್ನಾಟಕ ಬೋರ್ಡ್ ಮಾಡಬೇಕೆಂದು ಕೇಳಿದ್ದಾರೆ. ಈ ರೀತಿ ಬೋರ್ಡ್ ಮಾಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ತೆಲ್ಲಂಗಾಣದಲ್ಲೂ ಇದೇ ರೀತಿ ಒಂದು ಬೋರ್ಡ್‌ನ್ನು ಮಾಡಲಾಗಿದೆ ಬಂಗಾಳದಲ್ಲೂ ಸಹ ಬೋರ್ಡ್ ಮಾಡಲಾಗಿದೆ. ಈ ಬೋರ್ಡ್‌ಗೆ ರಾಜ್ಯ ಸರ್ಕಾರ ೫೦ ಪರ್‌ಸೆಂಟ್ ಹಣ ಕೊಟ್ಟರೆ ಕೇಂದ್ರ ಸರ್ಕಾರ ೫೦ ಪರ್‌ಸೆಂಟ್‌ನಷ್ಟು ಹಣ ಕೊಡುತ್ತದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಬೋರ್ಡ್ ಮಾಡುವುದಕ್ಕೆ ಕರಸ್ಪಾಂಡೆನ್ಸ್ ನಡೆಯುತ್ತಿದೆ. ನಾವು ಯೋಜನಾ ಇಲಾಖೆಗೂ ಬರೆದಿದ್ದೇವೆ. ತೆಲಂಗಾಣದಲ್ಲಿ ಯಾವ ರೀತಿ ಬೋರ್ಡ್ ಆಗಿದೆಯೋ ಅದೇ ರೀತಿ ಈ ಬೋರ್ಡ್ ಕೂಡ ಆದರೆ ಅನುಕೂಲವಾಗುತ್ತದೆ.

ಶ್ರೀ ಆರ್. ವೆಂಕಟರಾಮಯ್ಯ.—ತೆಲಂಗಾಣ ಬೋರ್ಡ್ ಎಂದು ಮಾಡಿದ್ದಾರೆ, ರಾಯಲಸೀಮಾ ಬೋರ್ಡ್ ಎಂದು ಮಾಡಿದ್ದಾರೆ. ಈ ರೀತಿ ಬೋರ್ಡ್‌ಗಳನ್ನು ಮಾಡಿದರೆ ೫೦ ಪರ್‌ಸೆಂಟ್‌ನಷ್ಟು ಕೇಂದ್ರ ಸರ್ಕಾರದ ಅನುದಾನ ಬರುತ್ತದೆ ಬರೀ ಕರಸ್ಪಾಂಡೆನ್ಸ್ ಮಾಡಿದರೆ ಏನು ಪ್ರಯೋಜನ ? ಅಲ್ಲಿಗೆ (ಕೇಂದ್ರ ಸರ್ಕಾರಕ್ಕೆ) ಹೋಗಿ ನೀವೇ ಮಾಡಿಸಿಕೊಂಡು ಬರಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ತೆಲಂಗಾಣ ಬಿಟ್ಟರೆ ಬೇರೆ ಆ ತರಹ ಬೋರ್ಡ್ ಇಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ರಾಯಲಸೀಮಾ ಬೋರ್ಡ್ ಉಂಟು. ಅದರ ಪ್ರೆಸಿಡೆಂಟ್ ರವರೂ ನನಗೆ ಗೊತ್ತು, ಚೇರ್‌ಮನ್‌ನವರೂ ನನಗೆ ಗೊತ್ತು.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಬೋರ್ಡ್‌ಗಳಲ್ಲಿ ರಾಜ್ಯ ಸರ್ಕಾರದ ಹಣ ಮಾತ್ರ ಇದೆ. ಕೇಂದ್ರ ಸರ್ಕಾರದ ಹಣ ಇಲ್ಲ.

ಅಧ್ಯಕ್ಷರು.—ಮಾನ್ಯ ವಿಶ್ವನಾಥ ಪಾಟೀಲರೇ ಬೇಗ ಮುಗಿಸಿ.

ಶ್ರೀ ಹೆಚ್. ವಿಶ್ವನಾಥ ಪಾಟೀಲ್.—ಮಾನ್ಯ ಸಚಿವರು ಗುಲ್ಬರ್ಗಾಕ್ಕೆ ಬಂದಿದ್ದಾಗ ಯಾವ ರೀತಿ ನಮ್ಮ ಜಿಲ್ಲೆಗೆ ವಂಚನೆ ಮಾಡಲಾಗುತ್ತಿದೆ ಯಾವ ರೀತಿ ನಮ್ಮ ಗುಲ್ಬರ್ಗಾ ಜಿಲ್ಲೆಗೆ ಬಿಡುಗಡೆ ಯಾದ ಹಣವನ್ನು ಹಿಂತೆಗೆದುಕೊಂಡಿದ್ದಾರೆ ಎಂಬ ಬಗ್ಗೆ ಒಂದು ಸರ್ಕಾರಿ ಆದೇಶವನ್ನು ಸ್ಪಷ್ಟವಾಗಿ ಮಾನ್ಯ ಸಚಿವರಿಗೆ ತೋರಿಸಿದ್ದೆ ಮಾನ್ಯ ಸಚಿವರು ಆ ವಿಷಯವನ್ನು ಗಮನದಲ್ಲಿ ಇಟ್ಟುಕೊಂಡಿದ್ದಾರೋ ಇಲ್ಲವೋ ಎಂದು ಗೊತ್ತಿಲ್ಲ. ನಮ್ಮ ಗುಲ್ಬರ್ಗಾ ಜಿಲ್ಲೆಗೆ ಅನ್ಯಾಯವಾಗದ ರೀತಿಯಲ್ಲಿ ಮಾಡಬೇಕಾದರೆ ಒಂದು ಹೈದರಾಬಾದ್ ಕರ್ನಾಟಕ ಬೋರ್ಡ್ ಮಾಡುವುದು ಅವಶ್ಯಕ ಇದೆ ಈ ಬೋರ್ಡ್‌ನ್ನು ರಚನೆ ಮಾಡಲೇ ಬೇಕು. ಇಲ್ಲದಿದ್ದರೆ ನಾಳೆ ತುಂಬಾ ಕಷ್ಟವಾಗುತ್ತದೆ. ಇದರ ಬಗ್ಗೆ ಉತ್ತರವನ್ನು ಜನಗಳಿಗೆ ಕೊಡುವುದಕ್ಕೆ ನಮಗೂ ಕಷ್ಟವಾಗುತ್ತದೆಂದು ಆ ಭಾಗದ ಜನರ ಪ್ರತಿನಿಧಿಯಾಗಿ ನಾನು ಸರ್ಕಾರಕ್ಕೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಇದೇ ರೀತಿ ನೀರಾವರಿ ಯೋಜನೆಯಲ್ಲೂ ಸಹ ನಮ್ಮ ಗುಲ್ಬರ್ಗಾ ಜಿಲ್ಲೆಗೆ ಅನ್ಯಾಯವಾಗುತ್ತಾ ಬಂದಿದೆ. ಬಜೆಟ್‌ನಲ್ಲಿ ತೋರಿಸುವುದು ಒಂದು, ಹಣ ಬಿಡುಗಡೆ ಮಾಡುವುದು ಇನ್ನೊಂದು ದುಡ್ಡು ಕೊಡುವಾಗ ೨೫ ಪರ್‌ಸೆಂಟ್ ನಷ್ಟು ಸಹ ಬಿಡುಗಡೆ ಮಾಡುವುದಿಲ್ಲ. ಈ ವರ್ಷ ಅಂದರೆ, ೧೯೮೮–೮೯ರಲ್ಲಿ ಗುಲ್ಬರ್ಗಾ ಜಿಲ್ಲೆಯ ಅಭಿವೃದ್ಧಿಗಾಗಿ ಇಟ್ಟಿರುವ ಹಣವನ್ನು ಯಾವ ರೀತಿ, ಅಂದರೆ, ಯಾವ ಯಾವ ಯೋಜನೆಗಳಿಗೆ ಯಾವ ಯಾವ ತಿಂಗಳಿನಲ್ಲಿ ಎಷ್ಟೆಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ ಎಂಬ ಬಗ್ಗೆ ಕ್ಲಿಯರ್‌ಕಟ್ ಆಗಿ ನಮಗೆ ಹೇಳಬೇಕಾಗು

ತ್ತದೆ. ಇದರ ಬಗ್ಗೆ ಮಾನ್ಯ ಸಚಿವರು ರಿಪ್ಲೈ ಮಾಡುವಾಗ ಉತ್ತರ ಕೊಡಬೇಕು. ಬಜೆಟ್‌ನಲ್ಲಿ ಇಟ್ಟಿರುವ ಹಣದಲ್ಲಿ ಎಷ್ಟೆಷ್ಟು ಬಿಡುಗಡೆ ಮಾಡಲಾಗಿದೆ ಎಂಬ ಬಗ್ಗೆ ನಮಗೆ ತಿಳಿಸಬೇಕೆಂದು ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಕೊನೆಯದಾಗಿ ಕಂದಾಯ ಇಲಾಖೆಯ ಬಗ್ಗೆ ಬಹಳಷ್ಟು ಕಡಿಮೆ ಪ್ರಮಾಣದಲ್ಲಿ ಹೇಳುವುದಾದರೆ ನಮ್ಮ ಜಿಲ್ಲೆಯು ರಾಜ್ಯದಲ್ಲಿನ ಎರಡನೇ ದೊಡ್ಡ ಜಿಲ್ಲೆಯಾಗಿದೆ. ಆ ಕಾರಣದಿಂದ ನಮ್ಮ ಜಿಲ್ಲೆಯ ಒಂದು ಭಾಗದಿಂದ ಇನ್ನೊಂದು ಭಾಗದಲ್ಲಿ ಏನು ನಡೆಯುತ್ತಾ ಇದೆ ಎಂದು ತಿಳಿಯುವುದು ಕಷ್ಟವಾಗಿದೆ. ಇದರಿಂದಾಗಿ ಬಹಳಷ್ಟು ಅನಾನುಕೂಲವೂ ಆಗಿರುತ್ತದೆ. ಆದುದರಿಂದ ಈ ನಮ್ಮ ಜಿಲ್ಲೆಯನ್ನು ವಿಭಾಗ ಮಾಡಿ ಎರಡು ಜಿಲ್ಲೆಗಳನ್ನಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅದೇ ಪ್ರಕಾರ ನಮ್ಮ ಜಿಲ್ಲೆಯಲ್ಲಿನ ಚಿತಾಪುರ ತಾಲ್ಲೂಕು ಅತೀ ದೊಡ್ಡ ತಾಲ್ಲೂಕು ಆಗಿರುತ್ತದೆ. ಇದು ಸುಮಾರು ೧೭೫ ಕಿ.ಮೀ.ಗಳ ಅಂತರ ಇರುವಂತಹ ದೊಡ್ಡ ತಾಲ್ಲೂಕು ಆಗಿದೆ. ಹೀಗಾಗಿ ಜನರಿಗೆ ತುಂಬಾ ತೊಂದರೆಯಾಗಿರುತ್ತದೆ. ಚಿತ್ತಾಪುರವನ್ನು ಎರಡು ತಾಲ್ಲೂಕುಗಳಾಗಿ ಮಾಡಬೇಕೆಂದು ಅಂದರೆ ಚಿತ್ತಾಪುರ ಮತ್ತು ಕಾಳಗಿ ಹೀಗೆ ಎರಡು ತಾಲ್ಲೂಕುಗಳಾಗಿ ಮಾಡಬೇಕೆಂದು ಆ ಬಗ್ಗೆ ನೇಮಿಸಿದ್ದ ಸಮಿತಿಯವರು ಸಲಹೆ ಮಾಡಿದ್ದಾರೆ, ಸಮಿತಿಯ ಸದಸ್ಯರುಗಳಾದ ಹುಂಡೇಕರ್‌ರವರು ಗದ್ದೀಗೌಡರು ಮತ್ತು ವಾಸುದೇವರಾವ್‌ರವರು ಕೂಡ ಈ ತಾಲ್ಲೂಕನ್ನು ವಿಭಜನೆ ಮಾಡುವುದರ ಬಗ್ಗೆ ರಿಪೋರ್ಟ್‌ನಲ್ಲಿ ಹೇಳಿದ್ದಾರೆ. ಈ ಒಂದು ತಾಲ್ಲೂಕು ಪುನರ್ ವಿಂಗಡಣಾ ಕಾರ್ಯವನ್ನು ತತ್‌ಕ್ಷಣವೇ ಮಾಡಿ ೩೫ ವರ್ಷಗಳಿಂದಲೂ ಆ ಭಾಗದ ಜನರು ಪಡುತ್ತಿರುವ ಬವಣೆಯನ್ನು ತಪ್ಪಿಸಬೇಕೆಂದು ಕೇಳಿಕೊಳ್ಳುತ್ತಾ ತಮ್ಮ ಕೆಲಸಕಾರ್ಯಗಳಿಗಾಗಿ ೧೧೦ ಕಿ.ಮೀ. ಅಂತರವನ್ನು ದಾಟಿ ಬರುವ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಒಂದು ತೊಂದರೆಯನ್ನು ನಿವಾರಣೆ ಮಾಡುವುದಕ್ಕೆ ಕಾಳಗಿಯನ್ನು ತಾಲ್ಲೂಕು ಎಂದು ಘೋಷಣೆಯನ್ನು ಮಾಡಬೇಕು. ಅದಕ್ಕೆ ಸೂಕ್ತ ಕ್ರಮವನ್ನು ತೆಗೆದುಕೊಂಡು ಆ ತಾಲ್ಲೂಕು ಕಚೇರಿಯನ್ನು ತಮ್ಮ ಕೈಯಲ್ಲಿಯೇ ಉದ್ಘಾಟನೆ ಮಾಡುವಂತೆ ಆಗಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತಾ, ನನಗೆ ಇಷ್ಟ ಮಾತುಗಳನ್ನು ಆಡುವುದಕ್ಕೆ ಸದವಕಾಶವನ್ನು ಕಲ್ಪಿಸಿಕೊಟ್ಟ ತಮಗೆ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಧನ್ಯವಾದಗಳು.

† ಶ್ರೀ ಕೆ. ಬಿ. ಕೋಳಿವಾಡ (ರಾಣೆ ಬೆನ್ನೂರು).—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ದೇಶ ಕೃಷಿ ಪ್ರಧಾನವಾಗಿರತಕ್ಕಂಥ ದೇಶ ರಾಷ್ಟ್ರಮಟ್ಟದಲ್ಲಿಯೂ, ರಾಜ್ಯ ಮಟ್ಟದಲ್ಲಿಯೂ ಯಾವುದೇ ಒಂದು ಅಭಿವೃದ್ಧಿ ಹೊಂದಬೇಕಾದರೆ ಮೊದಲು ಕೃಷಿ ಕ್ಷೇತ್ರದ ಅಭಿವೃದ್ಧಿಯಾದರೆ ಮಾತ್ರ ಅದು ಸಾಧ್ಯವಾಗುತ್ತದೆ. ಈ ಕ್ಷೇತ್ರದ ಅಭಿವೃದ್ಧಿ ಆದ ಮೇಲೆ ಮಾತ್ರ ರಾಜ್ಯದ ಅಭಿವೃದ್ಧಿ ದೇಶದ ಅಭಿವೃದ್ಧಿಯಾಗುವುದಕ್ಕೆ ಸಾಧ್ಯವಾಗುತ್ತದೆ. ಆದುದರಿಂದ ಈ ಕೃಷಿ ಕ್ಷೇತ್ರದ ಅಭಿವೃದ್ಧಿ ಮಾಡಲು ನೀರಾವರಿ ಸವಲತ್ತುಗಳನ್ನು ಮಾಡಿಕೊಡಬೇಕೆಂದರೂ, ಹಾಗೆ ಸೌಲಭ್ಯಗಳನ್ನು ಒದಗಿಸಿಕೊಟ್ಟಾಗ ಮಾತ್ರ ಇದು ಸಾಧ್ಯ ಎಂದು ಒತ್ತಾಯದ ಮೂಲಕ ಹೇಳಬಯಸುತ್ತೇನೆ. ರಾಷ್ಟ್ರಮಟ್ಟದಲ್ಲಿ ಪಂಡಿತ್ ನೆಹರೂಜಿಯವರ ಕಾಲದಲ್ಲಿ ನೀರಾವರಿ ಬಗ್ಗೆ ಹೆಚ್ಚಿನ ಒಂದು ಮಹತ್ವವನ್ನು ಕೊಟ್ಟು ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ಪ್ರಾರಂಭ ಮಾಡಿ, ದೇಶದಲ್ಲಿ ಅದನ್ನು ಮುಂದುವರಿಸಿಕೊಂಡು ಬರುತ್ತಾ ಇದ್ದಾರೆ. ಆದರೆ ನಮ್ಮ ರಾಜ್ಯದಲ್ಲಿ ವಿಚಾರದಲ್ಲಿ ಬಹಳ ಮನ ನೊಂದು ಈ ವಿಷಯವನ್ನು ಹೇಳಬೇಕಾಗುತ್ತದೆ, ೨೦೦೦ದ ಇಸವಿಯೊಳಗಾಗಿ ರಾಜ್ಯದ ಹಕ್ಕಿನ ಎಲ್ಲಾ ನೀರನ್ನು ಬಳಕೆ ಮಾಡಿಕೊಳ್ಳುತ್ತೇವೆ ಎಂದು ಪದೇ ಪದೇ ಹೇಳುತ್ತಾ ಬಂದಿರುವ ನೀರಾವರಿ ಸಚಿವ ಮಾನ್ಯ ದೇವೇಗೌಡರು ಈಗ ಆ ಸ್ಥಾನದಲ್ಲಿ ಇಲ್ಲ. ಒಂದು ಹನಿ ನೀರನ್ನು ಕೂಡ ಬಿಟ್ಟು ಕೊಡುವುದಿಲ್ಲ ಎಲ್ಲವನ್ನೂ ನಾವು ಉಪಯೋಗಿಸಿ ಕೊಳ್ಳುತ್ತೇವೆ ಎಂದು ಅವರು ಹೇಳಿದ್ದಾರೆ. ಅದಕ್ಕಾಗಿ ಪ್ರತೀ ವರ್ಷ ೩೦೦ ಕೋಟಿ ರೂಪಾಯಿಗಳನ್ನು ಉಪಯೋಗಿಸಿ ೨೦೦೦ನೇ ಇಸವಿಯೊಳಗಾಗಿ ಖಂಡಿತಾ ಉಪಯೋಗಿಸಿಕೊಳ್ಳುತ್ತೇವೆ ಎಂದು ಹೇಳಿದವರು ಇಂದು ಆ ಸ್ಥಳದಲ್ಲಿ ಇಲ್ಲದಿರುವುದು ಬಹಳ ಮನನೊಂದುಕೊಳ್ಳುವ ವಿಷಯವಾಗಿದೆ. ಕೆಲವೊಂದು ರಾಜ್ಯದಲ್ಲಿನ ನೀರಾವರಿ ಯೋಜನೆಗಳ ಬಗ್ಗೆ ಹೆಚ್ಚಿನ ಒತ್ತಡವನ್ನು ಕೊಟ್ಟು ಹೇಳಬೇಕಾಗುತ್ತದೆ. ೧೯೭೫ನೇ ಇಸವಿಯಿಂದಲೂ, ಆ ಕಾಲದಲ್ಲಿ ನಾನು ಶಾಸಕನಾಗಿಲ್ಲದಿದ್ದರೂ ಕೂಡ ಅಲ್ಲಿಂದ ನಾವು ಈ ಅಪ್ಪರ್ ತುಂಗಾ ಯೋಜನೆಯ ಬಗ್ಗೆ ಹೋರಾಟ ಮಾಡುತ್ತಾ ಬಂದಿದ್ದೇವೆ. ಆದರೂ ಸಹ ಇನ್ನೂ ಆ ಯೋಜನೆಯ ಬಗ್ಗೆ ಒಂದು ತಯಾರಿಯನ್ನು ಮಾಡುತ್ತಾ ಇದ್ದಾರೆಯೇ ವಿನಹ ನಿರ್ದಿಷ್ಟವಾದ ಒಂದು ನೀಲಿ ನಕ್ಷೆ ಮತ್ತಿತರ ಅಗತ್ಯ ಪ್ರಯತ್ನಗಳನ್ನು, ಕಾರ್ಯಕ್ರಮಗಳನ್ನು ತೆಗೆದುಕೊಂಡಿಲ್ಲ.

ಇದನ್ನು ನೋಡಿದರೆ ನಮ್ಮ ಉತ್ತರ ಕರ್ನಾಟಕ ವಿಭಾಗದ ಬಗ್ಗೆ ಮಾನ್ಯ ಮಂತ್ರಿಗಳಿಗೆ ಅಷ್ಟೊಂದು ಆಸಕ್ತಿ ಇಲ್ಲ ಎಂದು ಹೇಳಬೇಕಾಗುತ್ತದೆ. ಆಗಾಗ ಇವೊತ್ತು ನೀರಾವರಿ ಮಂತ್ರಿಗಳು ನಮ್ಮವರೇ ಆಗಿದ್ದಾರೆ. ಅಪ್ಪರ್ ತುಂಗಾ ಯೋಜನೆ ಮಾಡಿ, ಗಾಜನೂರು ಮೊದಲ ಹಂತವನ್ನು ೧೩ ಫೂಟ್‌ಗಳಷ್ಟು ಎತ್ತರ ಮಾಡಿದರೆ, ಮಳೆಗಾಲದಲ್ಲಿ ಸಾಕಷ್ಟು ನೀರು ತುಂಬಿ ಶಿವಮೊಗ್ಗ ಹೊನ್ನಾಳಿ, ಮತ್ತು ರಾಣೆಬೆನ್ನೂರು ತಾಲ್ಲೂಕುಗಳಲ್ಲಿನ ಸುಮಾರು ನಾಲ್ಕು ಲಕ್ಷ ಹೆಕ್ಟೇರ್‌ಗಳ ಜಮೀನಿಗೆ ನೀರಾವರಿ ಆಗತಕ್ಕಂಥ ಒಂದು ಸಾಧ್ಯತೆ ಇದೆ. ಹಾವೇರಿಯ ಕೆಲವು ಭಾಗಗಳಿಗೂ ಇದರಿಂದ ನೀರಾವರಿ ಆಗುತ್ತದೆ. ಇದು ಬಹಳ ಕಡಿಮೆ ವೆಚ್ಚದಲ್ಲಿ ಆಗತಕ್ಕಂಥ ಯೋಜನೆಯಾಗಿದೆ. ಆ ಬಗ್ಗೆ ೧೯೭೫ನೇ ಇಸವಿಯಿಂದಲೂ ಸಾಕಷ್ಟು ಒತ್ತಡವನ್ನು ತಂದರೂ ಸಹಿತ ಇನ್ನೂ ಸರ್ವೆ ಮಾಡುತ್ತಾ ಇದ್ದೇವೆ ಎಂದು ಹೇಳುತ್ತಾ ಇದ್ದಾರೆಯೇ ವಿನಹ ಯಾವುದೇ ಒಂದು ಕಳಕಳಿಯನ್ನು ಆ ಬಗ್ಗೆ ಸಾಕಷ್ಟು ಪ್ರಮಾಣದಲ್ಲಿ ಮಾಡಿಲ್ಲ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಹೋದ ಸಾರಿ ಮಾನ್ಯ ಬೊಮ್ಮಾಯಿಯವರ ಮುಖಂಡತ್ವದಲ್ಲಿ ಧಾರವಾಡ ಜಿಲ್ಲೆಯ ಎಲ್ಲಾ ಶಾಸಕರೂ ಕೂಡ ಮಾನ್ಯ ಮುಖ್ಯ ಮಂತ್ರಿಗಳನ್ನು ಭೇಟಿಯಾಗಿ ಒತ್ತಡ ತಂದ ಮೇಲೆ ಅಪ್ಪರ್ ತುಂಗಾ ಬಗ್ಗೆ ೧೯೭೮ರಲ್ಲಿ ೨೫ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ ೧೯೭೯ ರಲ್ಲಿಯೂ ೨೫ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಇದನ್ನು ನೋಡಿದರೆ ಸುಮ್ಮನೆ ಜನರ ಕಣ್ಣು ಒರೆಸುವ ತಂತ್ರವನ್ನು ಮಾಡುತ್ತಾ ಇದ್ದಾರೆ ಎಂದು ಹೇಳಬೇಕಾಗುತ್ತದೆ. ನಿಮ್ಮಲ್ಲಿ ದುಡ್ಡಿಲ್ಲದಿದ್ದರೆ ಹೇಳಿಬಿಡಿ. ಮಾನ್ಯ ಸಚಿವರು ಇದನ್ನು ಚೆನ್ನಾಗಿ ಗಮನಿಸಲಿ. ನಮ್ಮ ಸರ್ಕಾರದಲ್ಲಿ ಕಡಿಮೆ ದುಡ್ಡಿದೆ ಎಂದರೆ ನಾವು ಅದಕ್ಕೆ ವ್ಯವಸ್ಥೆ ಮಾಡುವುದಕ್ಕೆ ಸಿದ್ಧವಿದ್ದೇವೆ. ಮಾನ್ಯ ವೀರಣ್ಣನವರು ಸೇವಿಂಗ್ಸ್ ಎಂದು ಹೇಳಿ ಸಾವಿರಾರು ಕೋಟಿ ರೂ ಗಳನ್ನು ಹೇಗೆ ಸರ್ಟಿಫಿಕೇಟ್ಸ್ ಮೂಲಕ ಮೂಲಕ ಸಂಗ್ರಹಿಸುತ್ತಿದ್ದಾರೋ ಆ ಹಣವನ್ನೆಲ್ಲಾ ನೀವು ಪಗಾರ ಕೊಡಲಿಕ್ಕೆ ಉಪಯೋಗ ಮಾಡುತ್ತಿದ್ದೀರೇ ಹೊರತು ಬೇರೇದಕ್ಕೂ ಅಲ್ಲ ಆದರೆ ನಾವು ಇರಿಗೇಷನ್ ಸೇವಿಂಗ್ಸ್ ಸರ್ಟಿಫಿಕೇಟ್ ಅಂತ ಹೊಸದಾಗಿ ಕೊಳ್ಳುವುದಕ್ಕೆ ತಯಾರಿದ್ದೇವೆ. ನೀವು ಅದನ್ನು ಇಂಟರ್‌ಡ್ಯೂಸ್ ಮಾಡಿ ಬಂದ ದುಡ್ಡನ್ನು ನಮ್ಮ ನೀರಾವರಿ ಯೋಜನೆಗಳಿಗೆ ವಿನಿಯೋಗಿಸಬೇಕು. ಇದೇ ವರ್ಷವೇ ಶುರು ಮಾಡಬೇಕು. ನಮ್ಮ ಭಾಗದ ಜನರ ಅಭಿಪ್ರಾಯ ಹೀಗಿದೆ. ಅಲ್ಲದೆ ಆರ್ ಎಲ್ ಇ ಜಿ ಪಿ, ಎನ್ ಆರ್ ಇ ಪಿ, ಬರಗಾಲ ಪರಿಹಾರ ಯೋಜನೆಗಳಲ್ಲಿ ಆದರೂ ಸಹ ಹಣ ಬಳಸಿ ಕೆನಲ್ ವರ್ಕ್ಸ್ ಅನ್ನು ಪ್ರಾರಂಭಿಸಿ ಎಂದು ಒತ್ತಾಯಿಸುತ್ತೇನೆ. ಅಪ್ಪರ್ ತುಂಗಾ ಬಗ್ಗೆ ಇದುವರೆಗೂ ಸರ್ಕಾರ ಮಲತಾಯಿ ಧೋರಣೆ ತಾಳಿದೆ ಎಂದು ಹೇಳುತ್ತೇನೆ. ಇದರಲ್ಲಿ ಪಕ್ಷ ಮತ್ತು ಪಂಗಡಗಳ ಪ್ರಶ್ನೆ ಇಲ್ಲ. ಉದಾಹರಣೆಗೆ ಅಪ್ಪರ್ ಭದ್ರಾ ಬಗ್ಗೆ ಜನತಾ ಪಕ್ಷದವರು ಕಾಂಗ್ರೆಸ್‌ನವರು ಪ್ರಯತ್ನ ಪಡುತ್ತಿದ್ದು ಒತ್ತಡ ತರುತ್ತಿದ್ದಾರೆ. ಆದರೆ ಅಪ್ಪರ ತುಂಗಾ ಬಗ್ಗೆ ನಾವು ಏನಾದರೂ ಪ್ರಯತ್ನ ಮಾಡಿದರೆ ಕಾಂಗ್ರೆಸ್‌ನವರು ಪ್ರಯತ್ನ ಮಾಡುತ್ತಿದ್ದಾರೆ ಎನ್ನುವ ಹಾಗಾಗಬಾರದು. ತಮ್ಮ ಮುಖಂಡತ್ವದಲ್ಲಿ ಈ ಕೆಲಸ ಮಾಡಲು ನಾವೆಲ್ಲರೂ ತಯಾರಿದ್ದೇವೆ. ಆದ್ದರಿಂದ ಈ ವರ್ಷವೇ ನೀರಾವರಿ ಮಂತ್ರಿಗಳು ಹೇಗೂ ನಮ್ಮವರೇ ಆಗಿರುವುದರಿಂದ ಕೆನಾಲ್ ವರ್ಕ್ಸ್ ಅನ್ನು ಶುರು ಮಾಡಲಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಪ್ಪರ್ ತುಂಗಾ ಭದ್ರಾ ಬಗ್ಗೆ ಎಲ್ಲರದೂ ಒಂದೇ ಪ್ರಯತ್ನ

ಶ್ರೀ ಕೆ. ಬಿ. ಕೋಳಿವಾಡ.—ಖ್ಯಾತ ಇಂಜಿನಿಯರಾದ ಶ್ರೀ ಬಾಳೆಕುಂದರಿಯವರೇ ಅಪ್ಪರ್ ತುಂಗಾ ಫೋಸ್ಟ್ ಎಕನಾಮಿಕ್ ಪ್ರಾಜೆಕ್ಟ್ ಎಂದು ಹೇಳಿದ ಆಧಾರದ ಮೇಲೆ ಏಕೆ ಇಷ್ಟು ವಿಳಂಬವಾಗುತ್ತಿದೆ. ? ಅಪ್ಪರ್ ಭದ್ರಾ ಬಗ್ಗೆ ೧೦೦ ಕಿ. ಮಿ. ಉದ್ದ ವಾಟರ್ ಫ್ಲೋ ಕೆನಲ್‌ನಲ್ಲಿ ಆಗಬಹುದು. ಆದರೂ ಸರ್ಕಾರ್ ಅದರ ಬಗ್ಗೆ ಕೆಲಸ ಮಾಡುತ್ತಿಲ್ಲ. ಬಹುಶ; ಸರ್ಕಾರ ಬೇರೆ ಯಾವುದೋ ಒತ್ತಡಗಳಿಗೆ ಮಣಿಯುತ್ತಿದೆಯೇನೋ ಎನಿಸುತ್ತಿದೆ. ಅಪ್ಪರ್ ತುಂಗಾ ಬಗ್ಗೆ ತಾವು ಪ್ರಯತ್ನ ಮೊದಲು ಮಾಡಬೇಕಾಗುತ್ತದೆ. ಅದಕ್ಕೆ ಬೇಕಾದ ಹಣವನ್ನು ಇರಿಗೇಷನ್ ಸೇವಿಂಗ್ಸ್ ಸರ್ಟಿಫಿಕೇಟ್‌ನಡಿಯಲ್ಲಿ ಸಂಗ್ರಹಿಡಿಸಿಕೊಡಲು ನಾವು ಸಿದ್ಧರಿದ್ದೇವೆ.

ಇನ್ನು ಮದನ್‌ಮಾನೂರ್ ಟ್ಯಾಂಕ್ ಬಗ್ಗೆ ಅನೇಕ ವರ್ಷಗಳಿಂದ ಹಾಗೇ ಇದೆ. ೨೦–೨೫ ಕಿಲೋಮೀಟರ್ ಕೆನಾಲ್ ಮಾಡಿ ಬಿಟ್ಟರೆ ಮಳೆಗಾಲದಲ್ಲಿ ಹೋಗುವ ವೇಸ್ಟ್ ವಾಟರನ್ನು ಹಿರೇಕೆರೂರು ಹಾಗೂ ಮುಂಡರ್ಗಿ ಸೈಡ್ ನೀರು ಹೋಗುತ್ತದೆ. ಇದಕ್ಕೆ ಏಕೆ ಪ್ರಯತ್ನ ಮಾಡುತ್ತಿಲ್ಲ ಎಂದು ಕೇಳಿ ಅದನ್ನು ಕೂಡಲೇ ಕೈಗೆತ್ತಿಗೊಳ್ಳಿ ಎಂದು ಒತ್ತಾಯಿಸುತ್ತೇನೆ. ಹೋದವರ್ಷ

ಈ ಯೋಜನೆಗೆ ೫೦ ಲಕ್ಷ ಇಟ್ಟಿದ್ದಿರಿ ಅವನ್ನೆ ಉಪಯೋಗವಾಗಲಿಲ್ಲ. ಈ ವರ್ಷ ಬರೀ ೧೦ ಲಕ್ಷ ಇಟ್ಟಿದ್ದೀರಿ. ಇದರಿಂದ ತಮಗೆ ಎಷ್ಟು ಕಳಕಳಿ ಇದೆ ಎಂಬುದು ಮತ್ತು ಎಷ್ಟು ಲವಲವಿಕೆ ಇದೆ ಎಂದು ಸಂಶಯ ಪಡುವ ಸ್ಥಿತಿಗೆ ಈಗ ಜನತೆ ಬಂದಿದ್ದಾರೆ. ಆದ್ದರಿಂದ ಸಚಿವರಾದ ತಾವು ನಮ್ಮ ಕಡೆಯು ವರಿದ್ದೀರಿ. ನಮ್ಮ ಹಿರೇಕೆರೂರು, ರಾಣಿಬೆನ್ನೂರು ಕೆರೆಹಟ್ಟಿ, ಹಾವೇರಿ, ಮುಂಡರ್ಗಯವರೆಗೆ, ಸತತ ಬರಗಾಲವನ್ನು ಎದುರಿಸುತ್ತಿವೆ. ಇಲ್ಲಿ ಯಾವುದಾದರೂ ಒಂದು ಪರ್ಮನೆಂಟಾದ ಇರಿಗೇಷನ್ ಪ್ರೊಜೆಕ್ಟನ್ನು ಮಾಡಬೇಕಾದರೆ ಅದು ಅಪ್ಪರ್ ತುಂಗಾ ಮತ್ತು ಮದನಮಾಸೂರು ಟ್ಯಾಂಕನ್ನು ಮಾಡಬೇಕಾಗುತ್ತದೆ. ಇದನ್ನು ತಾವು ಏಕೆ ಮಾಡಬಾರದು ? ನಿಮ್ಮ ಸರ್ಕಾರ ಇದ್ದಾಗ ಏಕೆ ಮಾಡಲಿಲ್ಲ ಎಂದು ನೀವು ಕೇಳಬಹುದು, ಹೌದು ನಾವು ಮಾಡದೆ ತಪ್ಪು ಮಾಡಿದ್ದೇವೆ, ಮಾಡಿದ್ದೋ ಆ ತಪ್ಪು ನಿಮ್ಮಿಂದ ಸರಿಹೋಗಬೇಕೇ ಹೊರತು ಅದನ್ನು ಮುಂದುವರಿಸುವುದಲ್ಲ. ನೀವು ಆದರೆ ನಮ್ಮ ಮಾನ್ಯ ಬೊಮ್ಮಾಯಿಯವರು ಮಂತ್ರಿಯಾಗಿದ್ದಾಗ ಅದನ್ನು ಮಾಡಿದ್ದರಪ್ಪ ಎಂದು ಶಹಭಾಷ್‌ಗಿರಿ ಕೊಡುತ್ತೇವೆ. ಆದ್ದರಿಂದ ಈ ವರ್ಷವೇ ಮದನಮಾಸೂರು ಮತ್ತು ಅಪ್ಪರ್ ತುಂಗಾಗಳನು ಕೈಗೊಳ್ಳಿ. ಧಾರವಾಡ ಜಿಲ್ಲೆಯಲ್ಲಿ ರೋಣ ತಾಲೂಕಿನಲ್ಲಿ ಮಲಪ್ರಭಾ ಲೆಫ್ಟ್ ಬ್ಯಾಂಕ್ ಕೆನಾಲ್‌ನಲ್ಲಿ ಈಗಾಗಲೇ ಹಳೆಹಾಲೂರು ಮತ್ತು ಹಿಡಗಲಿ ನೀರು ಬಿಡುತ್ತಿದ್ದಾರೆ. ಬಸವನಕೋಟೆ ಎಂಬ ಗ್ರಾಮ ಅಲ್ಲಿದೆ. ಅಲ್ಲಿ ಒಂದು ಅಕ್ವಿಡೇಟ್ ಕಟ್ಟಿದರೆ ಅಲ್ಲಿಂದ ನೀರು ಬೇಕಾದ ಕಡೆ ಹಾಯಿಸಬಹುದು.

ಇದನ್ನು ಮಾಡಿದರೆ ೧೦--೧೫ ತಾಲ್ಲೂಕುಗಳಿಗೆ ನೀರು ಸಿಗುತ್ತದೆ. ೧೯೮೭ ರಲ್ಲಿ ಈ ಕೆಲಸವನ್ನು ಪ್ರಾರಂಭ ಮಾಡುತ್ತೇವೆಂದು ಮಾನ್ಯ ದೇವೇಗೌಡರವರು ವಿಧಾನ ಪರಿಷತ್ತಿನಲ್ಲಿ ಮಾತು ಕೊಟ್ಟಿದ್ದರೂ ಕೂಡ ಈ ಕೆಲಸವಾಗಿಲ್ಲ. ನೀರಾವರಿ ಕೆಲಸಕ್ಕೆ ಹೆಚ್ಚು ಒತ್ತು ಕೊಟ್ಟು ಕೆಲಸ ಮಾಡಬೇಕಾಗುತ್ತದೆ. ಇನ್ನು ಲಿಫ್ಟ್ ಇರಿಗೇಷನ್ ಬಗ್ಗೆ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಸರಕಾರದವರು ಸುಮ್ಮನೆ ಶಾಸಕರ ಕಣ್ಣು ಒರೆಸುವುದಕ್ಕೆ ಹಾಗೂ ಜನತೆಯ ಕಣ್ಣು ಒರೆಸತಕ್ಕಂತಹ ಯೋಜನೆಯನ್ನು ಮಾಡಿ ಅದನ್ನು ಬಡ್ಜೆಟ್‌ನಲ್ಲಿ ಸೇರಿಸಿರುತ್ತಾರೆ, ಒಮ್ಮೆ ಬಡ್ಜೆಟ್‌ನಲ್ಲಿ ಸೇರಿದ ಯೋಜನೆಯು ೩ ವರ್ಷದಲ್ಲಿ ಮುಗಿಯುವಂತೆ ಮಾಡಬೇಕು, ಹಾಗಾದರೆ ಮಾತ್ರ ಅದನ್ನು ಬಡ್ಜೆಟ್‌ನಲ್ಲಿ ಸೇರಿಸಬೇಕು ಇಲ್ಲದಿದ್ದರೆ ಹಾಕಬಾರದು. ಕೆಲವಕ್ಕೆ ಒಂದು ಸಾವಿರ, ಎರಡು ಸಾವಿರ ಟೋಕನ್ ಗ್ರಾಂಟ್ ಕೊಟ್ಟು ಮಾಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ ಇದರಿಂದಾಗಿ ಲಿಫ್ಟ್ ಇರಿಗೇಷನ್‌ಗೆ ಪ್ರಯೋಜನವಾಗುವುದಿಲ್ಲ. ಜನರಿಗೆ ಮೋಸ ಮಾಡತಕ್ಕಂತಹ ಕಾರ್ಯವನ್ನು ಸರಕಾರ ಮಾಡುತ್ತಿದೆ ಎಂದರೆ ತಪ್ಪಾಗಲಾರದು ಮತ್ತು ಇವತ್ತು ಲಿಫ್ಟ್ ಇರಿಗೇಷನ್ ಮೈನ್‌ಟೆನೆನ್ಸ್ ಅನ್ನು ಯಾರೂ ಮಾಡುತ್ತಿಲ್ಲ. ಅಲ್ಲಿ ಸುಟ್ಟಂತಹ ಮೋಟಾರುಗಳು ಏನು ಇವೆ ಅವುಗಳನ್ನು ಬದಲಾಯಿಸುವುದಿಲ್ಲ. ರಾಣಿಬೆನ್ನೂರು ತಾಲ್ಲೂಕಿನ ಮುದನೂರು ಲಿಫ್ಟ್ ಇರಿಗೇಷನ್‌ನಲ್ಲಿ ೨೦೦ ಹೆಚ್. ಪಿ. ಮೋಟಾರು ಸುಟ್ಟು ೪ ತಿಂಗಳಾಯಿತು ಇದರ ಬಗ್ಗೆ ಇಂಜಿನಿಯರ್‌ಗೆ ದೂರು ಕೊಟ್ಟಿದ್ದಕ್ಕೆ ಈ ಸರಕಾರದಲ್ಲಿ ದುಡ್ಡು ಇಲ್ಲ ಎಂದು ಹೇಳುತ್ತಾರೆ. ಅದು ರೈಟಿಂಗ್‌ನಲ್ಲಿದೆ. ಇವತ್ತು ನೀರಾವರಿ ಪರಿಸ್ಥಿತಿ ಯಾವ ಮಟ್ಟಕ್ಕೆ ಬಂದಿದೆ ಎಂಬುದನ್ನು ನಾವು ವಿಚಾರ ಮಾಡಬೇಕಾಗಿದೆ. ಧಾರ್ಮಿಕ ಸಂಸ್ಥೆಗಳಿಂದ, ಕಾರ್ಪೊರೇಷನ್ಸ್‌ಗಳಿಂದ ಹಣವನ್ನು ತೆಗೆದುಕೊಳ್ಳುತ್ತಿದ್ದೀರಿ, ಅದನ್ನು ಕೇವಲ ಪಗಾರ ಕೊಡಲಿಕ್ಕೆ ಉಪಯೋಗ ಮಾಡುತ್ತಿದ್ದೀರಿ. ಆದರೆ ಈ ನೀರಾವರಿ ಕಡೆಗೆ ಲಕ್ಷ್ಯ ವಹಿಸುತ್ತಿಲ್ಲ. ಇದರಲ್ಲಿ ಅಸಮರ್ಥರಾಗಿದ್ದೀರಿ ಎಂದು ಹೇಳಿದರೆ ತಪ್ಪಾಗುವುದಿಲ್ಲವೆಂದು ಅನಿಸುತ್ತದೆ. ಜಿಲ್ಲಾ ಪರಿಷತ್ತು ಬಂದ ಮೇಲೆ ಅಲ್ಲಿನ ಕೆಲವೊಂದು ಪರಿಸ್ಥಿತಿಯನ್ನು ನೋಡಿದರೆ ಬಹಳ ವ್ಯಸನವಾಗುತ್ತದೆ. ಲೋಕೋಪಯೋಗಿ ಇಲಾಖೆಯಲ್ಲಿನ ಲಿಫ್ಟ್ ಇರಿಗೇಷನ್ ಕೆಲಸವೇನು ಇತ್ತು ಅದನ್ನು ಜಿಲ್ಲಾ ಪರಿಷತ್ತಿಗೆ ಟ್ರಾನ್ಸ್‌ಫರ್ ಮಾಡಿದ್ದಾರೆ. ಇದನ್ನು ಯಾರು ಮಾಡಿದ್ದಾರೋ ಗೊತ್ತಿಲ್ಲ. ರಾಣಿಬೆನ್ನೂರಿನಲ್ಲಿನ ಆರೋಗ್ಯ ಇಲಾಖೆಯ ವತಿಯಿಂದ ದವಾಖಾನೆಯನ್ನು ಕಟ್ಟಬೇಕಾಗಿತ್ತು ಆ ಕಟ್ಟಡ ಕಟ್ಟುವ ಕೆಲಸವನ್ನು ಲೋಕೋಪಯೋಗೀ ಇಲಾಖೆಗೆ ವಹಿಸಿದ್ದು ಜಿಲ್ಲಾ ಪರಿಷತ್ತು ಜಾರಿಗೆ ಬಂದ ಮೇಲೆ ಅದಕ್ಕೆ ಟ್ರಾನ್ಸ್‌ಫರ್ ಮಾಡಿದ್ದಾರೆ. ಲೋಕೋಪಯೋಗಿ ಇಲಾಖೆಯಲ್ಲಿ ಮೊದಲೇ ಕೆಲಸವಿಲ್ಲ. ಒಂದೋ ಎರಡೋ ಕೆಲಸವಿದ್ದರೆ ಅದನ್ನು ಜಿಲ್ಲಾ ಪರಿಷತ್ತಿಗೆ ಟ್ರಾನ್ಸ್‌ಫರ್ ಮಾಡಿದ್ದಾರೆ ಲಿಂಗನಹಳ್ಳಿಯಲ್ಲಿ ಭಂಡಾರ ಕಟ್ಟುವ ಕೆಲಸವನ್ನು ಕೂಡ ಟ್ರಾನ್ಸ್‌ಫರ್ ಮಾಡಿದ್ದಾರೆ ಇವನ್ನೆಲ್ಲಾ ಜಿಲ್ಲಾ ಪರಿಷತ್ತಿಗೆ ಟ್ರಾನ್ಸ್‌ಫರ್ ಮಾಡಿ ತಮಗೆ ಬೇಕಾದಂತಹ ಅಧಿಕಾರಿಗಳನ್ನು ಅಲ್ಲಿಗೆ ವರ್ಗ

ಮಾಡಿಕೊಂಡು ಸಿಮೆಂಟ್, ಕಬ್ಬಿಣ ಸಿಗುತ್ತಿಲ್ಲವೆಂದು ಹೇಳಿ ಓಪನ್ ಮಾರ್ಕೆಟ್ಟಿನಲ್ಲಿ ಖರೀದಿ ಮಾಡಬೇಕೆಂದು ಆದೇಶವನ್ನು ಕೊಟ್ಟು ಜಿಲ್ಲಾ ಪರಿಷತ್ತಿನಲ್ಲಿ ಯಾರು ಮುಖ್ಯ ಮನುಷ್ಯರು ಇದ್ದಾರೋ ಅವರ ಸ್ವಂತ ಅಂಗಡಿಯಿಂದ ಕೋಟ್ಯಾಂತರ ರೂಪಾಯಿಯ ಕಬ್ಬಿಣ ಸಿಮೆಂಟ್‌ನ್ನು ಖರೀದಿ ಮಾಡಿರತಕ್ಕಂತಹ ಉದಾಹರಣೆಗಳು ಇವೆ. ಇಂತಹ ಕೆಲಸ ರಾಣಿಬೆನ್ನೂರಿನಲ್ಲಿ ನಡೆದಿದೆ. ಕಬ್ಬಿಣ, ಸಿಮೆಂಟ್ ಅನ್ನು ಓಪನ್ ಮಾರ್ಕೆಟ್ಟಿನಲ್ಲಿ ಖರೀದಿ ಮಾಡತಕ್ಕಂತಹ ಉದಾಹರಣೆ ಇದೆ. ಇದಕ್ಕೆ ಸಂಬಂಧಪಟ್ಟ ಡಾಕ್ಯುಮೆಂಟ್ ಕೂಡ ನನ್ನಲ್ಲಿದೆ. ತಾವು ಇದರ ಬಗ್ಗೆ ಪ್ರಾಮಾಣಿಕವಾಗಿ ಇನ್‌ವೆಸ್ಟಿಗೇಷನ್ ಮಾಡುವುದಾದರೆ ನಾನು ಇದನ್ನು ಕಳಿಸಿ ಕೊಡುತ್ತೇನೆ ಮುಚ್ಚಿ ಹಾಕುವುದಾದರೆ ನಾನು ತಮಗೆ ಕಳಿಸುವುದಿಲ್ಲ. ಇನ್ನು ಲ್ಯಾಂಡ್ ರಿಫಾರ್ಮ್ಸ್ ಬಗ್ಗೆ ಕೆಲವು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ಲ್ಯಾಂಡ್ ರಿಫಾರ್ಮ್ಸ್‌ನಲ್ಲಿ ಎಂತೆಂತಹ ಸದಸ್ಯರನ್ನು ಹಾಕಿದ್ದೀರಿ ಎಂಬುದನ್ನು ಹೇಳುತ್ತೇನೆ. ಅವರಿಗೆ ಕಾನೂನು ತಿಳಿದಿರಲೀ ಅಥವಾ ತಿಳಿಯದೇ ಇರಲೀ ಅದು ಬೇರೆ ವಿಚಾರ ಯಾರು ಅರ್ಜಿ ಕೊಟ್ಟಿರುವುದಿಲ್ಲ ಅಂತಹವರಿಗೆ ಜಮೀನನ್ನು ಗ್ರ್ಯಾಂಟ್ ಮಾಡತಕ್ಕಂತಹ ಉದಾಹರಣೆ ಇದೆ. ಇದು ದೇಶದಲ್ಲಿ ಎಲ್ಲಿಯಾದರೂ ಇದೆಯೋ ? ಭೂಮಿ ಬೇಕು ಎಂದು ಲ್ಯಾಂಡ್ ರಿಫಾರ್ಮ್ಸ್‌ಗೆ ಅರ್ಜಿಯನ್ನು ಕೊಟ್ಟಿಲ್ಲ ಮನೆಯಲ್ಲಿ ಕೂತವನಿಗೆ ಲ್ಯಾಂಡ್ ಕೊಡುವಂತಹ ಉದಾಹರಣೆಗಳು ಇವೆ ಇಂತಹ ಸದಸ್ಯರನ್ನು ಅಲ್ಲಿಗೆ ಹಾಕಿ ಅವರು ಮಾಡಿದ ತೀರ್ಮಾನದ ಮೇಲೆ ಜಮೀನನ್ನು ಹಂಚುತಾ ಹೋದರೆ ನಿಜವಾದ ರೈತ ಯಾರಿದ್ದಾರೆ ಅವರಿಗೆ ಇದರಿಂದ ಬಹಳ ಅನ್ಯಾಯವಾಗುತ್ತದೆ. ದಿವಂಗತ ಇಂದಿರಾಗಾಂಧಿಯವರು ಮಾಡಿದಂತಹ ಈ ಲ್ಯಾಂಡ್ ರಿಫಾರ್ಮ್ಸ್ ಯೋಜನೆ ಏನು ಇವೆ ಮಾನ್ಯ ದೇವರಾಜ ಅರಸ್‌ರವರು ಮಾಡಿದಂತಹ ಯೋಜನೆಗಳು ಏನು ಇವೆ ಇದನ್ನು ಸರಿಯಾಗಿ ಜಾರಿಗೆ ತರದೇ ಮನೆಯಲ್ಲಿ ಕೂತವರಿಗೆ ಜಮೀನನ್ನು ಹಂಚುತ್ತಾ ಹೋದರೆ ಈ ದೇಶದಲ್ಲಿನ ರೈತರನ್ನು ಉದ್ಧಾರ ಮಾಡುವುದಕ್ಕೆ ಸಾಧ್ಯವಿದೆಯೋ ? ನೀರಾವರಿ ಮಂತ್ರಿಗಳಾದ ಶ್ರೀ ಬೊಮ್ಮಾಯಿಯವರು ನಮ್ಮವರೇ. ಆದಷ್ಟು ಬೇಗ ಅಪ್ಪರ್ ತುಂಗಾ ಮತ್ತು ಮದಗ ಮಾತೂರ್ ಟ್ಯಾಂಕ್‌ಗಳ ಕೆಲಸಗಳನ್ನು ಪ್ರಾರಂಭ ಮಾಡಬೇಕೆಂದು ತಮ್ಮ ಮುಖೇನ ಸರಕಾರವನ್ನು ಕೇಳುತ್ತಾ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಯು. ಭೂಪತಿ (ಸಂಡೂರು) —ಮಾನ್ಯ ಅಧ್ಯಕ್ಷರೇ, ಇವತ್ತಿನ ಸಭೆಯ ಮುಂದೆ ಇರತಕ್ಕಂಥ ಈ ಸಣ್ಣ ನೀರಾವರಿ ಯೋಜನೆ ಹಾಗೂ ಕಂದಾಯ ಇಲಾಖೆಯ ಬೇಡಿಕೆಗಳ ಬಗ್ಗೆ ಕೆಲವು ನನ್ನ ಅಭಿಪ್ರಾಯಗಳನ್ನು ಸಭೆಯ ಮುಂದೆ ಮಂಡಿಸುವುದಕ್ಕೆ ತಾವು ನನಗೆ ಅವಕಾಶವನ್ನು ಕೊಟ್ಟಿದ್ದೀರಿ, ಪ್ರಾರಂಭದಲ್ಲಿ ನಾನು ಯೋಜನಾ ಇಲಾಖೆಯ ಬಗ್ಗೆ ಎರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಈ ಸಭೆಯಲ್ಲಿ ಮಾತನಾಡಬೇಕು ಎಂದು ಹೇಳಿದರೆ ಈ ಕಡೆಯಿಂದ ತಾವೇನೋ ನಮ್ಮನ್ನು ಕರೆಯುತ್ತೀರಿ, ನಾವು ಈ ಇಲಾಖೆಯ ಬಗ್ಗೆ ಚರ್ಚೆ ಮಾಡುವುದಕ್ಕೆ ಪ್ರಾರಂಭ ಮಾಡುತ್ತೇವೆ. ಆದರೆ ಅಲ್ಲಿ ಬೇರೆ ಇಲಾಖೆಗಳ ಬಗ್ಗೆ ಚರ್ಚೆ ನಡೆಯುತ್ತಿದೆ. ಆ ಕಡೆ ಚರ್ಚೆಯೇ ಬೇರೆ, ಈ ಕಡೆಯ ಚರ್ಚೆಯೇ ಬೇರೆ, ನಾನು ಬೆಳಿಗ್ಗೆಯಿಂದ ನೋಡುತ್ತಿದ್ದೇನೆ, ವಿಧಾನ ಪರಿಷತ್ತಿಗೆ ಸದಸ್ಯರನ್ನು ಯಾರನ್ನು ಮಾಡಬೇಕು ಎಂದು ಆ ಕಡೆಯಲ್ಲಿ ಚರ್ಚೆ, ಈ ಕಡೆ ನೋಡಿದಗೆ ಕಂದಾಯ ಮತ್ತು ನೀರಾವರಿ ಇಲಾಖೆಯ ಚರ್ಚೆ, ಅದು ಏನೇ ಇರಲಿ. ಈ ಯೋಜನಾ ಇಲಾಖೆ ನಿಜವಾಗಿ ಕೂಡ ಬಹಳ ಪ್ರಾಮುಖ್ಯವಾದಂಥ ಇಲಾಖೆ. ಯೋಜನೆಗಳನ್ನು ತಯಾರು ಮಾಡಿ ಅದಕ್ಕೆ ಒಂದು ಟೈಮ್ ಬಾಂಡ್ ಪ್ರೋಗ್ರಾಮ್‌ನ್ನು ಹಾಕಿ ಇಂಥ ಯೋಜನೆಗಳನ್ನು ಕಾರ್ಯಗತಗೊಳಿಸತಕ್ಕಂಥ ಸೂಚನೆಗಳನ್ನು ಕೊಡುವ ಜವಾಬ್ದಾರಿ ಈ ಇಲಾಖೆಯ ಮೇಲೆ ಇರುತ್ತದೆ. ಆದರೆ ದುರಾದೃಷ್ಟವಶಾತ್ ಏನಾಗಿದೆ ಎಂದರೆ ಈ ಯೋಜನಾ ಇಲಾಖೆ ಸನ್ಯಾಸಿಗಳ ಮಠವಾಗಿದೆ. ಸನ್ಯಾಸಿಗಳು ಏನು ಮಾಡುತ್ತಾರೆ ಎಂದರೆ ರಾತ್ರಿ ಎಲ್ಲಾ ಗುಡಿಯಲ್ಲಿ ಕುಳಿತುಕೊಂಡು ಬೆಳಿಗ್ಗೆ ಎದ್ದ ಕೂಡಲೇ ಗುದಾರ ಕಟ್ಟಬೇಕು. ಮಠಗಳನ್ನು ಕಟ್ಟಬೇಕು ಗುಡಿ ಕಟ್ಟಬೇಕು ಎಂದು ಹೇಳಿ ಬೊತ್ತಿಗೆ ಹೆಗಲಿಗೆ ಜೋಳಿಗೆ ಹಾಕಿಕೊಂಡು ಭಿಕ್ಷೆ ಬೇಡುವುದಕ್ಕೆ ಹೋಗುತ್ತಾರೆ. ಅ ರೀತಿಯಲ್ಲಿ ಆಗಿದೆ, ಈ ಯೋಜನಾ ಇಲಾಖೆ ಅವರು ಮಾಡಿರುವ ಯಾವುದೇ ಯೋಜನೆಯೂ ಕೂಡಾ ಇವತ್ತು ಟೈಮ್ ಬೌಂಡ್ ಪ್ರೋಗ್ರಾಮ್ ಆಗಿ ಯಾವುದೂ ಕೂಡಾ ಇಂಪ್ಲಿಮೆಂಟ್ ಆಗಿಲ್ಲ, ಅದು ಕಾರ್ಯಗತವಾಗಿ ಬರುವುದಕ್ಕೆ ಸಾಧ್ಯವಾಗಲಿಲ್ಲ. ಈ ಯೋಜನಾ ಇಲಾಖೆಯ ಒಂದು ಕಾರ್ಯ ವೈಖರಿಯನ್ನು ಕಾರ್ಯ ನೀತಿಯನ್ನು ಕಾರ್ಯ ರೂಪಣೆಯನ್ನು ಬದಲಾವಣೆ ಮಾಡತಕ್ಕಂಥ ಅವಶ್ಯಕತೆ ಬಹಳ ಇದೆ. ಇದರ ಬಗ್ಗೆ ಸರ್ಕಾರ ಯಾವ ರೀತಿ ಯೋಚನೆ

ಮಾಡುತ್ತದೋ ನನಗಂತೂ ಗೊತ್ತಿಲ್ಲ. ಇನ್ನು ಕಂದಾಯ ಇಲಾಖೆಯ ಬಗ್ಗೆ ಹೇಳುವುದಾದರೆ ಹಲವಾರು ಗೆಳೆಯರು ಬಹಳ ಪ್ರಾಮುಖ್ಯವಾದುದನ್ನೇ ಎತ್ತಿ ಹೇಳಿದ್ದಾರೆ. ಕಂದಾಯ ಇಲಾಖೆ ಸರ್ಕಾರ ಇದ್ದ ಹಾಗೆ ಎಂದು ಮಾನ್ಯ ಸದಸ್ಯರಾದ ಶ್ರೀ ಕೆ. ಹೆಚ್. ಶ್ರೀನಿವಾಸ್‌ರವರು ಬಹಳ ಸೊಗಸಾಗಿ ಹೇಳಿದ್ದಾರೆ. ಆದರೆ ಇದನ್ನು ಸರ್ಕಾರ ಎಂದು ಈ ಇಲಾಖೆಯನ್ನು ಇಲ್ಲಿಯವರೆಗೆ ಏನು ತಿಳಿದುಕೊಂಡಿದ್ದರೋ ಅದು ಅಲ್ಲಿ ವಿರುದ್ಧವಾಗಿದೆ. ಅದು ತಮಗೂ ಗೊತ್ತಿದೆ. ನಮ್ಮಲ್ಲಿ ಮಿಗತೆಯ ಅಂದರೆ ಸರ್‌ಪ್ಲಸ್ ಲ್ಯಾಂಡ್ ಎಂದು ಏನು ಹೇಳುತ್ತೇವೆ, ನಮ್ಮಲ್ಲಿ ಸರ್‌ಪ್ಲಸ್ ಲ್ಯಾಂಡೇ ಇಲ್ಲ ಎಂದು ಸರ್ಕಾರ ಘೋಷಣೆ ಮಾಡಿದೆ. ಕಂದಾಯ ಇಲಾಖೆಯ ಅಧೀನದಲ್ಲಿರತಕ್ಕಂಥ ಭೂಮಿಯನ್ನು ಲಕ್ಷಾಂತರ ಜನ ರೈತರು ಸಾಗುವಳಿ ಮಾಡಿಕೊಂಡಿದ್ದಾರೆ, ಅದೇ ರೀತಿ ೧೯೮೪ ಮತ್ತು ೧೯೭೮ ನೇ ಇಸವಿಯಲ್ಲಿ ಈ ಸಿ. ಮತ್ತು ಡಿ. ಭೂಮಿಯನ್ನು ವರ್ಗಾವಣೆ ಮಾಡಿದ್ದಾರೆ. ಯಾವ ಭೂಮಿ ವ್ಯವಸಾಯಕ್ಕೆ ಅಯೋಗ್ಯ ಎಂದು ತೀರ್ಮಾನವಾಗಿದೆಯೋ ಅಂಥ ಭೂಮಿಯನ್ನು ಅರಣ್ಯ ಇಲಾಖೆಗೆ ವರ್ಗಾವಣೆ ಮಾಡಿದ್ದಾರೆ. ಸುಮಾರು ರಾಜ್ಯದಲ್ಲಿ ಇಪ್ಪತ್ತು ಲಕ್ಷ ಎಕರೆಗಿಂತಲೂ ಜಾಸ್ತಿ ಇದೆ. ಅರಣ್ಯ ಇಲಾಖೆ ಅಷ್ಟೇ ಅಲ್ಲ, ಪಿ.ಡಬ್ಲ್ಯು.ಡಿ. ಯಲ್ಲೂ ಕೂಡಾ ವರ್ಗಾವಣೆಯಾಗಿದೆ. ಕೃಷಿ ಇಲಾಖೆಗೂ ಕೂಡಾ ವರ್ಗಾವಣೆಯಾಗಿದೆ, ತೋಟಗಾರಿಕೆ ಇಲಾಖೆಯಲ್ಲೂ ಕೂಡಾ ವರ್ಗಾವಣೆಯಾಗಿದೆ ಹಲವಾರು ಇಲಾಖೆಗಳಿಗೆ ಸಿ. ಅಂಡ್ ಡಿ. ಭೂಮಿಯನ್ನು ವರ್ಗಾವಣೆ ಮಾಡಿದ್ದಾರೆ. ಈ ರೀತಿ ವರ್ಗಾವಣೆ ಆದಂಥ ಭೂಮಿಯನ್ನು ಇಲಾಖೆಯವರು ಕೆಲಸ ಕಾರ್ಯಗಳಿಗೆ ಸರಿಯಾಗಿ ಉಪಯೋಗಿಸದೆ ಅದು ಹಾಗೆಯೇ ಇದ್ದುದರಿಂದ ಅಂಥ ಭೂಮಿಯನ್ನು ಬಡ ಜನರು ಸಾಗುವಳಿ ಮಾಡಿಕೊಂಡು ಇಪ್ಪತ್ತು ವರ್ಷಗಳಿಂದಲೂ ಸಾಗುವಳಿ ಮಾಡಿಕೊಂಡು ಬರುತ್ತಿದ್ದರು. ಯಾವ ಭೂಮಿಯನ್ನು ಅರಣ್ಯ ಇಲಾಖೆಗೆ ರೆವಿನ್ಯೂ ಇಲಾಖೆಯವರು ೧೯೬೪ ನೇ ಇಸವಿಯಲ್ಲಿ ಮತ್ತು ೧೯೭೦ ನೇ ಇಸವಿಯಲ್ಲಿ ಕೊಟ್ಟಿದ್ದರೋ ಇಲ್ಲಿಯವರೆಗೂ ಯಾವುದೇ ರೀತಿಯಲ್ಲೂ ಕೂಡಾ ಒಂದು ಗಿಡವನ್ನಾಗಲೀ ಒಂದು ಸಸಿಯನ್ನಾಗಲೀ ಅಲ್ಲಿ ನೆಟ್ಟಿಲ್ಲ ಮತ್ತು ಆ ಭೂಮಿಯಲ್ಲಿ ಯಾವುದೇ ಕಾರ್ಯವನ್ನು ಮಾಡಿಲ್ಲದೇ ಇದ್ದು ಈಗ ಅರಣ್ಯ ಇಲಾಖೆಯವರು ಒಮ್ಮೆಗೆ ಜ್ಞಾನೋದಯ ಆಗುವ ಹಾಗೆ ಆಗಿ ರೈತರನ್ನು ಭೂಮಿಯಿಂದ ಅವರನ್ನು ಎವಿಕ್ಟ್ ಮಾಡಿ ಅಲ್ಲಿ ಗಿಡಗಳನ್ನು ಹಾಕುವುದಕ್ಕೆ ಪ್ರಾರಂಭಮಾಡಿದ್ದಾರೆ. ಇದು ಬಹಳ ಜಿಲ್ಲೆಗಳಲ್ಲಿ ಈ ಸಮಸ್ಯೆ ಇದೆ. ಉದಾಹರಣೆಗೆ ನಾನು ಹೇಳುವುದಾದರೆ ಬಳ್ಳಾರಿ ಜಿಲ್ಲೆಯಲ್ಲಿ ನಡೆಯುತ್ತಿದೆ, ಚಿಕ್ಕಮಗಳೂರು ಜಿಲ್ಲೆಯಲ್ಲೂ ನೋಡಿದ್ದೇನೆ, ಅಲ್ಲಿ ನಾನು ಭೇಟಿಕೂಡಾ ಕೊಟ್ಟಿದ್ದೇನೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಂದು ಕಡೆಯಲ್ಲಿ ಕಂದಾಯ ಮಂತ್ರಿಗಳಿಗೆ ಆಗಲೇ ಒಂದು ಮನವಿಯನ್ನು ಕೂಡಾ ಕೊಟ್ಟಿದ್ದೇವೆ. ಅಲ್ಲಿ ಈಗಾಗಲೇ ಒಂದು ಗ್ರಾಮ ಕೂಡಾ ನಿರ್ಮಾಣವಾಗಿದೆ. ಅಲ್ಲಿಯ ಮಕ್ಕಳಿಗೆ ಶಾಲ ಕೂಡಾ ಆಗಿದೆ. ಅಲ್ಲಿ ಕುಡಿಯುವ ನೀರಿನ ಸೌಕರ್ಯ ಕೂಡಾ ಇದೆ. ಆದರೆ ಅರಣ್ಯ ಇಲಾಖೆಯವರು ಪಟ್ಟಿಯಲ್ಲಿ ಆ ಭೂಮಿಯನ್ನು ಅದು ಅರಣ್ಯ ಇಲಾಖೆಗೆ ಸೇರಿದ್ದು, ಕಂದಾಯ ಇಲಾಖೆಗೆ ಸೇರಿದ್ದಲ್ಲ ಎಂದು ಅವರು ಹೇಳುತ್ತಾರೆ. ಆದರೆ ರೈತರು ಅದನ್ನು ಸಾಗುವಳಿ ಮಾಡುತ್ತಿದ್ದಾರೆ.

ಆದರೆ ಅಲ್ಲಿ ಸಾಗುವಳಿ ಮಾಡುತ್ತಿದ್ದಾರೆ, ಒಂದು ಕಡೆ ಅರಣ್ಯ ಇಲಾಖೆಯವರು ಜಮೀನನ್ನು ಬಿಟ್ಟು ಕೊಡಿ ಎಂದು ಹೇಳುತ್ತಾರೆ, ಮತ್ತೆ ಇನ್ನು ಒಂದು ಕಡೆಯಿಂದ ಮಾನ್ಯ ಸಚಿವರು ಎವಿಕ್ಟ್ ಮಾಡುತ್ತೇವೆಂದು ಈ ಮನೆಯಲ್ಲಿ ಆಶ್ವಾಸನೆ ಕೊಡುತ್ತಾರೆ. ಆದರೆ ಮಾನ್ಯ ಸಚಿವರ ಸೂಚನೆಗಳು ಅಧಿಕಾರಿಗಳಿಗೆ ಹೋಗುತ್ತದೆಯೇ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ಒಂದು ಕಡೆ ರೆಗ್ಯುಲರೈಸೇಷನ್ ಆಫ್ ಅನ್ ಆಥೋರೈಸ್ಡ್ ಲ್ಯಾಂಡ್ ಎಂದು ಹೇಳುತ್ತೀರಿ. ಜಂಟಿ ಸಲಹಾ ಸಮಿತಿ ಒಂದು ವರದಿಯನ್ನು ಕೊಡಬೇಕಾಗಿದೆ. ವರದಿಯ ಬಗ್ಗೆ ಚರ್ಚೆ ಆಗಿ ಅದರಲ್ಲಿ ಮಾರ್ಪಾಟುಗಳು ಆಗಬೇಕಾಗಿದೆ. ಈ ಮಾರ್ಪಾಟುಗಳ ಮುಖಾಂತರ ಅದನ್ನು ಕಾರ್ಯರೂಪಕ್ಕೆ ತರಬೇಕೆಂಬ ಒಂದು ಹಂತದಲ್ಲಿ ಇದ್ದೇವೆ ಅದು ಅಷ್ಟೇ ಅಲ್ಲದೆ ಬೇರೆ ಇಲಾಖೆಗಳಿಗೆ ವರ್ಗಾವಣೆ ಮಾಡಿರತಕ್ಕ ಭೂಮಿ ಇಷ್ಟೇ ಮುಖ್ಯವಾಗಿದೆ, ರೆಗ್ಯುಲರೈಸೇಷನ್ ಆಫ್ ಅನ್ ಆಥೋರೈಸ್ಡ್ ಎನ್‌ಕ್ರೋಚ್‌ಮೆಂಟ್ ಬಿಲ್ ಏನು ಆಗಿದೆ ಅದು ಕಾಯಿದೆಯಾಗಿ ಬಂದರೂ ಫಾರೆಸ್ಟ್ ಇಲಾಖೆ ಬೇರೆ ಇಲಾಖೆ. ಕಂದಾಯ ಇಲಾಖೆ, ಇಲ್ಲಿ ಭೂಮಿಯ ವಿಚಾರ ಬರುವುದಿಲ್ಲ. ಅದು ಬೇರೆ ಆಗುತ್ತದೆ. ಆದ ಕಾರಣ ತಾವು ಅರಣ್ಯ ಇಲಾಖೆಯ ಸಚಿವರ ಜೊತೆ ಸಮಾಲೋಚನೆ ಮಾಡಿ, ಕ್ಯಾಬಿನೆಟ್‌ನಲ್ಲಿ ಇದನ್ನು ಚರ್ಚಿಸಿ ಅವಕಾಶ ಬಿದ್ದರೆ ಒಂದು ನಿರ್ಣಯ ಮಾಡಿದರೆ ರೈತರಿಗೆ ಅನುಕೂಲ ಮಾಡಿಕೊಡಬಹುದು. ಇನ್ನು ಸರ್ವೆ ಮತ್ತು ಸೆಟಲ್‌ಮೆಂಟ್ ಬಗ್ಗೆ ಹೇಳುವುದಾದರೆ, ಸರ್ವೆ ಇಲಾಖೆ ರಾಜ್ಯದಲ್ಲಿ ಅವ್ಯವಸ್ಥೆಯ ಸ್ಥಿತಿಯಲ್ಲಿದೆ. ಒಂದು ಉದಾಹರಣೆಯನ್ನು

ಈ ಬಗ್ಗೆ ಹೇಳುವುದಾದರೆ ಬಳ್ಳಾರಿ ಪಟ್ಟಣದೊಳಗೆ ಲ್ಯಾಂಡ್ ರೆಕಾರ್ಡ್ಸ್‌ನವರು ಕೊಟ್ಟ ಅಂಕಿ ಅಂಶಗಳ ಪ್ರಕಾರ ೧೨ ಎಕರೆ ಜಮೀನು ಖಾಲಿ ಇವೆ ಎಂದು ಹೇಳಲಾಗಿದೆ. ನೀವು ಹೋಗಿ ನೋಡಿದರೆ ಅಲ್ಲಿ ಒಂದು ಇಂಚೂ ಜಾಗ ಇಲ್ಲ. ಯಾವುದೋ ಓಬೀರಾಯನ ಕಾಲದಲ್ಲಿ ಸರ್ವೆ ಮತ್ತು ಸೆಟಲ್‌ಮೆಂಟ್ ಮಾಡಿದ್ದು ಆಗಿದೆ. ಹೊಸದಾಗಿ ಸರ್ವೆ ಮತ್ತು ಸೆಟಲ್‌ಮೆಂಟ್ ಮಾಡೇ ಇಲ್ಲ. ಇದರಿಂದ ಜನರಿಗೆ ಎಷ್ಟು ತೊಂದರೆ ಆಗಿದೆ ಎಂದು ಮಾನ್ಯ ಸಚಿವರಿಗೆ ಗೊತ್ತಿದೆಯೋ? ನನ್ನ ತಾಲ್ಲೂಕು ಸೊಂಡೂರಿನಲ್ಲಿ ಹೊಸ ಇನಾಮು ಅಬಾಲಿಷನ್ ಆ್ಯಕ್ಟ್ ಜಾರಿಗೆ ಬಂದಿದೆ. ಆ ಕಾಯಿದೆ ಪ್ರಕಾರ ಗೇಣೀದಾರರ ಭೂಮಿಯನ್ನು ಪಡೆದು ಕೊಳ್ಳುವಾಗ ೧೯೭೭-೭೮ನೇ ಇಸವಿಯಲ್ಲಿ ಒಂದು ಹಕ್ಕು ಪತ್ರವನ್ನು ಪಡೆಯುವಾಗ ಲ್ಯಾಂಡ್ ಟ್ರಿಬ್ಯುನಲ್‌ನವರು ಸಬ್ಜೆಕ್ಟ್ ಟು ರಿ ಸರ್ವೆ ಎಂದು ಒಂದು ಕಂಡೀಷನ್ ಹಾಕಿ ಕೊಡುತ್ತಿದ್ದಾರೆ. ಈಗ ನನ್ನ ಹತ್ತಿರ ಹತ್ತು ಎಕರೆ ಜಾಗ ಇರಬಹುದು, ಸಬ್ಜೆಕ್ಟ್ ಟು ಸರ್ವೆ ಎಂದು ಈ ತರಹ ಕಂಡೀಷನ್ ಹಾಕಿದರೆ ಜಾಗ ಆರು ಎಕರೆ ಆಗಬಹುದು, ೩ ಎಕರೆ ಆಗಬಹುದು, ಹೆಚ್ಚು ಆಗಲೂ ಬಹುದು, ಕಡಿಮೆಯೂ ಆಗಬಹುದು, ಆದರೆ ಪ್ರೀಮಿಯಂ ಕೊಡಬೇಕಾದರೆ ಯಾವ ರೀತಿ ಎಷ್ಟು ಎಕರೆಗೆ ಎಂದು ಅವರು ಕೊಡಬೇಕು? ಅದನ್ನು ಸೆಟಲ್ ಮಾಡಿ ಅಂದರೆ ಅದನ್ನು ಮಾಡುತ್ತಿಲ್ಲ ಇದು ಒಂದು ಹಳ್ಳಿಯಲ್ಲಿ ಇಲ್ಲ, ಎಲ್ಲಾ ಕಡೆ ಇದೆ. ನನ್ನ ಸೊಂಡೂರು ತಾಲ್ಲೂಕಿನಲ್ಲಿ ಅನ್ ಸೆಟಲ್ಡ್ ಮತ್ತು ಅನ್ ಸರ್ವೇಡ್ ಆಗಿರುವ ಸುಮಾರು ೧೫ ಹಳ್ಳಿಗಳಿವೆ, ಒಂದು ಹಳ್ಳಿಯಿಂದ ಇಂತಿಷ್ಟು ಎಕರೆಗೆ ಇಷ್ಟು ಪ್ರೀಮಿಯಮ್ ಕಟ್ಟಬೇಕು ಎಂದು ನಿಗದಿ ಮಾಡಿ. ಇಂತಹ ಒಂದು ಪರಿಸ್ಥಿತಿಯನ್ನು ಹೋಗಲಾಡಿಸಬೇಕಾದರೆ ಹಣ ಬೇಕು. ನಿಜ, ನಾನು ಸಚಿವರನ್ನು ಈ ಬಗ್ಗೆ ಒಮ್ಮೆ ಭೇಟಿಯಾಗಿದ್ದಾಗ ಅವರು ಇದಕ್ಕೆ ಹಣ ಬೇಕಾಗುತ್ತದೆ. ಸರ್ಕಾರ ಒದಗಿಸಬೇಕು ೧೫೦ರಿಂದ ೨೦೦ ಕೋಟಿ ರೂಪಾಯಿ ಬೇಕಾಗುತ್ತದೆ. ಎಂದು ತಿಳಿಸಿದರು. ಈಗ ಒಮ್ಮೆಗೆ ಮಾಡುವುದಕ್ಕಾಗುವುದಿಲ್ಲ ಅಂದರೆ ಹಂತಹಂತವಾಗಿ ಮಾಸ್ಟರ್ ಪ್ಲಾನ್ ಮಾಡಿಕೊಂಡು ಕಾರ್ಯರೂಪಕ್ಕೆ ತರಬೇಕು ಎಂದು ಯೋಚನೆ ಮಾಡಿ. ಇನ್ನು ನ್ಯಾಚುರಲ್ ಕಲಾಮಿಟೀಸ್ ಬಗ್ಗೆ ಹೇಳುವುದಾದರೆ, ಇದರಲ್ಲಿ ಪರಿಹಾರವನ್ನು ಕೊಡುವಾಗ ತಹಸೀಲ್ದಾರ್, ಅಸಿಸ್ಟೆಂಟ್ ಕಮೀಷನರ್ ಡೆಪ್ಯುಟಿ ಕಮೀಷನರ್ ಇವರುಗಳಿಗೆ ಕೊಟ್ಟಿರತಕ್ಕಂಥ ಅಧಿಕಾರದ ಮಿತಿ ಏನು ಇದೆ ಇದು ಕಡಿಮೆ ಇದೆ. ಪ್ರವಾಹ ಬಂದರೆ, ಮಳೆ ಬಂದರೆ, ಬೆಂಕಿ ಬಿದ್ದರೆ ಅಥವಾ ಇನ್ಯಾವುದೋ ಕಾರಣದಿಂದ ೨೦ ಸಾವಿರದಷ್ಟು ನಷ್ಟವಾದರೆ ನೀವು ನಿರ್ಗತಿಕರಿಗೆ ಕೊಡುವ ಹಣ ಎಷ್ಟು ಅಂದರೆ ಕೇವಲ ೮೦೦ ರೂಪಾಯಿ ಮಾತ್ರ. ಅದಕ್ಕಿಂತ ಹೆಚ್ಚು ಕೊಡಬೇಕಾದರೆ ಸರ್ಕಾರಕ್ಕೆ ಆತ ರೆಕಮಂಡೇಷನ್ ಕಳಿಸಿ ಕೊಡಬೇಕು ಶಿಫಾರಸ್ಸು ಕಳಿಸಿದರೂ ನಮ್ಮ ಹತ್ತಿರ ದುಡ್ಡು ಇಲ್ಲವೆಂದು ಹೇಳುತ್ತೀರಿ. ನಾನು ಕಳೆದ ಅಧಿವೇಶನದಲ್ಲಿಯೂ ನನ್ನ ತಾಲ್ಲೂಕಿನ ಬಗ್ಗೆ ಪ್ರಶ್ನೆ ಮಾಡಿದ್ದೆ. ನನ್ನ ಪ್ರವೇಶ ಉಬ್ಬದ ದುಡೆ ಎಂಬ ಗ್ರಾಮದಲ್ಲಿ ಅಕಸ್ಮಾತಾಗಿ ಮಳೆ ಬಂದು ಸಿಕ್ಕಾಪಟ್ಟೆ ಅನಾಹುತ ಆಗಿದೆ. ರೈತರ ಭೂಮಿ ಹಾಳಾಗಿದೆ, ಎಲ್ಲಾ ಕರಕಲು ಬಿದ್ದಿದೆ, ಬೆಳೆ ಹಾಳಾಗಿದೆ, ಮನೆ ನಾಶವಾಗಿದೆ. ಪರಿಹಾರ ಜಾಸ್ತಿ ಕೊಡಬೇಕು ಎಂದು ಕೇಳಿದ್ದೆ. ನೀವು ಅಷ್ಟೇ ನಿಷ್ಠುರವಾಗಿ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದಿರಿ. ನ್ಯಾಚುರಲ್ ಕೆಲಾಮಿಟೀಸ್ ಆದಾಗ ಒಂದು ಹೆಡ್‌ನಲ್ಲಿ ದುಡ್ಡು ಕೊಡಲು ಅವಕಾಶ ಇಲ್ಲವೆಂದರೆ ಮುಖ್ಯಮಂತ್ರಿಗಳ ಫಂಡ್‌ನಿಂದಲಾದರೂ ಮಾನವೀಯತೆ ದೃಷ್ಟಿಯಿಂದ ಪರಿಹಾರ ಕೊಡಿಸುವುದಕ್ಕೆ ಪ್ರಯತ್ನ ಮಾಡಿ. ಇವೊತ್ತು ಕೂಡ ನಾನು ಹೇಳುತ್ತಿದ್ದೇನೆ: ಇದು ನನ್ನ ತಾಲ್ಲೂಕಿಗೆ ಮಾತ್ರ ಸೀಮಿತವಾಗಿಲ್ಲ, ಎಲ್ಲಾ ಕಡೆ ಇಂತಹ ಪರಿಸ್ಥಿತಿ ಇರುತ್ತದೆ ನಾವು ಎಲ್ಲಾ ಕಡೆಗೂ ಹಣ ಕೊಡಿ ಎಂದು ಹೇಳಲು ಆಗುವುದಿಲ್ಲ.

ನಮಗೂ ರಾಜ್ಯದ ಹಣಕಾಸಿನ ಪರಿಸ್ಥಿತಿ ಗೊತ್ತಿದೆ. ಸರ್ಕಾರಿ ನೌಕರರಿಗೆ ಕೂಡ ಸರಿಯಾಗಿ ಸಂಬಳ ಸಿಗುತ್ತಿಲ್ಲ,

ಶ್ರೀ ಜೆ.ಹೆಚ್. ಪಟೇಲ್.— ಸರ್ಕಾರಿ ನೌಕರರಿಗೆ ಸಂಬಳ ಸಿಗುತ್ತಿಲ್ಲವೆಂದು ಹೇಳುತ್ತಿದ್ದೀರಿ, ಸಂಬಳ ಕೊಡದೇ ಇರುವ ಹೆಸರನ್ನು ಹೇಳಿ.

ಶ್ರೀ ಆರ್. ವೆಂಕಟರಾಮಯ್ಯ.— ಸಂಬಳ ಇಲ್ಲದಿದ್ದರೆ ಬೇಡ, ಬೇರೆ ಬಿಲ್ಸ್‌ಗಳು ಎಷ್ಟು ಪೆಂಡಿಂಗ್ ಇದೆ ಎಂದು ಹೇಳಿ.

ಶ್ರೀ ಎಂ. ಭೂಪತಿ.— ಹೈಸ್ಕೂಲು ಟೀಚರ್ಸ್ ಅನ್ನು ಸಂಬಳದ ಬಗ್ಗೆ ಕೇಳಿ. ಅವರು ಹೇಳುತ್ತಾರೆ. ಪಿ.ಡಬ್ಲ್ಯುಡಿ. ಯದು ಇಷ್ಟು ಇದೆ, ಇರಿಗೇಷನ್‌ನದು ಇಷ್ಟು ಇದೆ ಎಂದು ಹೇಳುತ್ತೀರಿ

ಹೈಸ್ಕೂಲು ಟೀಚರ್ಸ್ ಅವರು ಸರ್ಕಾರಿ ನೌಕರರಲ್ಲವೇ? ಅವರು ಏನು ಗೌಡರ ಮನೆ ಆಳುಗಳೇ? ಯಾರದೋ ಹೆಸರನ್ನು ಹೇಳುವುದಕ್ಕೆ ಹೋಗುವುದಿಲ್ಲ ಅದು ದೊಡ್ಡಪಟ್ಟಿ ಆಗುತ್ತದೆ.

೪-೩೦ ಪಿ. ಎಂ.

ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ನೀರಾವರಿ ಯೋಜನೆಗಳಿಗೆ ಸರ್ಕಾರ ಹೆಚ್ಚು ಹಣ ಒದಗಿಸಲಿಲ್ಲವಾದ ಕಾರಣ ತಾವು ಮಂತ್ರಿಪದವಿಗೆ ರಾಜೀನಾಮೆ ಕೊಡಬೇಕಾಯಿತು ಎಂದು ಮಾಜಿ ಸಚಿವರಾದಂಥ ಶ್ರೀ ದೇವೇಗೌಡರು ತಮ್ಮ ರಾಜೀನಾಮೆಗೆ ಕಾರಣ ಕೊಡುವಾಗ ಹೇಳಿದರು. ಮಾನ್ಯ ದೇವೇಗೌಡರಿಗೆ ನಿಜವಾಗಿಯೂ ನೀರಾವರಿ ಯೋಜನೆಗಳ ಬಗ್ಗೆ ಸಾಕಷ್ಟು ಕಾಳಜಿ ಇತ್ತು ಎಂಬ ಬಗ್ಗೆ ಈ ಕಡೆಯುವರಲ್ಲಿ ಯಾವ ಡಿಸ್‌ಪ್ಯೂಟ್ ಸಹ ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಈ ನೀರಾವರಿ ಯೋಜನೆಗಳ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಪ್ರತಿಕ್ರಿಯೆ ಆದರೂ ಏನು? ಈ ನೀರಾವರಿ ಯೋಜನೆಗಳನ್ನು ಕೈಕೊಳ್ಳುವುದರಿಂದ ಶ್ರೀಮಂತ ರೈತರಿಗೆ ಮಾತ್ರ ಅನುಕೂಲವಾಗುತ್ತದೆ, ಆದ್ದರಿಂದ ನಾವು ಬೇರೆ ಕಲ್ಯಾಣ ಕಾರ್ಯಕ್ರಮಗಳನ್ನು ಬಡವರ ಸಲುವಾಗಿ ಕೈಕೊಳ್ಳಬೇಕಾಗಿದೆ ಎಂದು ಜವಾಬ್ದಾರಿ ಸ್ಥಾನದಲ್ಲಿರುವ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಈ ಮಾತನ್ನು ಅವರು ಹೇಳಿರುವುದರಿಂದ ಇಲ್ಲಿ ನಾನು ಈ ನೀರಾವರಿ ಬಗ್ಗೆ ಏತಕ್ಕೆ ಭಾಷಣ ಮಾಡಬೇಕು? ಆ ಕೆಲಸ ಆಗಿಲ್ಲ, ಈ ಕೆಲಸ ಆಗಿಲ್ಲ, ಆ ಡ್ಯಾಮ್ ಕಟ್ಟಿ, ಈ ಡ್ಯಾಮ್ ಕಟ್ಟಿ ಎಂದು ಏತಕ್ಕೆ ಕೇಳಬೇಕು?

ಶ್ರೀ ಎಸ್. ಆರ್. ಬೊಮ್ಮಾಯಿ.— ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆಂದರೆ, ನೀರಾವರಿಗೆ ಆದ್ಯತೆ ಕೊಡಬೇಕು ಮತ್ತು ಅದೇ ಸಮಯಕ್ಕೆ ಬಡತನ ನಿರ್ಮೂಲನಾ ಕಾರ್ಯಕ್ರಮಗಳ ಕಡೆಗೂ ಗಮನ ಕೊಡಬೇಕಾಗಿದೆ, ಅದು ಹಸಿರು ಕಾರ್ಡು ಯೋಜನೆ ಇರಬಹುದು, ವಿದ್ಯಾಭ್ಯಾಸ ಕೊಡುವ ಯೋಜನೆ ಇರಬಹುದು, ಆದ್ದರಿಂದ ಈ ಎರಡನ್ನೂ ಬ್ಯಾಲನ್ಸ್ ಮಾಡುವ ವಿಚಾರ ಸರ್ಕಾರಕ್ಕೆ ಇದೆ ಎಂದು ಅವರು ಹೇಳಿದ್ದಾರೆ. ನೀರಾವರಿ ಯೋಜನೆಯಿಂದ ಶ್ರೀಮಂತರಿಗೆ ಮಾತ್ರ ಲಾಭವಾಗುತ್ತದೆಂದು ಹೇಳುವುದೇ ಸರಿಯಲ್ಲ. ನಮ್ಮಲ್ಲಿ ಎರಡು ಎಕರೆಗಳಿಂದ ಹತ್ತು ಎಕರೆಗಳವರೆಗೆ ಜಮೀನು ಇರುವವರು ಬಹಳ ಮಂದಿ ಇದ್ದಾರೆ. ಆದ್ದರಿಂದ ಇವರಿಗೂ ಸಹ ಲಾಭವಾಗುತ್ತದೆ. ತಾವು ಇದರಲ್ಲಿ ರಾಜಕೀಯ ಮಾಡುವುದು ಬೇಡ. ನೀರಾವರಿಗೆ ಆದ್ಯತೆ ಕೊಡಬೇಕು ಎಂಬ ಬಗ್ಗೆ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಆದರೆ ಅದೇ ಕಾಲಕ್ಕೆ ನಾವು ಸೋಷಿಯಲ್ ವೆಲ್‌ಫೇರ್ ಮೆಜರ್ಸ್‌ನ್ನು ಕಡೆಗಣಿಸುವುದಕ್ಕಾಗುವುದಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.— ನೀರಾವರಿಗೆ ಹೆಚ್ಚಿನ ಆದ್ಯತೆ ಕೊಡಬೇಕೆಂಬುದನ್ನು ಮುಖ್ಯಮಂತ್ರಿಗಳು ಒಪ್ಪಿಲ್ಲ. ಈ ಮಾತನ್ನು ಅವರು ಬಹಿರಂಗವಾಗಿಯೇ ಹೇಳಿದ್ದಾರೆ. ಆದರೆ ರಾಜ್ಯದ ಮತ್ತು ರೈತರ ಅಭಿವೃದ್ಧಿ ಸಲುವಾಗಿ ನಾವು ನೀರಾವರಿಯೋಜನೆಗಳನ್ನು ನೆಗ್ಲೆಕ್ಟ್ ಮಾಡುವುದಕ್ಕಾಗುವುದಿಲ್ಲ.

ಶ್ರೀ ಯು. ಭೂಪತಿ.—ನೀರಾವರಿಗೆ ಹೆಚ್ಚು ಹಣ ಖರ್ಚು ಮಾಡಿದರೆ ಬಡವರ ಕಲ್ಯಾಣ ಕಾರ್ಯಕ್ರಮಗಳಿಗೆ ಹೆಚ್ಚು ಹಣ ಖರ್ಚು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೆಂಬ ಮಾತನ್ನು ಮಾನ್ಯ ಮುಖ್ಯ ಮಂತ್ರಿಗಳು ಹೇಳಿರುವುದರಿಂದ, ನೀರಾವರಿಗೆ ಹೆಚ್ಚು ಹಣ ಖರ್ಚು ಮಾಡತಕ್ಕಂಥ ಇಚ್ಛೆ ಈ ಸರ್ಕಾರಕ್ಕೆ ಇಲ್ಲ ಎಂದು ನಮಗೆ ನೇರವಾಗಿ ಅರ್ಥವಾಗುತ್ತದೆ. ಆದ್ದರಿಂದ ನಾವು ಇಲ್ಲಿ ಈ ಬಗ್ಗೆ ಎಷ್ಟು ಭಾಷಣ ಮಾಡಿದರೂ ಸಹ......

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಎರಡನ್ನೂ ಸಹ ಮಾಡುವ ಇಚ್ಛೆ ನಮ್ಮ ಸರ್ಕಾರಕ್ಕೆ ಇದೆ.

ಶ್ರೀ ಯು. ಭೂಪತಿ.—ಆದರೆ ಮುಖ್ಯಮಂತ್ರಿಗಳು ಆ ರೀತಿ ಹೇಳಲಿಲ್ಲ. ನೀರಾವರಿಗೆ ಹೆಚ್ಚು ಹಣ ಖರ್ಚು ಮಾಡಿದರೆ ಅದರಿಂದ ಶ್ರೀಮಂತ ರೈತರಿಗೆ ಅನುಕೂಲವಾಗುತ್ತದೆಂದು, ಈ ಕಾರಣದಿಂದ ಇದಕ್ಕೆ ಹೆಚ್ಚು ಪ್ರಾಮುಖ್ಯತೆ ಏತಕ್ಕೆ ಕೊಡಬೇಕು ಎಂದು ಅವರು ಹೇಳಿದ್ದಾರೆ. ನೀರಾವರಿ ಯೋಜನೆಗಳಿಗೆ ನಾವು ಹೆಚ್ಚು ಪ್ರಾಮುಖ್ಯತೆ ಕೊಟ್ಟಿದ್ದೇ ಆದರೆ ರೈತರ ಆರ್ಥಿಕ ಪರಿಸ್ಥಿತಿ ಸುಧಾರಣೆ ಆಗುತ್ತದೆ. ಇರಿಗೇಷನ್ ಪೊಟೆನ್ಷಿಯಲ್ ಜಾಸ್ತಿಯಾದಂತೆ ರೈತರು ಹೆಚ್ಚು ಹೆಚ್ಚು ಸ್ವಾವಲಂಬಿಗಳಾಗುವುದಕ್ಕೆ ಸಹಾಯವಾಗುತ್ತದೆ.

ಶ್ರೀ ಸಿ. ಎಂ. ರೇವಣಸಿದ್ದಯ್ಯ.—ಅದರಿಂದ ರೈತರಿಗೆ ಮಾತ್ರವಲ್ಲ, ರೈತ ಕಾರ್ಮಿಕರಿಗೂ ಸಹ ಬಹಳ ಅನುಕೂಲವಾಗುತ್ತದೆ.

ಶ್ರೀ ಯು. ಭೂಪತಿ.—ಹೌದು. ಇವೊತ್ತು ನೀರಾವರಿ ಪ್ರದೇಶಗಳಲ್ಲಿ ಕೂಲಿ ಕೆಲಸ ಮಾಡುವಂತಹ ಗಂಡಾಳಿಗೆ ೧೨ ರಿಂದ ೧೫ ರೂಪಾಯಿಗಳವರೆಗೆ ಕೂಲಿ ಸಿಕ್ಕಿದರೆ ಬಯಲುಸೀಮೆಯಲ್ಲಿರುವ ಜಮೀನುಗಳಲ್ಲಿ ಕೆಲಸ ಮಾಡುವಂತಹ ಹೆಣ್ಣಾಳಿಗೆ ೫ ರೂಪಾಯಿಗಳ ಕೂಲಿ ಸಿಗುತ್ತಿದೆ. ಆದ್ದರಿಂದ ಎಲ್ಲ ಕಡೆಯೂ ನೀರಾವರಿ ಸೌಲಭ್ಯ ಒದಗಿಸಿಕೊಟ್ಟರೆ ಕೂಲಿ ಕೆಲಸ ಮಾಡುವವರಿಗೆ ಹೆಚ್ಚಿನ ಕೂಲಿ ಸಿಗುತ್ತದೆ, ಆಗ ಅವರ ಜೀವನ ಪರಿಸ್ಥಿತಿಯೂ ಸುಧಾರಣೆ ಆಗುತ್ತದೆ. ನೀರಾವರಿ ಸೌಲಭ್ಯದಿಂದ ರೈತರ ಮತ್ತು ಕೃಷಿ ಕಾರ್ಮಿಕರ ಆರ್ಥಿಕ ಪರಿಸ್ಥಿತಿ ಮತ್ತು ಸಾಮಾಜಿಕ ಪರಿಸ್ಥಿತಿ ಸುಧಾರಣೆ ಆಗುತ್ತದೆ. ನೀರಾವರಿಗೆ ಹಣ ಖರ್ಚು ಮಾಡಿದರೆ ಕೇವಲ ಶ್ರೀಮಂತ ರೈತರಿಗೆ ಅನುಕೂಲವಾಗುತ್ತದೆಂದು ಹೇಳುವುದು ಸರಿಯಲ್ಲ. ನೀವು ಭೂಸುಧಾರಣಾ ಕಾನೂನನ್ನು ಜಾರಿಗೆ ತಂದು ಒಬ್ಬರು ೪೦ ಎಕರೆಯಮೇಲೆ ಜಮೀನನ್ನು ಇಟ್ಟುಕೊಳ್ಳಬಾರದೆಂದು ಹೇಳಿದ್ದರೂ ಸಹ ಕೆಲವರು ಬೇರೆಬೇರೆಯವರ ಹೆಸರುಗಳಲ್ಲಿ ನೂರಾರು ಇಲ್ಲವೆ ಸಾವಿರಾರು ಎಕರೆಗಳಷ್ಟು ಜಮೀನನ್ನು ಇಟ್ಟುಕೊಂಡಿದ್ದಾರೆ. ಇದು ಈ ದೇಶದಲ್ಲಿ ಮೊದಲಿನಿಂದಲೂ ನಡೆದುಕೊಂಡು ಬಂದಿರುವಂತಹ ಒಂದು ವ್ಯವಸ್ಥೆ ಆಗಿದೆ. ಇದೇ ವಿಚಾರದಲ್ಲಿ ಮಾನ್ಯ ವಿ. ಎಲ್. ಪಾಟೀಲ್ ಅವರು ಈ ಸಭೆಯಲ್ಲಿ ತಮಗಿರುವಂತಹ ಜಮೀನಿನ ವಿವರಗಳ ಬಗ್ಗೆ ಹೇಳಿದ್ದು ರೆಕಾರ್ಡ್ ಆಗಿದೆ. ತಮಗಿರುವಂತಹ ಎಲ್ಲ ಜಮೀನುಗಳನ್ನು ನೋಡಬೇಕಾದರೆ ಮಹೇಂದ್ರ ಜೀಪ್‌ನಲ್ಲಿ ಕುಳಿತುಕೊಂಡು ೨೪ ಗಂಟೆಗಳ ಕಾಲ ರೌಂಡ್ ಎಲ್ಲ ಕಡೆಗೂ ಹಾಕಬೇಕು ಎಂದು ಅವರೇ ಹೇಳಿದ್ದಾರೆ. ಮುಖ್ಯವಾಗಿ ನೀರಾವರಿಗೆ ಹೆಚ್ಚಿನ ಆದ್ಯತೆ ಕೊಡಬೇಕೆಂದು ನಾನು ಹೇಳುತ್ತೇನೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿರುವಂತಹ ಮಾತು ಸರಿಯಲ್ಲ. ನೀರಾವರಿ ಸೌಲಭ್ಯವನ್ನು ಯಾವ ರೀತಿ ಹೆಚ್ಚಿಸಬೇಕೆಂಬುದನ್ನು ತಮಗೂ ಸಹ ಗೊತ್ತಿದೆ. ಇವೊತ್ತು ಇರಿಗೇಷನ್ ಡ್ಯಾಮ್‌ಗಳಲ್ಲಿ ಮತ್ತು ಕೆರೆಗಳಲ್ಲಿ ತುಂಬಿರುವಂತಹ ಮಣ್ಣಿನ ಬಗ್ಗೆ ಬಹಳ ಜನ ಮಾನ್ಯ ಸದಸ್ಯರು ಹೇಳಿದ್ದಾರೆ. ಈ ಮಣ್ಣನ್ನು ತೆಗೆಸಲು ನೀವು ವ್ಯವಸ್ಥೆ ಮಾಡದಿದ್ದರೆ ಇನ್ನು ೫೦ ವರ್ಷಗಳ ನಂತರ ಯಾವುದೇ ಡ್ಯಾಮ್‌ನಲ್ಲಿಯೂ ಸಹ ನೀರು ಇರುವುದಿಲ್ಲ. ಮಣ್ಣು ಮಾತ್ರ ಇರುತ್ತದೆ. ಇಲ್ಲಿರುವಂತಹ ಮಣ್ಣನ್ನು ತೆಗೆಸಲು ಹೆಚ್ಚು ಖರ್ಚು ಬರುತ್ತದೆ, ನಮ್ಮ ಟೆಕ್ನಾಲಜಿಯನ್ನು ಉಪಯೋಗಿಸಿ ಈ ಕೆಲಸ ಮಾಡುವುದು ಕಷ್ಟ ಎಂದು ತಾವು ಹೇಳಬಹುದು. ಹಾಗಿದ್ದರೆ ಹೊರ ದೇಶಗಳ ಟೆಕ್ನಾಲಜಿಯನ್ನು ಇಂಪೋರ್ಟ್ ಮಾಡಿಕೊಂಡಾದರೂ ಸಹ ಇಲ್ಲಿ ತುಂಬಿರುವ ಮಣ್ಣನ್ನು ತೆಗೆಸಿದರೆ ಹೆಚ್ಚು ನೀರು ನಿಲ್ಲಲು ಅವಕಾಶವಾಗುತ್ತದೆ. ಇಂತಹ ಒಂದು ಕಾರ್ಯಕ್ರಮವನ್ನು ನೀವು ಏತಕ್ಕೆ ಕೈಕೊಳ್ಳಬಾರದು ? ತುಂಗಭದ್ರಾ ಡ್ಯಾಮ್‌ನಲ್ಲಿ ನಾನು ನೋಡಿರುವ ಪ್ರಕಾರ ಶೇಕಡಾ ೨೫ ರಷ್ಟು ಕ್ಯಾಚ್‌ಮೆಂಟ್ ಏರಿಯಾದಲ್ಲಿ ಮಣ್ಣು ತುಂಬಿಕೊಂಡಿದೆ. ಕೆ. ಆರ್. ಎಸ್. ಡ್ಯಾಮ್‌ನಲ್ಲಿ ಸಹ ಇದೇರೀತಿ ಸಿಲ್ಟ್ ತುಂಬಿಕೊಂಡಿದೆ. ಇದನ್ನು ತೆಗೆಸಲು ನೀವು ಕ್ರಮ ತೆಗೆದುಕೊಳ್ಳದಿದ್ದರೆ ಇನ್ನು ೫೦ ವರ್ಷಗಳ ನಂತರ ಈ ಡ್ಯಾಮ್‌ಗಳಲ್ಲಿ ನೀರು ನಿಲ್ಲುವುದಿಲ್ಲ ಬರೀ ಮಣ್ಣು ಮಾತ್ರ ನಿಲ್ಲುತ್ತದೆ. ಬರೀ ಮಣ್ಣು ಮಾತ್ರ ಇರುತ್ತದೆ. ಆದಕಾರಣ ಈ ನಿಟ್ಟಿನಲ್ಲಿ ಈಗಿನಿಂದಲೇ ಏನಾದರೂ ಒಂದು ಮಾಸ್ಟರ್‌ಪ್ಲಾನ್ ಮಾಡಿ ಆ ಒಂದು ಸಿಲ್ಟ್ ತೆಗೆಯುತಕ್ಕಂಥ ಯೋಜನೆಯನ್ನು ಕಾರ್ಯಗತ ಮಾಡತಕ್ಕಂಥ ಪ್ರಯತ್ನವನ್ನು ಸರ್ಕಾರ ಮಾಡಬೇಕು ಎಂದು ಹೇಳುತ್ತೇನೆ, ಈಗ ನಮ್ಮ ಮೈನರ್ ಇರಿಗೇಷನ್ ಡಿಪಾರ್ಟ್‌ಮೆಂಟಿನ ನಮ್ಮ ಮಂತ್ರಿಗಳು ಒಬ್ಬರು ಇದ್ದಾರೆ. ಲಿಫ್ಟ್ ಇರಿಗೇಷನ್ ಮಂತ್ರಿಗಳಿದ್ದಾರೆ. ತಾವು ಇರಲಿಲ್ಲ, ಅವರ ಬಗ್ಗೆ ಬಹಳ ಸೊಗಸಾಗಿ ಚರ್ಚೆಯಾಯಿತು. ಇಲ್ಲಿ ಕೆರೆಗಳ ಬಗ್ಗೆ ಒಂದು ಮಾತನ್ನು ನಾನು ಹೇಳಿಬಿಡುತ್ತೇನೆ. ಈಗ ಕೆರೆಗಳನ್ನು ಅಂದರೆ ಈ ಮೈನರ್ ಇರಿಗೇಷನ್ ಡಿಪಾರ್ಟ್‌ಮೆಂಟಿನ ಹೆಚ್ಚಿನ ಕೆಲಸಗಳನ್ನು ಜಿಲ್ಲಾ ಪರಿಷತ್ತಿಗೆ ಈಗಾಗಲೇ ವಹಿಸಲಾಗಿದೆ. ಮೊದಲು ಕೆರೆಗಳನ್ನು ಸರ್ವೆಮಾಡಿ, ಈ ಕೆರೆ ಮಾಡಬೇಕು ಎಂದು ಬಡ್ಜೆಟ್ ಅಲೋಕೇಷನ್ ಮಾಡಿದಮೇಲೆ ಟೆಂಡರ್ ಕರೆದು ಎಲ್ಲಾ ಆದಮೇಲೂ ಕೂಡ ಎಲ್ಲಿ ತಮಗೆ ಅನುಕೂಲವಾಗುವುದಿಲ್ಲವೋ ಅಲ್ಲಿ ಮಾತ್ರ ಮಾಡಕೂಡದು ಎಂದು ಅಬ್ಜಕ್ಷನ್‌ನನ್ನು ಕೆಲವು ಜಿಲ್ಲಾ ಪರಿಷತ್ತಿನವರು ಮಾಡಲು ಪ್ರಾರಂಭ ಮಾಡಿದ್ದಾರೆ. ಉದಾಹರಣೆಗೆ ಬಳ್ಳಾರಿಯಲ್ಲಿ ಮಾಡಿದ್ದಾರೆ. ನನ್ನ ತಾಲ್ಲೂಕಿನಲ್ಲಿ ಜೋಗ ಎನ್ನುತಕ್ಕಂಥ ಊರಿನಲ್ಲಿ ಬಹಳ ದೊಡ್ಡ ಕೆರೆಯನ್ನು ಪ್ರಪೋಸ್‌ಮಾಡಿ ಟೆಂಡರ್ ಆಗಿದೆ, ಅಪ್ರೂವ್ ಮಾಡಿದ್ದಾರೆ, ಅದು ೨೫ ಲಕ್ಷ ರೂಪಾಯಿ ಕೆರೆ. ಕೆಲಸ ಶುರುಮಾಡಿ ಅಂದರೆ ಜಿಲ್ಲಾಪರಿಷತ್ ಮೆಂಬರುಗಳು ಬೇಡ, ಶುರು ಮಾಡುವುದು ಬೇಡ ಎಂದು ಹೇಳುತ್ತಾರೆ ಎಂದು ಹೇಳಿದ್ದಾರೆ. ನಮ್ಮ

ತಾಲ್ಲೂಕಿನಲ್ಲಿ ಕೆಲವು ಸಣ್ಣ ಸಣ್ಣ ಕೆರೆಗಳು ಇವೆ. ಎಲ್ಲಿ ಕೆರೆಗಳು ಇವೆ ಅಂದರೆ ಎಲ್ಲಿ ಶ್ಯಾನುಭೋಗರು ಇರುತ್ತಾರೆ ಅಲ್ಲಿ ಕೆರೆಗಳು ಇರುತ್ತವೆ. ಇನ್ನು ಮೇಲೆ ಇಂತಹ ಪರಿಸ್ಥಿತಿ ಆಗಬಾರದು. ಎಲ್ಲಿ ಜಿಲ್ಲಾ ಪರಿಷತ್ ಮೆಂಬರ್ಸ್ ಪ್ರಬಲರಾಗಿರುತ್ತಾರೆ ಅಲ್ಲಿ ಮಾತ್ರ ಮಾಡಿಕೊಂಡು, ನಿಜವಾಗಲೂ ಎಲ್ಲಿ ಕೆರೆ ಮಾಡುವುದಕ್ಕೆ ಸಾಧ್ಯತೆ ಇದೆ ಅಲ್ಲಿ ಮಾಡಲಾರದಂಥ ಒಂದು ಪರಿಸ್ಥಿತಿ ಉದ್ಭವವಾಗಬಾರದು. ಈ ವ್ಯತ್ಯಾಸ ಏನಿದೆ ಅದನ್ನು ನಿವಾರಣೆ ಮಾಡಬೇಕೆಂದು ವಿನಂತಿ ಮಾಡಿಕೊಂಡು ಮಾನ್ಯ ಅಧ್ಯಕ್ಷರು ನನಗೆ ಕೆಲವು ನಿಮಿಷಗಳ ಕಾಲ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಾಬುರೆಡ್ಡಿ ವಿ. ತುಂಗಳ್ (ಬೀಳಗಿ).— ಸನ್ಮಾನ್ಯ ಅಧ್ಯಕ್ಷರೆ, ನಾನು ಕಂದಾಯ ಇಲಾಖೆಯ ಗೋಜಿಗೆ ಹೋಗಲಾರದೆ ಕೇವಲ ನೀರಾವರಿ ವಿಷಯದ ಬಗ್ಗೆ ತಾವು ನಿಗದಿ ಮಾಡಿದಂಥ ಅವಧಿಯಲ್ಲಿ ಮಾತನಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ನನ್ನ ಎರಡೂವರೆ ವರ್ಷದ ಮೂರು ವರ್ಷಗಳ ಶಾಸಕಗಿರಿಯ ಅನುಭವದಲ್ಲಿ, ನಾನು ಈ ಸದನದಲ್ಲಿ ಬಂದ ಮೇಲೆ ನನಗೆ ಒಂದು ಕಹಿ ಮತ್ತು ಕಟು ಅನುಭವವಾಗಿದೆ. ಅದೇನೆಂದರೆ, ಕಳೆದ ೫–೬ ವರ್ಷಗಳಿಂದ ವಿಶೇಷತಃ ೧೦ ವರ್ಷಗಳಿಂದ ನಾವು ನೀರಾವರಿ ಯೋಜನೆಯಲ್ಲಿ ಗುರಿ ತಲುಪುವಲ್ಲಿ ಬಹಳ ಮಂದವಾಗಿ ಸಾಗಿದ್ದೇವೆ ಎನ್ನುವುದಕ್ಕಿಂತ ಹೊರಗಡೆ ನಮ್ಮ ಕ್ಷೇತ್ರದಲ್ಲಿ ಹೋಗಿ ನಾವು ಜನರಿಗೆ ಏನು ಹೇಳಬೇಕು ಎನ್ನುವ ವಿಷಯದಲ್ಲಿ ಆನುಮಾನ ಬರುವ ರೀತಿಯಲ್ಲಿ ಇವತ್ತು ನೀರಾವರಿ ಯೋಜನೆಗಳು ಸಾಗಿವೆ. ಮಾನ್ಯ ಅಧ್ಯಕ್ಷರೆ, ನಾನು ಒಂದು ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ. ಅದೇನೆಂದರೆ ನಮ್ಮ ಮುಖಂಡರು ಮತ್ತು ನಾಯಕರು ಒಂದು ಮಾತನ್ನು ಹೇಳಿದ್ದಾರೆ. ಹೋದ ಸಲ ಬಡ್ಜೆಟ್ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದ್ದಾರೆ. ನಾವು ನೀರಾವರಿ ಕ್ಷೇತ್ರದಲ್ಲಿ ವಿಫಲವಾಗಿ ಕಳೆದ ೩–೪ ವರ್ಷಗಳಿಂದ ನಾವು ಬರಗಾಲವನ್ನು ಅನುಭವಿಸಿದ್ದರಿಂದ ಈ ಬರಗಾಲದ ದುಷ್ಪರಿಣಾಮವಾಗಿ ಬೆಳೆ ಬಾರದೇ ಹೋದುದರಿಂದ, ಬೆಳೆ ಕೈಕೊಟ್ಟಿದ್ದರಿಂದ ಸರ್ವ ರಂಗಗಳಲ್ಲಿ ಹಿನ್ನಡೆಯಾಗಿದೆ ಎನ್ನುವ ಮಾತನ್ನು ತಮ್ಮ ಭಾಷಣದಲ್ಲಿ ಒಪ್ಪಿಕೊಂಡಿದ್ದಾರೆ. ನಾನು ಈ ನೀರಾವರಿ ಬಗ್ಗೆ ಒತ್ತು ಕೊಟ್ಟು ಏಕೆ ಮಾತನಾಡುತ್ತಿದ್ದೇನೆಂದರೆ ಮಳೆಗಾಲ ಅಂದರೆ ಮಳೆ ಬರುವುದು ವರ್ಷದಿಂದ ವರ್ಷಕ್ಕೆ ಸರಿಸಿ ಹೋಗುತ್ತಿರುವುದರ ಹಿನ್ನೆಲೆಯಲ್ಲಿ ಮತ್ತು ಅಂತರ ರಾಜ್ಯ ನದಿ ವಿವಾದಗಳು ನಡೆದಿರುವ ಹಿನ್ನೆಲೆಯಲ್ಲಿ ಮತ್ತು ಸಾರ್ವಜನಿಕ ಮತ್ತು ಖಾಸಗಿ ಕ್ಷೇತ್ರಗಳ ಅನೇಕ ಉದ್ದಿಮೆಗಳೇ ಇವತ್ತು ತಮ್ಮ ಬಾಗಿಲನ್ನು ಮುಚ್ಚಿಕೊಂಡು ಹೋಗಿ ಸಾವಿರಾರು ಜನರು ನಿರುದ್ಯೋಗದತ್ತ ತಳ್ಳಲ್ಪಡುತ್ತಾ ಇದ್ದಾರೆ, ಈ ಹಿನ್ನೆಲೆಯಲ್ಲಿ ನಾವು ಈ ನೀರಾವರಿ ಯೋಜನೆಗಳಿಗೆ ಮಹತ್ವ ಕೊಡಬೇಕು ಎಂದು ತಮ್ಮ ಮುಖಾಂತರ ಮಾನ್ಯ ನೀರಾವರಿ ಸಚಿವರಿಗೆ ಹೇಳಬಯಸುತ್ತೇನೆ. ಏಕೆಂದರೆ, ನಾನು ಮೂಲವಾಗಿ ಕೃಷ್ಣ ನದಿ ಪ್ರದೇಶದಿಂದ ಬಂದವನು ನನ್ನ ಕ್ಷೇತ್ರದಲ್ಲಿ ಒಂದು ಕಡೆ ಘಟಪ್ರಭ ಇದೆ, ನನ್ನ ಕ್ಷೇತ್ರದ ಇನ್ನೊಂದು ಕಡೆ ಕೃಷ್ಣ ನದಿ ಇದೆ. ಈ ಎರಡು ನದಿಗಳ ಮಧ್ಯದಲ್ಲಿ ಘಟಪ್ರಭ ಎಡದಂಡೆ ಕಾಲುವೆ ಇದೆ. ಇವತ್ತು ಈ ಕಾಲುವೆ ಸ್ಥಿತಿ ಏನಾಗಿದೆ, ನೀರಿನ ಸ್ಥಿತಿ ಏನಾಗಿದೆ ಎಂದು ಸುಮ್ಮನೆ ಕೂಡಲಿಕ್ಕೆ ಆಗುವುದಿಲ್ಲ, ಏಕೆಂದರೆ ಸರ್ವ ರಂಗಗಳಲ್ಲಿ ಹಿನ್ನಡೆಯಾಗಿದೆ ಇದು ಒಂದು ಕಾರಣ ನಮ್ಮ ದೇಶದಲ್ಲಿ ಏನಾದರೂ ಮುಂದುವರಿಯಬೇಕು. ಏನಾದರೂ ಆಗಬೇಕು ಅಂದರೆ ನೀರಾವರಿಯಲ್ಲಿ ಸಾಧಿಸಲಾರದೇ ಇನ್ನೇನೂ ಸಾಧಿಸಲಾಗುವುದಿಲ್ಲ. ಗ್ರಾಮಾಂತರ ಪ್ರದೇಶದಲ್ಲಿರುವಂಥ ನಿರುದ್ಯೋಗವನ್ನು ಹೊಡೆದಟ್ಟಬೇಕಾದರೆ ಒಂದೇ ಒಂದು ಗುರಿ ಇದೆ, ನಾವು ಆ ನೀರಾವರಿ ಗುರಿಯನ್ನು ತಲುಪಬೇಕು. ಸಾಮಾನ್ಯವಾಗಿ ಹಳ್ಳಿಗಳಲ್ಲಿ, ತಮ್ಮ ಊರಿನಲ್ಲಿ, ನನ್ನ ಊರಿನಲ್ಲಿ ಒಂದು ಶಾಲಾ ಕಟ್ಟಡ ನಡೆಯುತ್ತಿದೆ ಎಂದು ಇಟ್ಟುಕೊಳ್ಳೋಣ. ಶಾಲಾ ಕಟ್ಟಡ ನಡೆದರೆ ೫–೬ ಜನ ಕೆಲಸ ಮಾಡುತ್ತಾರೆ. ಒಂದು ತಿಂಗಳಲ್ಲಿ ಆ ಶಾಲಾ ಕಟ್ಟಡದ ಕೆಲಸ ಮುಗಿಯುತ್ತದೆ. ಪಂಚಾಯತ್ ಕಟ್ಟಡ ಕೆಲಸ ಪ್ರಾರಂಭ ಮಾಡಿದ್ದರಿಂದ ೧೫ ಜನರು ಕೆಲಸ ಮಾಡುತ್ತಿದ್ದು ಕೆಲಸ ಮುಗಿದಿದೆ. ಮಂಡಲ ಪಂಚಾಯಿತಿ ಬಂದ ಮೇಲೆ ೫೦ ಜನರಿಗೆ ಕೆಲಸ ಸಿಗುತ್ತದೆ. ತಾತ್ಕಾಲಿಕ ಕೂಲಿ ಸಿಕ್ಕಿದೆ. ನಾವು ನೀರಾವರಿಯ ಬಗ್ಗೆ ಗಮನ ಕೊಟ್ಟು ಹಳ್ಳಿಯಲ್ಲಿ ಹೊಸದಾಗಿ ಹೆಚ್ಚು ನೀರಾವರಿ ಮಾಡಿದರೆ ಕೂಲಿಕಾರ ವರ್ಗದ ನಿರುದ್ಯೋಗ ಹೊರಟು ಹೋಗುತ್ತದೆ. ಗ್ರಾಮಾಂತರ ಜನರ ನಿರುದ್ಯೋಗವನ್ನು ಹೋಗಲಾಡಿಸಲು ಹೆಚ್ಚು ನೀರಾವರಿ ಕ್ಷೇತ್ರಗಳನ್ನು ಕೈಗೊಳ್ಳಬೇಕು. ಈಗ ೧೦ ವರ್ಷದಿಂದ ನಮ್ಮ ಸ್ವಂತ ಊರಿನಲ್ಲಿ ಬರಗಾಲ ಬಂದಾಗ ಜನರು ನಮ್ಮ ಮನೆಯ ಮುಂದೆ ಬಂದು ನೀವೇನಾದರೂ

ಬರಗಾಲ ಕಾಮಗಾರಿಯನ್ನು ಆರಂಭಿಸಿ ಎಂದು ಕೇಳುತ್ತಿದ್ದರು. ನನ್ನ ಕ್ಷೇತ್ರಕ್ಕೆ ೨೦೦ ಎಕರೆ ಪ್ರದೇಶಕ್ಕೆ ಏತ ನೀರಾವರಿ ಬಂದ ಮೇಲೆ ಬಿಜಾಪುರ ಜಿಲ್ಲೆಯ ಗ್ರಾಮೀಣ ಬ್ಯಾಂಕಿನವರು ರೈತರಿಗೆ ಸಹಾಯ ಮಾಡಿದ ಮೇಲೆ ನಮ್ಮ ಊರಿನಲ್ಲಿ ಕೃಷ್ಣಾ ನದಿಯಿಂದ ನೀರನ್ನು ಎತ್ತಿ ಜನರು ೧೦ ಸಾವಿರ ಎಕರೆ ಜಮೀನಿಗೆ ನೀರಾವರಿಯಾಗಿದೆ. ಇವತ್ತು ದುಡಿಯಲಿಕ್ಕೆ ಜನರು ಸಿಗುತ್ತಿಲ್ಲ. ನನ್ನ ಕ್ಷೇತ್ರ ನೀರಾವರಿ ಕ್ಷೇತ್ರವಾಗಿದೆ. ಬರಗಾಲ ಬಂದಾಗ ಸಾವಿರಾರು ಜನರನ್ನು ಕರೆದುಕೊಂಡು ಹೋಗಿ, ನನ್ನ ಕ್ಷೇತ್ರದಲ್ಲಿರುವ ಇನ್ನೊಂದು ನೀರಾವರಿ ಕ್ಷೇತ್ರಕ್ಕೆ ಕೆಲಸ ಮಾಡಲು ಹಚ್ಚಿದ್ದೇನೆ. ಜನರ ಸರ್ವತೋಮುಖ ಕಲ್ಯಾಣಕ್ಕಾಗಿ ನಾವು ನೀರಾವರಿಗೆ ಇವತ್ತು ಹೆಚ್ಚಿನ ಆದ್ಯತೆಯನ್ನು ಕೊಡಬೇಕಾಗುತ್ತದೆ. ಸದನದಲ್ಲಿ ಕಳೆದ ವರ್ಷ ಮತ್ತು ಹಿಂದಿನ ವರ್ಷ ನಾವು ಅಪರಿಮಿತ ಅಧಿಕಾರವನ್ನು ಕೊಟ್ಟು, ಕೃಷ್ಣಾ, ಕಾವೇರಿ ಯೋಜನೆಗಳಿಗೆ ಎಷ್ಟು ಬೇಕಾದರೂ ಹಣವನ್ನು ಖರ್ಚು ಮಾಡಿಯೆಂದು ನಾವು ಹೇಳಿದ್ದೇವು. ಕಳೆದ ೫ ವರ್ಷದಿಂದ ಕೃಷ್ಣಾ, ಕಾವೇರಿ ಯೋಜನೆಗಳಿಗೆ ವೆಚ್ಚವಾದ ಹಣವೆಷ್ಟು ? ಕಾವೇರಿ ಜಲಾಶಯನದ ಪ್ರದೇಶದಲ್ಲಿ ನಾವು ೧ ರೂಪಾಯಿ ಖರ್ಚು ಮಾಡಿದರೆ ಕೃಷ್ಣಾ ಯೋಜನೆಯಲ್ಲಿ ೪ ರೂಪಾಯಿಯನ್ನು ಖರ್ಚು ಮಾಡಬೇಕಾಗುತ್ತದೆ. ಕಾವೇರಿ ಯೋಜನೆಗೆ ವಿಶ್ವ ಬ್ಯಾಂಕ್ ನೆರವು ಇಲ್ಲ. ಕೃಷ್ಣಾ ಯೋಜನೆಗೆ ವಿಶ್ವ ಬ್ಯಾಂಕ್ ನೆರವು ಇದೆ. ವಿಶ್ವ ಬ್ಯಾಂಕಿನ ನೆರವನ್ನು ಬಿಟ್ಟು, ನಾನು ಒಂದು ಮಾತನ್ನು ನೀರಾವರಿ ಮಂತ್ರಿಗಳಿಗೆ ಕೇಳುತ್ತೇನೆ. ಕಳೆದ ೫ ವರ್ಷದಲ್ಲಿ ರಾಜ್ಯ ಸರ್ಕಾರ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಇರತಕ್ಕ ಅಂಕಿ ಸಂಖ್ಯೆಗಳನ್ನು ನೋಡಿದಾಗ ಇದರಲ್ಲಿ ಸ್ಪಷ್ಟವಾದಂತ ತಾರತಮ್ಯ ಆಗಿದೆಯೆಂದು ಕಾಣುತ್ತದೆ. ಈ ರೀತಿ ಒಂದು ಕಡೆ ಕೋಟಿಗಟ್ಟಲೆ ಖರ್ಚು ಮಾಡುವುದು, ನಮ್ಮ ಕಡೆ ಸಾವಿರ ಖರ್ಚು ಮಾಡುವುದಿಲ್ಲವೆಂದು ನಮ್ಮ ಜನ ಹೇಳುತ್ತಾರೆ. ನೀವು ವಿಧಾನ ಮಂಡಲದ ಒಳಗಡೆ ಇದ್ದು, ಮತ್ತೊಂದು ಕರ್ನಾಟಕಕ್ಕೆ ಏಕೆ ಹೋರಾಟ ಮಾಡಬಾರದೆಂದು ಕೇಳುತ್ತಾರೆ. ಮಾನ್ಯ ಸಚಿವರಾದ ಜೆ. ಹೆಚ್. ಪಟೇಲರು ಒಂದು ಕಡೆ ಭಾಷಣ ಮಾಡಿ ಈ ರೀತಿ ತಾರತಮ್ಯ ಆಗಬೇಕಾದರೆ ನಾವು ಇನ್ನೊಂದು ಕರ್ನಾಟಕ ಮಾಡಬೇಕಾಗುತ್ತದೆಂದು ಹೇಳಿದರು. ಬಹಳ ವರ್ಷಗಳ ಹಿಂದೆ ಅವರು ಮಾಡಿದ ಭಾಷಣ ಇಂದು ಕಡತದಲ್ಲಿದೆ. ನಾನು ಇವತ್ತು ಅದನ್ನು ಹೇಳಬೇಕಾಗುತ್ತದೆ. ಇದೇ ರೀತಿ ಕೃಷ್ಣಾ ಮೇಲ್ದಂಡೆ ಯೋಜನೆಗೆ ತಾರತಮ್ಯ ಮಾಡುವುದಾದರೆ ಹೈದರಾಬಾದ್ ಕರ್ನಾಟಕಕ್ಕೆ ಮುಂಬೈ ಕರ್ನಾಟಕಕ್ಕೆ ಚಳುವಳಿ ಮಾಡಬೇಕೆಂಬ ಸಂಗತಿಯನ್ನು ನಿಮ್ಮ ಮುಖಾಂತರ ನೇರವಾಗಿ ಮಂತ್ರಿಗಳಿಗೆ ಹೇಳಬಯಸುತ್ತೇನೆ. ನಾಲ್ಕು ನದಿ ಹರಿಯುವ ನಮ್ಮ ಜಿಲ್ಲೆಯಲ್ಲಿ ಒಂದೇ ಒಂದು ಏತ ನೀರಾವರಿ ಯೋಜನೆಯನ್ನು ಮಾಡಲಿಕ್ಕೆ ಆಗಲಿಲ್ಲ. ಕೆರೆಗಳಲ್ಲಿ ಹೂಳು ತೆಗೆಸಲು ಆಗಲಿಲ್ಲ. ಇರುವಂತ ಏತ ನೀರಾವರಿ ಕಾಮಗಾರಿಗಳನ್ನು ವಿಸ್ತರಿಸಲಿಕ್ಕೆ ಆಗಲಿಲ್ಲ. ನನ್ನ ಕ್ಷೇತ್ರದಲ್ಲಿ ಜಮಖಂಡಿ ತಾಲ್ಲೂಕಿನಲ್ಲಿ ೩೩ ಹಳ್ಳಿಗಳು, ಬೀಳಗಿಯಲ್ಲಿ ೬೦ ಹಳ್ಳಿಗಳಿದ್ದು, ಒಟ್ಟು ೯೩ ಹಳ್ಳಿಗಳಿರುತ್ತವೆ. ಇಲ್ಲಿ ೯ ಏತ ನೀರಾವರಿ ಯೋಜನೆಗಳಿವೆಯೆಂದು ಅನೇಕ ಸಲ ಮುಖ್ಯಮಂತ್ರಿಗಳಿಗೆ ಮತ್ತು ಇತರೆ ಮಂತ್ರಿಗಳಿಗೆ ನಾನು ಹೇಳಿದ್ದೇನೆ. ಇರುವಂತ ಏತ ನೀರಾವರಿ ಯೋಜನೆಗಳನ್ನು ವಿಸ್ತರಣೆ ಮಾಡುವುದಕ್ಕೆ ಅವಕಾಶವಿಲ್ಲ. ಇವತ್ತಿನ ಬಜೆಟ್ಟನ್ನು ಲೆಕ್ಕ ಹಾಕಿದರೆ ಹೋದ ವರ್ಷ ಸಣ್ಣ ನೀರಾವರಿಗೆ ಕೊಟ್ಟಿದ್ದಕ್ಕಿಂತ ಕಡಿಮೆ ಹಣವನ್ನು ಕೊಟ್ಟಿದ್ದಾರೆ. ಸಣ್ಣ ನೀರಾವರಿ ವಿಷಯದಲ್ಲಿ ನೀವು ಜನಸಂಖ್ಯೆಯನ್ನು ಬಳಕೆ ಮಾಡಿಕೊಳ್ಳಬೇಕೆಂದು ನಾನು ಸರ್ಕಾರಕ್ಕೆ ಅನೇಕ ಬಾರಿ ಹೇಳಿದ್ದೇನೆ. ಇವತ್ತು ಸರ್ಕಾರದ ದಾರಿ ಕಾಯುವರದೆ ನನ್ನ ಕ್ಷೇತ್ರದ ಚಿಕ್ಕಪಡಸಲಗಿ ಎಂಬ ಗ್ರಾಮದಲ್ಲಿ ಕೃಷ್ಣಾ ನದಿಯ ವ್ಯಾಪ್ತಿಯಲ್ಲಿ ಇಡೀ ಭಾರತ ಖಂಡದಲ್ಲಿಯೇ ರೈತರು ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ, ಬ್ಯಾರೇಜ್ ನಿರ್ಮಾಣ ಮಾಡಿದ್ದಾರೆ. ಆ ಒಂದು ರೈತ ಸಂಘಕ್ಕೆ ನಾನು ಅಧ್ಯಕ್ಷನಾಗಿದ್ದೆ. ಕಳೆದ ೩ ವರ್ಷದಲ್ಲಿ ಮೂರು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ, ೨೫೫ ಜನರು ಕೆಲಸ ಮಾಡುತ್ತಿದ್ದಾರೆ. ರೈತರು ತಮ್ಮ ಶ್ರಮದಾನವನ್ನು ಮಾಡುತ್ತಿದ್ದಾರೆ. ಇಂತಹ ಒಂದು ಯೋಜನೆಯನ್ನು ಸದನದ ಸದಸ್ಯರು, ಪತ್ರಿಕಾ ಪ್ರತಿನಿಧಿಗಳು, ಅಧಿಕಾರ ವರ್ಗದವರು ಬಂದು ನೋಡಬೇಕೆಂದು ತಮ್ಮ ಮುಖಾಂತರ ಆಮಂತ್ರಣ ನೀಡುತ್ತೇನೆ. ಜನಶಕ್ತಿಯನ್ನು ಬೆಳೆಸಿಕೊಂಡು ನೀರಾವರಿ ಯೋಜನೆಗಳಿಗೆ ಹೆಚ್ಚಿನ ಆಸಕ್ತಿಯನ್ನು ವಹಿಸಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಉಳಿದ ಎಲ್ಲಾ ಕೆಲಸಗಳನ್ನೂ ಕೈಬಿಟ್ಟು ನೀರಾವರಿ ಯೋಜನೆಗಳಿಗೆ ಆದ್ಯತೆಯನ್ನು ಕೊಡಬೇಕು. ತಾವು ಆದ್ಯತೆಯನ್ನು ಕೊಡದಿದ್ದರೆ ನಾವು ಸರ್ವರಂಗದಲ್ಲಿಯೂ ವಿಫಲವಾದಂತಾಗುತ್ತದೆ. ಹೊಳೆಯಲ್ಲಿ ಹುಣಸೇಹಣ್ಣನ್ನು ತೊಳೆದಂತಾಗುತ್ತದೆಂದು ಹೇಳಿ ಈ ವಿಷಯದಲ್ಲಿ ಮಾನ್ಯ ನೀರಾವರಿ ಮಂತ್ರಿಗಳಿಗೆ ಹೆಚ್ಚಿಗೆ ಒತ್ತು ಕೊಟ್ಟು ಇಷ್ಟು ಮಾತನಾಡಲು ಅವಕಾಶವನ್ನು ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಮಾನ್ಯ ಬಸವಲಿಂಗಪ್ಪನವರೇ ತಾವೇ ಲಾಸ್ಟ್ ಸ್ಪೀಕರ್.

(ಗೊಂದಲ)

(ಈ ಹಂತದಲ್ಲಿ ಅನೇಕ ಮಾನ್ಯ ಸದಸ್ಯರು ಎದ್ದು ನಿಂತು ತಮಗೆ ಮಾತನಾಡಲು ಅವಕಾಶ ಕೊಡಬೇಕು, ತಮಗೆ ಅವಕಾಶ ಕೊಡಬೇಕೆಂದು ಒತ್ತಾಯಿಸಿದರು)

ಅಧ್ಯಕ್ಷರು.—ಈಗ ಕೊಡುವುದಕ್ಕಾಗುವುದಿಲ್ಲ. ಏಕೆಂದರೆ ನಿಮ್ಮಲ್ಲಿ ಅನೇಕರು ನಿನ್ನೆಯ ದಿವಸ ನಾನು ಹೆಸರನ್ನು ಕರೆದಾಗ ಸಭೆಯಲ್ಲಿರಲಿಲ್ಲ. ನಿನ್ನೆ ಮಾನ್ಯ ಚಂದ್ರಶೇಖರ ಮಾಮನಿಯವರು, ಮಾನ್ಯ ತುಂಗಳ್‌ರವರು ಇರಲಿಲ್ಲ. ಮಾನ್ಯ ತುಂಗಳ್‌ರವರು ಇವತ್ತು ಮಾತನಾಡಿದ್ದಾರೆ. ಇನ್ನು ಮಾನ್ಯ ಮಾದೇಗೌಡರು ಮಾನ್ಯ ಚಂದ್ರಕಾಂತ ಬೆಲ್ಲದ್‌ರವರು, ಮಾನ್ಯ ಬಂಗಾರಪ್ಪನವರು, ಮಾನ್ಯ ನೀಲಕಂಠಪ್ಪನವರು, ಮಾನ್ಯ ಪ್ರಭಾಕರ್ ರಾಣೆಯವರು, ಮಾನ್ಯ ಐ. ಬಿ. ಶಂಕರ್‌ರವರು, ಮಾನ್ಯ ಮಾಲೀಕಯ್ಯ ಗುತ್ತೇದಾರ್‌ರವರು, ಮಾನ್ಯ ಜಿ.ಎಸ್. ಆಚಾರ್‌ರವರು ಯಾರೂ ಕೂಡ ನಾನು ಕರೆದಾಗ ಇರಲಿಲ್ಲ. ಆದ್ದರಿಂದ ಇವತ್ತು ಅವರು ಯಾರಿಗೂ ನಾನು ಮಾತನಾಡಲು ಅವಕಾಶ ಕೊಡುವುದಿಲ್ಲ. ಈಗ ಮಾನ್ಯ ಬಸವಲಿಂಗಪ್ಪನವರು ಮಾತನಾಡಲಿ.

(ಗೊಂದಲ)

ಅಧ್ಯಕ್ಷರು.—ನಾನು ಯಾರಿಗೂ ಅವಕಾಶ ಕೊಡುವುದಿಲ್ಲ. ದಯುವಿಟ್ಟು ಕೊಡಿ.

ಶ್ರೀ ಕೆ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೆ, ಹಳಬರು ಕೇವಲ ಹೇಳಿದ್ದನ್ನೇ ಹೇಳುತ್ತಿರುತ್ತಾರೆ. ಆದ್ದರಿಂದ ಹೊಸಬರಿಗೆ ಅವಕಾಶ ಕೊಡಿ.

ಅಧ್ಯಕ್ಷರು.—ನೀವೆಲ್ಲರೂ ಆಬ್ಸೆಂಟ್ ಇದ್ದುದರಿಂದ ಮಾನ್ಯ ಕೆ. ಹೆಚ್. ಶ್ರೀನಿವಾಸ್ ರವರಿಗೆ ಒಂದು ತಾಸು ಮಾತನಾಡಲು ಅವಕಾಶ ಕೊಟ್ಟಿದ್ದೇನೆ. ಇವತ್ತು ಚರ್ಚೆಯನ್ನು ಮುಗಿಸಬೇಕು, ನಾಳೆ ರಿಪ್ಲೈ ಇದೆ. ನಾನು ಕರೆದಾಗ ಯಾರೂ ಇಲ್ಲಿ ಇರುವುದಿಲ್ಲ. ಆದರೆ ಈಗ ಇಲ್ಲಿ ಬಂದು ಗಲಾಟೆ ಮಾಡುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸ್ವಾಮಿ, ತಾವು ಮೊದಲು ಹಾಕಿಕೊಂಡಿದ್ದ ಕಾರ್ಯಕ್ರಮದ ಬಗ್ಗೆ 2 ದಿವಸ ರಿಯಾಯಿತಿಯನ್ನು ಕೊಟ್ಟು ಸಹಕರಿಸಿದ್ದೇವೆ.

ಅಧ್ಯಕ್ಷರು.—ನಾನು ಯಾರಿಗೂ ಅವಕಾಶ ಕೊಡುವುದಿಲ್ಲ. ಮಾನ್ಯ ಬಸವಲಿಂಗಪ್ಪನವರೇ ತಾವು ಮಾತನಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಮ್ಮ ಜೊತೆ ಸಹಕಾರ ಮಾಡಿ ನಾವು ಚರ್ಚೆ ಮಾಡಬೇಕಾದ ವಿಚಾರದಲ್ಲಿ 2 ದಿವಸ ಕಡಿಮೆ ಮಾಡಿಕೊಂಡಿದ್ದೇವೆ. ಆದ್ದರಿಂದ ನಮ್ಮಲ್ಲಿ ಕೆಲವರಿಗೆ ಮಾತನಾಡಲು ಅವಕಾಶ ಕೊಡಬೇಕು.

ಅಧ್ಯಕ್ಷರು.—ಮಾನ್ಯ ಬಸವಲಿಂಗಪ್ಪನವರೆ, ನೀವು ಮಾತನಾಡಿ. ನೀವು ಮಾತನಾಡದಿದ್ದರೆ ಸಭೆ ಮುಕ್ತಾಯವಾಯಿತು ಎಂದು ಹೇಳಿ ಇಲ್ಲಿಗೇ ಅಡ್ಜರ್ನ್ ಮಾಡುತ್ತೇನೆ.

(ಗೊಂದಲ)

ಶ್ರೀ ಬಿ. ಎಸ್. ರಾಣೆ.—ಮಾನ್ಯ ಅಧ್ಯಕ್ಷರೆ, ಇದು ನ್ಯಾಯವೇ......

ಶ್ರೀ ಎಸ್. ಆರ್. ಬೊಮ್ಮಾಯಿ.—20 ನೇ ತಾರೀಖಿನೊಳಗೆ ಎಲ್ಲಾ ಡಿಮ್ಯಾಂಡ್‌ಗಳನ್ನೂ ಪಾಸ್ ಮಾಡಿ ಮುಗಿಸಬೇಕೆಂದು ನಾವು ನಿನ್ನೆಯ ದಿವಸ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ನಿರ್ಣಯ ಮಾಡಿದ್ದೇವೆ.

ಶ್ರೀ ಧರ್ಮಸಿಂಗ್.—೨೦ನೇ ತಾರೀಖಿನೊಳಗೆ ಅಂತ ಎಲ್ಲವನ್ನೂ ತರಾತುರಿಯಲ್ಲಿ ಮಾಡುವುದು ಬೇಡ.

ಶ್ರೀ ಎಸ್. ಆರ್. ಬೊಮ್ಮಾಯಿ.—ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ನಿರ್ಣಯವಾದ ಪ್ರಕಾರ ಇವತ್ತು ನಾನು ಉತ್ತರವನ್ನು ಕೊಡಬೇಕೆಂದಿತ್ತು. ಆದರೂ ಕೂಡ ಇನ್ನೂ ಕೆಲವು ಸದಸ್ಯರಿಗೆ ಮಾತ ನಾಡಲು ಅವಕಾಶ ಸಿಕ್ಕಿಲ್ಲ ಎಂದು ನಾನು ನಾಳೆ ಉತ್ತರ ಕೊಡುತ್ತೇನೆಂದು ಹೇಳಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೨ ದಿವಸ ಅಡ್ಜಸ್ಟ್ ಮಾಡಿಕೊಳ್ಳಬೇಕೆಂದು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಅವರೇನೂ ನಮಗೆ ಸಜೆಸ್ಟ್ ಮಾಡಲಿಲ್ಲ. ಲೇಬರ್‌ನ್ನು ಪಾರ್ಲಿಮೆಂಟರಿಗೆ ಲಿಂಕ್ ಮಾಡಿ, ಫಾರೆಸ್ಟ್‌ನ್ನು ತೆಗೆದು ಎಕ್ಸೈಜ್‌ನ ಜೊತೆ ಲಿಂಕ್ ಮಾಡಿ ಚರ್ಚೆಗೆ ಹಾಕಿ ಎಂದು ನಾವೇ ಹೇಳಿದ್ದೇವೆ. ಇವು ಬಹಳ ಮುಖ್ಯವಾದ ಡಿಮ್ಯಾಂಡ್ಸಗಳು.

ಅಧ್ಯಕ್ಷರು.— ಮಾನ್ಯ ಖರ್ಗೆಯವರೇ, ನಾನು ಒಪ್ಪುತ್ತೇನೆ. ಈವತ್ತು ಯಾರೂ ಇಲ್ಲವೆಂದು ಹೇಳಿ ಮಾನ್ಯ ಶ್ರೀನಿವಾಸ್‌ರವರಿಗೆ ೬೦ ನಿಮಿಷಗಳ ಕಾಲ ಮಾತನಾಡಲು ಅವಕಾಶವನ್ನು ಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಇಲ್ಲಿ ಹೆಸರು ಕೊಟ್ಟ ಮೇಲೆ ಅವರು ಕುಳಿತುಕೊಂಡಿರಬೇಕು. ಈಗ ಮಾನ್ಯ ಬಸವಲಿಂಗಪ್ಪನವರೇ ತಾವು ಮಾತನಾಡಿ.

ಶ್ರೀ ಬಿ. ಬಸವಲಿಂಗಪ್ಪ.- ಮಾನ್ಯ ಅಧ್ಯಕ್ಷರೇ, ನಾನು ಮಾತನಾಡುತ್ತೇನೆ. ನಾನು ಮಾತನಾಡಿದಮೇಲೆ ಮಾತನಾಡಬೇಕೆಂದಿರುವ ನಮ್ಮ ಸದಸ್ಯರಿಗೂ ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು.—ಹೆಸರುಕೊಟ್ಟಮೇಲೆ, ಅವರ ಹೆಸರನ್ನು ಕೂಗಿದಾಗ ಅವರು ಇಲ್ಲದಿದ್ದರೆ ಏನು ಮಾಡಲು ಸಾಧ್ಯ? ಅವರು ಹೊರಗೆ ಹೋಗಿ ಆಬ್ಸೆಂಟ್ ಆದರೆ......

ಶ್ರೀ ಎಸ್.ಆರ್ ಬೊಮ್ಮಾಯಿ.—ಮಾನ್ಯ ಸದಸ್ಯರು ಮಧ್ಯಾಹ್ನ ಊಟಮಾಡಿ ಮಲಗುವುದಕ್ಕೆ ಹೋದರೆ ಹೇಗೆ? ನಾವು ಯಾವಾಗಲೂ ಸಭೆಯಲ್ಲಿ ಇರಬೇಕು.

ಶ್ರೀ ಬಿ.ಬಸವಲಿಂಗಪ್ಪ.—ಅದನ್ನು ನಾನು ಒಪ್ಪುತ್ತೇನೆ. ನಾನು ಅದಮೇಲೆ ಮಾನ್ಯ ಸದಸ್ಯರು ಯಾರು ಹೆಸರು ಕೊಟ್ಟಿದ್ದಾರೆ ಅವರಿಗೆ ಅವಕಾಶವನ್ನು ಕೊಡಿ ಎಂದು ಹೇಳುತ್ತೇನೆ.

ಅಧ್ಯಕ್ಷರು.—ಇಲ್ಲಿ ರಾಜಿ ಸಂಧಾನದ ಪ್ರಶ್ನೆ ಇಲ್ಲ ಆಕಡೆಯವರಾಗಲಿ ಈ ಕಡೆಯವರಾಗಲಿ ಹೆಸರು ಕರೆದಾಗ ಸಭೆಯಲ್ಲಿ ಇರಬೇಕು. ಸಭೆಯಲ್ಲಿ ಇಲ್ಲದೆ ಮತ್ತೆ ಬಂದು ನಾಳೆ ಅವಕಾಶ ಕೊಡಿ ಎಂದು ಕೇಳುವುದು ಸರಿಯಲ್ಲ. ಮಾನ್ಯ ರಾಣೆಯವರೇ ನಿಮಗೆ ನಾಳೆ ಡಿಮ್ಯಾಂಡ್ ಮೇಲೆ ಮಾತನಾಡಲು ನಿಮಗೆ ಅವಕಾಶವನ್ನು ಕೊಡುತ್ತೇನೆ. ಈಗ ಮಾನ್ಯ ಬಸವಲಿಂಗಪ್ಪನವರು ಮಾತನಾಡಲಿ.

(ಕೆಲವು ಸದಸ್ಯರು ಎದ್ದುನಿಂತು ಇದೇ ಡಿಮ್ಯಾಂಡ್‌ಮೇಲೆ ಮಾತನಾಡಲು ಅವಕಾಶ ಮಾಡಿಕೊಡಬೇಕೆಂದು ಕೇಳುತ್ತಿದ್ದರು)

ಅಧ್ಯಕ್ಷರು.—ಈವಾಗ ಮಾನ್ಯ ಬಸವಲಿಂಗಪ್ಪನವರು ಮಾತನಾಡಲಿ. ಆಮೇಲೆ ನೋಡೋಣ. ಕರೆದಾಗ ಇಲ್ಲದೇ ಇರುವುದು ಒಂದು ಕೆಟ್ಟ ಸಂಪ್ರದಾಯ. ರೂಲ್ಸ್ ಪ್ರಕಾರವಾಗಿ ಹೋಗೋಣ. ರೂಲ್ಸ್‌ನಲ್ಲಿ ಏನಿದೆ ಎಂದರೆ ಹೆಸರು ಕೊಟ್ಟವರು ಹಾಜರು ಇರಬೇಕು. ಕರೆದಾಗಬರದಿದ್ದರೆ ಮುಂದೆ ಕರೆಯಬಾರದೆಂದು ರೂಲ್ಸ್‌ನಲ್ಲಿ ಇದೆ. ಹೊಸಬರಿಗೆ ಅವಕಾಶವನ್ನು ಕೊಡಬೇಕು. ಇಲ್ಲವೆಂದು ಹೇಳುವುದಿಲ್ಲ. ಮಾನ್ಯ ಬಸವಲಿಂಗಪ್ಪನವರೇ ತಾವು ಮಾತನಾಡಲು ಆರಂಭಿಸಿ.

ಶ್ರೀ ಬಿ. ಬಸಲಿಂಗಪ್ಪ.—ಏನಾದರೂ ಒಂದು ಸಲಹೆಯನ್ನು ಅವರಿಗೆ ಕೊಡಿ.

ಶ್ರೀ ಬಿ. ರಾಚಯ್ಯ.—ಈ ರೀತಿ ಮಾನ್ಯ ಸದಸ್ಯರು ಕಾಲಹರಣ ಮಾಡಬಾರದು. ಯಾರೇ ಸದಸ್ಯರಿರಲಿ ಕರೆದಾಗ ಇರಬೇಕು. ಕರೆದಾಗ ಇಲ್ಲದೆ ಈಗ ಬಂದು ಗಲಾಟೆ ಮಾಡಿದರೆ ಹೇಗೆ ಸಾಧ್ಯವಾಗುತ್ತದೆ ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಕರೆದಾಗ ಕೆಲವು ಜನ ಸದಸ್ಯರು ಆಬ್ಸೆಂಟ್ ಇರಲಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ. — ನಿನ್ನೆ ಮಾನ್ಯ ಸಿ.ಬೈರೇಗೌಡರು ಆಬ್ಸೆಂಟ್ ಇದ್ದರು ಆದರೂ ಅವರನ್ನು ಮತ್ತೆ ಏತಕ್ಕೆ ಕರೆದಿರಿ? ಆಬ್ಸೆಂಟ್ ಇದ್ದವರನ್ನು ಕರೆದಾಗ......

ಶ್ರೀ ಪಿ. ಎಸ್. ರಾಣೆ.—ಮಾನ್ಯ ತುಂಗಳ್ ಅವರು ನಿನ್ನೆ ಇರಲಿಲ್ಲ. ಅವರಿಗೆ ಇವತ್ತು ಅವಕಾಶ ಮಾಡಿಕೊಟ್ಟಿರಿ. ಅದೇ ರೀತಿ ನಮಗೂ ಕೊಡಿ.

ಅಧ್ಯಕ್ಷರು.—ನಿನ್ನೆ ಯಾರು ಆಬ್ಸೆಂಟ್ ಇದ್ದರು ಅವರು ಯಾರಿಗೂ ಕೊಟ್ಟಿಲ್ಲ.

ಶ್ರೀ ಪಿ. ಎಸ್. ರಾಣೆ.—ನಾನು ಬೇಕಾದರೆ ಲಿಸ್ಟ್ ಕೊಡುತ್ತೇನೆ......

(ಗೊಂದಲ)

ಶ್ರೀ ಜೆ. ಹೆಚ್. ಪಟೇಲ್.—ನಾನು ಒಂದು ಕ್ರಿಯಾಲೋಪವನ್ನು ಎತ್ತುತ್ತೇನೆ. ತಾವು ಮಾನ್ಯ ಬಸವಲಿಂಗಪ್ಪನವರನ್ನು ಮಾತನಾಡುವುದಕ್ಕೆ ಕರೆದಿದ್ದೀರಿ. ತಾವು ಕರೆದಿರತಕ್ಕ ಸದಸ್ಯರು ಈಲ್ಡ್ ಆಗದೆ ಹೋದರೆ ನಮ್ಮ ಕಡೆಯಿಂದ ತಾವು ಮಾತನಾಡುವ ಹಾಗೆ ಇಲ್ಲ. ಆದರೆ ಈಗ ಅವರು ಈಲ್ಡ್ ಆಗಿರುವುದರಿಂದ ಆ ಕಡೆಯವರು ಯಾರಿಗೂ ಮಾತನಾಡುವುದಕ್ಕೆ ಬಿಡುತ್ತಿಲ್ಲ. They are trying to hold the whole House to ransom. What is this ? They don't allow him to speak. There is a limit to this kind.

(ಗೊಂದಲ)

ಶ್ರೀ ಜೆ. ಹೆಚ್. ಪಟೇಲ್.—ಯಾವುದಕ್ಕೂ ಒಂದು ಮಿತಿ ಬೇಕು. ನಾಯಕರು ಹೇಳಿದರೂ ಕೇಳುವುದಿಲ್ಲ, ನೀವು ಹೇಳಿದರೂ ಕೂರುವುದಿಲ್ಲ ಅಂದರೆ ಏನು ? ಇದೇನು ಸದನವೋ ಅಥವಾ ಏನು ?

(ಗೊಂದಲ)

ಅಧ್ಯಕ್ಷರು.—ಮಾನ್ಯ ಬಸವಲಿಂಗಪ್ಪನವರೇ, ಈಗ ನೀವು ಮಾತನಾಡಿ, ಆಮೇಲೆ ನೋಡೋಣ

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಮಾತನಾಡುವವರಿಗೆ ೨ ತಾಸು ಅವಕಾಶ ಮಾಡಿಕೊಡಿ. ಒಬ್ಬೊಬ್ಬರು ೧೦–೧೦ ನಿಮಿಷ ಮಾತನಾಡುತ್ತಾರೆ.

ಶ್ರೀ ಜೆ. ಹೆಚ್. ಪಟೇಲ್.—ಅವರು ಮಾತನಾಡುವುದಕ್ಕೆ ಬಿಡುತ್ತಿಲ್ಲ, ಅವರೇ ಮಾತನಾಡಲಿ ಬಿಡಿ.

ಅಧ್ಯಕ್ಷರು.— ಈ ತರಹ ಪ್ರೊಸೀಡಿಂಗ್ಸ್‌ಗೆ ಹರಕತ್ತು ಮಾಡುವುದು ಸರಿಯಲ್ಲ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ನಮಗೆ ಏತಕ್ಕೆ ಸಮಯ ಕೊಡುವುದಿಲ್ಲ ಹೇಳಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ದಯವಿಟ್ಟು ಕುಳಿತುಕೊಳ್ಳಿ, ಒಂದು ಮಾತು ಹೇಳುತ್ತೇನೆ. ಸಮಯದ ಬಗ್ಗೆ ನಿನ್ನೆಯೇ ನಿರ್ಣಯ ಮಾಡಿದ್ದೇವೆ. ಆ ಪ್ರಕಾರ ಇವತ್ತು ನಾನು ಉತ್ತರಿಸ ಬೇಕಾಗಿತ್ತು. ನಿಮಗೆ ಹೆಚ್ಚು ಸಮಯ ಕೊಡುವುದು ಇದ್ದರೆ ಆಲೋಚಿಸಿ ಹೇಳೋಣ. ಅದು ಬೇರೆ ವಿಚಾರ. ಆದರೆ ಅಧ್ಯಕ್ಷರು ಕರೆದಾಗ ಗೈರುಹಾಜರಿದ್ದು........

(ಗೊಂದಲ)

ಒಂದು ನಿಮಿಷ, ಆಮೇಲೆ ಒಬ್ಬೊಬ್ಬರೇ ಹೇಳಿ. ನಾನು ಮಾತನಾಡಿದ ಮೇಲೆ ಮಾತನಾಡಿ. ವಾದ ಮಾಡೋಣ.

(ಗೊಂದಲ)

ಅಧ್ಯಕ್ಷರು.—ಇದು ಸರಿಯಲ್ಲ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಎಲ್ಲರೂ ಒಂದೇ ಸಾರಿ ಎದ್ದರೆ ಬಹಳ ಕಷ್ಟವಾಗುತ್ತದೆ. ಒಬ್ಬೊಬ್ಬರೇ ಮಾತನಾಡಿ. ಸಭಾಪತಿಯವರು ಹೇಳುತ್ತಾರೆ, ನೀವು ಕರೆದಾಗ ಇರಲಿಲ್ಲವೆಂದು. ದಯವಿಟ್ಟು ಇಲ್ಲಿ ಇರುವುದನ್ನು ಕಲಿಯಿರಿ. ಸಭಾಪತಿಯವರು ಕರೆದಾಗ ಇರಲಿಲ್ಲ ಎನ್ನುವುದನ್ನು ನೋಟ್ ಮಾಡಿರುತ್ತಾರೆ. ಯಾವುದೋ ಕಾರಣಕ್ಕೆ ಆಬ್ಸೆಂಟ್ ಆಗಿದ್ದೇವೆಂದು ಹೇಳಿ, ಪುನಃ

ಅವಕಾಶ ಕೊಡಿ ಎಂದು ಕೇಳಿ. ಆ ರೀತಿ ಅವಕಾಶ ಮಾಡಿಕೊಡಿ ಎಂದು ಕೇಳುವುದು ಬೇರೆ. ಆದರೆ, ಸಭಾಪತಿಯವರು ಹೇಳಿದ್ದನ್ನೇ ವಿರೋಧಿಸುವುದು ಸರಿಯಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಒಂದು ಏನೆಂದರೆ, ತಾವು ಹೆಸರು ಕರೆದಾಗ ಆಬ್ಸೆಂಟ್ ಇದ್ದ ಕೆಟಗರಿ ಒಂದು. ಇನ್ನೊಂದು ಹೆಸರು ಕೊಟ್ಟಿದ್ದರೂ ಅವರಿಗೆ ಅವಕಾಶ ಇಲ್ಲ ಅವರನ್ನು ಕರೆದಿಲ್ಲ. ಮಾನ್ಯ ಪ್ರತಾಪಚಂದ್ರ ಶೆಟ್ಟಿ ಮತ್ತು ಮಾನ್ಯ ಸೊರಕೆಯವರು ಇದ್ದಾರೆ, ಅವರು ಆಬ್ಸೆಂಟ್ ಇರಲಿಲ್ಲ. ಅವರ ಹೆಸರು ಪಟ್ಟಿಯಲ್ಲಿ ಇದೆ. ಅದರ ಪ್ರಕಾರ ಅವರು ಅವಕಾಶ ಕೊಡಿ ಎಂದು ಕೇಳುತ್ತಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಬಸವಲಿಂಗಪ್ಪನವರು ಈಗ ಮಾತನಾಡಲಿ.

ಅಧ್ಯಕ್ಷರು.—ಈಗ ಮಾನ್ಯ ಬಸವಲಿಂಗಪ್ಪನವರನ್ನು ಕರೆದಿದ್ದೇನೆ. ನೀವು ಮಾತನಾಡಿ ಮಾನ್ಯ ಬಸವಲಿಂಗಪ್ಪನವರೇ,

೫-00 ಪಿ. ಎಂ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇಲ್ಲಿ ನೀರಾವರಿ ಮತ್ತು ರೆವಿನ್ಯೂ ಎರಡು ಪ್ರಮುಖವಾದ ಬೇಡಿಕೆಗಳು. ಇದರ ಮೇಲೆ ಅನೇಕ ಜನರು ಭಾಗವಹಿಸುವವರಿದ್ದರು. ನಾನು ಕೂಡ ಭಾಗವಹಿಸ ಬೇಕೆಂದು ಇದ್ದೆ. ಆದರೆ ಅವಕಾಶ ಕಡಿಮೆ ಆಗಿದೆ. ಇರಿಗೇಷನ್ ಮತ್ತು ರೆವಿನ್ಯೂ ಅನ್ನು ಜೊತೆಗೆ ಸೇರಿಸಿದ್ದೀರಿ. ದಯಮಾಡಿ ಪರಿಶೀಲನೆ ಮಾಡಿ. ರೆವಿನ್ಯೂ ಇಲಾಖೆ ಮೇಲೆ ಚರ್ಚೆ ಆದದ್ದೇ ಇಲ್ಲ ಎಂದು ಹೇಳಿದರೂ ಸರಿಯೇ.

ಅಧ್ಯಕ್ಷರು.—ಬಿಸಿನೆಸ್ ಅಡ್ವೈಸರಿ ಕಮಿಟಿ ತೀರ್ಮಾನದ ಪ್ರಕಾರ ಹೋಗಬೇಕೋ ಬೇಡವೊ?

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ಬಹಳ ತಾಂತ್ರಿಕವಾಗಿ ನೋಡಬಾರದು. ನಮ್ಮ ವಿಪ್ ಏನು ವಿನಂತಿ ಮಾಡಿಕೊಳ್ಳುತ್ತಾರೆ ಅವರು ಒಂದು ಲಿಸ್ಟ್ ಕೊಟ್ಟಿದ್ದಾರೆ. ಅದರ ಪ್ರಕಾರ ಮಾನ್ಯ ಪ್ರತಾಪ ಚಂದ್ರ ಶೆಟ್ಟರು ಹೆಸರು ಕೊಟ್ಟಿದ್ದಾರೆ. ಅವರು ಮಾತನಾಡಬೇಕು. ಚರ್ಚೆಯನ್ನು ತಡ ಮಾಡಬೇಕೆಂದು ಅವರು ಹೇಳುತ್ತಿಲ್ಲ. ಈಗ ಮಾನ್ಯ ಬಸವಲಿಂಗಪ್ಪನವರು ಮಾತನಾಡಬೇಕು. ಆಮೇಲೆ ನಮಗೂ ಅವಕಾಶ ಕೊಡಿ ಎಂದು ಕೇಳುತ್ತಿದ್ದಾರೆ. ಮತ್ತೆ ಈ ಬೇಡಿಕೆ ಬಗ್ಗೆ ಸದನದಲ್ಲಿ ನಿಜವಾಗಿ ನ್ಯಾಯಯುತವಾದ ಚರ್ಚೆ ಆಗಿದೆಯೇ ಎಂದು ನೋಡಬೇಕಲ್ಲಾ. ರೆವಿನ್ಯೂ, ಮೇಜರ್ ಇರಿಗೇಷನ್, ಪ್ಲಾನಿಂಗ್ ಇಂಥ ಮುಖ್ಯವಾದ ಇಲಾಖೆಯನ್ನು ಜೊತೆಯಲ್ಲಿ ಸೇರಿಸಿ ಡಿಸ್ಕಷನ್ ಆಗಿದ್ದು ನನ್ನ ಅನುಭವದಲ್ಲಿ ಇಲ್ಲ. ಇವತ್ತು ಎಲ್ಲಾ ಒಟ್ಟು ಸೇರಿಸಿದ್ದೀರಿ. ಈ ರೀತಿ ಮಾಡುವುದೂ ಒಂದೇ, ಗಿಲೆಟಿನ್ ಮಾಡುವುದೂ ಒಂದೇ. ಆದ್ದರಿಂದ ದಯಮಾಡಿ ಇದರ ಬಗ್ಗೆ ತಾಂತ್ರಿಕವಾಗಿ ನೋಡಬಾರದು ಎಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ನಿನ್ನೆ ದಿವಸ ಅವರು ಲಿಸ್ಟ್ ಕೊಟ್ಟಿದ್ದಾರೆ. ನಿನ್ನೆ ಕೊಟ್ಟಿದ್ದ ಹೆಸರುಗಳು ಮುಗಿಯ ಬೇಕೋ ಬೇಡವೋ ? ಅದು ಮುಗಿಯಂದೆ ಇವತ್ತಿನದನ್ನು ಹೇಗೆ ತೆಗೆದುಕೊಳ್ಳಬೇಕು ?

ಶ್ರೀ ಎಂ. ವೀರಪ್ಪ ಮೊಯಿಲಿ.—ಅವರು ಇನ್ನೂ ಯುವಕರು. ಉತ್ಸಾಹದಿಂದ ಮಾತನಾಡು ವುದಕ್ಕೆ ಬರುವಾಗ.........

ಅಧ್ಯಕ್ಷರು.—ನಿನ್ನೆ ಕೊಟ್ಟಿದ್ದು ಮುಗಿಯಬೇಕೋ ಬೇಡವೊ ? ನಿನ್ನೆ ಕೊಟ್ಟಿದ್ದು ಪೂರ್ತಿ ಆಗದೇ ಇದ್ದುದರಿಂದ ಮಾನ್ಯ ಕೆ. ಎಚ್. ಶ್ರೀನಿವಾಸ್ ಅವರಿಗೆ ಇವತ್ತು ಅವಕಾಶ ಕೊಟ್ಟಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಬಸವಲಿಂಗಪ್ಪನವರು ಮಾತನಾಡಿದಮೇಲೆ ಅವಕಾಶ ಕೊಡಿ. ಅರ್ಧ ಮುಕ್ಕಾಲು ಗಂಟೆ ಚರ್ಚೆಯ ಅವಧಿಯನ್ನು ಜಾಸ್ತಿ ಮಾಡಿ.

ಅಧ್ಯಕ್ಷರು.—ನಿನ್ನೆ ಆಬ್ಸೆಂಟ್ ಇದ್ದವರಿಗೆ ನಾನು ಅವಕಾಶ ಕೊಡುವುದಿಲ್ಲ. ಹೊಸಬರಿಗೆ ನಾಳೆ ಅವಕಾಶ ಕೊಡುತ್ತೇನೆ. ನಾಳೆ ೧೦ ಗಂಟೆಗೆ ಚಾಲೂ ಮಾಡೋಣ. ಒಂದು ತಾಸು ಕೂಡೋಣ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾಳೆ ೧೦ ಗಂಟೆಗೆ ಕೂಡೋಣ. ಒಂದು ಗಂಟೆ ಚರ್ಚೆ ಆಗಲಿ. ಆಮೇಲೆ ಉತ್ತರ ಕೊಡುತ್ತೇನೆ.

ಅಧ್ಯಕ್ಷರು.—೧೦ ಗಂಟೆಗೆ ಚರ್ಚೆ, ೧೧ಕ್ಕೆ ಉತ್ತರ, ಹೊಸಬರ ಹೆಸರು ಕೊಡಿ. ಅವಕಾಶ ಕೊಡುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗ ಐದು ಗಂಟೆ ಆಗಿದೆ. ಕ್ಯಾಬಿನೆಟ್ ಮೀಟಿಂಗ್ ಇದೆ. ಆದ್ದರಿಂದ ದಯವಿಟ್ಟು ಸಭೆಯನ್ನು ಮುಂದಕ್ಕೆ ಹಾಕಬೇಕು ಎಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ನಾಳೆ ಹೊಸಬರಿಗೆ ಅವಕಾಶ ಕೊಡುತ್ತೇನೆ. ನಾಳೆ ಚರ್ಚೆ ಮುಂದುವರೆಯುತ್ತದೆ ನಂತರ ಉತ್ತರ ಇದೆ. ಈಗ ಸಭೆ ಮುಕ್ತಾಯವಾಗಿ ನಾಳೆ ಬೆಗ್ಗೆ ೧೦ಳಿ ಗಂಟೆಗೆ ಪುನಃ ಸೇರುವುದು.

ಸದನವು ಸಂಜೆ ೫ ಗಂಟೆ ೩ ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ ದಿನಾಂಕ ೨೫-೫-೮೮ ರಂದು ಬೆಳಿಗ್ಗೆ ೧೦ ಗಂಟೆಗೆ ಸೇರಲು ನಿಶ್ಚಯಿಸಿತು.